ಅಧ್ಯಕ್ಷರು: ನಾಳೆ ಮಾಡೋಣ. ಪ್ರತ್ಯೇಕವಾಗಿ ಕೊಡುತ್ತೇನೆ ಸುಮ್ಮನಿರಿ. ಅವಕಾಶ ಕೊಟ್ಟರಾಯಿತಲ್ಲ?

3) ವಿಷಯ : ಮರಳು ಗಣಿಗಾರಿಕೆ ಕಾಯಿದೆ ರಾಜ್ಯದಲ್ಲಿ ಜಾರಿಯಲ್ಲಿದ್ದರೂ ಅಕ್ರಮ ಮರಳು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂ.ಗಳ ನಷ್ಟವಾಗುತ್ತಿರುವ ಬಗ್ಗೆ.

***

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ): ಮಾನ್ಯ ಅಧ್ಯಕ್ಷರೆ, ಈಗೇನು ನೀರಿನ ಸಮಸ್ಯೆ ಬಗ್ಗೆ ಇಷ್ಟು ಹೊತ್ತು ಚರ್ಚೆಯಾಗಿದೆ, ಅದರ ಜೊತೆಗೆ ಸಾರ್ವಜನಿಕರಿಗೆ ಮತ್ತೊಂದು ಜ್ವಲಂತ ಸಮಸ್ಯೆ ಎಂದರೆ ಮರಳಿನ ಸಮಸ್ಯೆ. ಇವತ್ತು ಮರಳಿನ ಸಮಸ್ಯೆ ರಾಜ್ಯದಲ್ಲಿ ಕೃತಕವಾಗಿ ಸೃಷ್ಟಿಯಾಗಿದೆಯೋ ಅಥವಾ ಮಾಫಿಯಾಗಳ ಹಿಡಿತಕ್ಕೆ ಒಳಗಾಗಿ ಇಂತಹ ಸಮಸ್ಯೆ ಉದ್ಭವವಾಗಿದೆಯೋ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಮೊನ್ನೆ ಸದನದಲ್ಲಿ ಕೃಷಿ ಜಮೀನಿನಲ್ಲಿ ಕೃಷಿಯೇತರ ಉದ್ದೇಶಕ್ಕೆ ಅಂದರೆ ಕಲ್ಲು ಗಣಿಗಾರಿಕೆ ಬಿಲ್ ಪಾಸ್ ಮಾಡಿಕೊಂಡರು.

ಅಧ್ಯಕ್ಷರು: ಇದು ಯಾರಿಗೆ ಬರುತ್ತದೆ? ಮುಖ್ಯಮಂತ್ರಿಗಳಿಗೆ ಬರುತ್ತದೆಯೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇದನ್ನು PWD ಯವರಿಗೆ ಕೊಟ್ಟು ಬಿಟ್ಟಿದ್ದಾರೆ.

ಅಧ್ಯಕ್ಷರು: ಹೌದಾ, ಮಹದೇವಪ್ಪನವರಾ? ಅವರನ್ನು ಕರೆಸಿರಿ. ಆಮೇಲೆ ನಾನು ಒಂದು ಹೇಳುತ್ತೇನೆ. ನೀವು ಒಂದು ನಿಮಿಷ ತಡೆಯಿರಿ, ನಿನ್ನೆ 7.30 ಗಂಟೆಯವರೆಗೆ ಸದನ ನಡೆಯಿತು. ನಮ್ಮ ಅಜೆಂಡಾದಲ್ಲಿ ಏನೇನು ವಿಚಾರಗಳಿರುತ್ತವೆಂಬುದು ತಮಗೆಲ್ಲರಿಗೂ ಗೊತ್ತಿರುತ್ತದೆ. ಆದರೆ ಕೆಲವರು ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಮಂತ್ರಿಗಳು ಇಲ್ಲ ಎಂಬ ಕಾರಣಕ್ಕಾಗಿ

ನಾವು ಮುಂದೆ ಹಾಕಬೇಕಾಗಿ ಬರುತ್ತದೆ. ಹೀಗಾದರೆ ಪರಿಸ್ಥಿತಿ ಏನು? ವರ್ಷಾನುಗಟ್ಟಲೆ ನಡೆಸುತ್ತೇವೆನು? ಅದನ್ನು ಗಮನದಲ್ಲಿಟ್ಟುಕೊಳ್ಳಿ. ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಉತ್ತರ ಯಾರು ಕೊಡುತ್ತಾರೆ ಎಂದು ಗೊತ್ತಿಲ್ಲ. ಏಕೆಂದರೆ PWD ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು: ಅವರು ಬರುತ್ತಾರೆ, ನೀವು ಪ್ರಾರಂಭಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಪ್ರಾರಂಭಿಸಬೇಕಾದರೆ ಅವರೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು.

ಅಧ್ಯಕ್ಷರು: Whip ಅವರೆ, ಅವರು ಎಲ್ಲಿ ಹೋಗುತ್ತಾರೆ? ಆ ಸದನದಲ್ಲಿರಬೇಕು, ಇಲ್ಲ ಇಲ್ಲಿ ಹಾಜರಿರಬೇಕು. ನಾನು list ತರಿಸುತ್ತೇನೆ. ಎಷ್ಟು ಜನ ministers ಅಲ್ಲಿದ್ದಾರೆ? ಈಗಲೇ list ತರಿಸುತ್ತೇನೆ.

ಶ್ರೀ ಅಶೋಕ್ ಎಂ. ಪಟ್ಟಣಶೆಟ್ಟಿ: ಮಾನ್ಯ ಅಧ್ಯಕ್ಷರೆ, ಆ ಸದನದಲ್ಲಿದ್ದಾರೆ. Lawministerರವರು Bill introduce ಮಾಡುತ್ತಿದ್ದಾರೆ. ಅವರು, PWD minister ಇಬ್ಬರೂ ಬರುತ್ತಿದ್ದಾರೆ. ಹೇಳಿ ಕಳುಹಿಸಿದ್ದೇನೆ. ಎರಡು ನಿಮಿಷ ಬರುತ್ತಾರೆ.

ಅಧ್ಯಕ್ಷರು: ಎಲ್ಲಕ್ಕಿಂತ ಹೆಚ್ಚಾಗಿ, ನಾನು ಈಗ list ತರಿಸುತ್ತೇನೆ. ಅಲ್ಲಿ ಇಲ್ಲದಿದ್ದರೆ ಇಲ್ಲಿ ಇರಬೇಕಲ್ಲವೇ? ಇಲ್ಲೂ ಇರುವುದಿಲ್ಲ. ಅಲ್ಲೂ ಇರುವುದಿಲ್ಲವೆಂದರೆ? ಅದಕ್ಕೆ ಸ್ವಲ್ಪ ಛಾಟಿ ಬೀಸಿ. ನಾನು ಮೊನ್ನೆ list ತರಿಸಿದ್ದೆ, ಅದಕ್ಕೇ ಹೇಳುತ್ತಿರುವುದು. ಕುಮಾರಸ್ವಾಮಿಯವರೆ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಕೋರ್ಟ್ ಆದೇಶ ಎಂದು ಹೇಳಿ. 2011ರಲ್ಲಿ ಹೊಸದಾಗಿ ಮರಳು ನೀತಿಯನ್ನು ಏನು ಅನುಷ್ಠಾನಕ್ಕೆ ತಂದರು, ಇಲ್ಲಿ ನಿರಂತರವಾದ ದಂಧೆ ನಡೆಯುತ್ತಿದೆ. ರಾಜ್ಯದಲ್ಲಿ ಸಾರ್ವಜನಿಕರು ಮನೆ ಕಟ್ಟುವುದಕ್ಕೆ ಮರಳು ದೊರೆಯದ ಪರಿಸ್ಥಿತಿ ನಿರ್ಮಾಣ ಮಾಡಿಕೊಂಡಿದ್ದೇವೆ. 5,000/- ದಿಂದ 10,000/- ರೂ.ಗಳಿಗೆ

ದೊರೆಯುತ್ತಿದ್ದ ಒಂದು ಲೋಡ್ ಮರಳು ಇಂದು 30,000/-, 50,000/-, 60,000/- ಕೊಟ್ಟರೂ ದೊರಕದ ಪರಿಸ್ಥಿತಿ. ಮೈಸೂರಿನಲ್ಲಿ 50,000/- ರೂ. ಕೊಟ್ಟರೂ ಸಿಗುತ್ತಿಲ್ಲ, ಎಲ್ಲಾ ಮರಳು ಕೇರಳಕ್ಕೆ ಹೋಗುತ್ತಿದೆ. ನನ್ನ ಪ್ರಶ್ನೆ ಏನೆಂದರೆ, ಇದೊಂದು ಕಲ್ಲು ಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ರೀತಿಯಲ್ಲಿ ರಾಜ್ಯಸರ್ಕಾರದ ಈ ನೀತಿಗಳು ಎಲ್ಲೋ ಒಂದು ಕಡೆ ಲಾಬಿಗೆ ಪ್ರೋತ್ಸಾಹ ಕೊಡುವ ವಾತಾವರಣ ನಿರ್ಮಾಣವಾಗಿದೆ. ಸರ್ಕಾರದ ಕಾಮಗಾರಿಗಳಿಗೂ ಇಂದು ಮರಳು ದೊರಕುತ್ತಿಲ್ಲ. ಹಲವಾರು ಭಾಗದಲ್ಲಿ ಸರ್ಕಾರದ ಯೋಜನೆಗಳನ್ನು ಶಂಕುಸ್ಥಾಪನೆ ಮಾಡಿ, ಮರಳಿನ ಅಭಾವದಿಂದ ಆ ಕಾಮಗಾರಿಗಳು ಕುಂಠಿತವಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೊನ್ನೆಯೂ ಮುಖ್ಯಮಂತ್ರಿಗಳು ಯಾವುದೋ ವಿಷಯ ಪ್ರಸ್ತಾಪ ಮಾಡುವಾಗ ಹೇಳುತ್ತಿದ್ದರು. ನಮ್ಮ ರಾಜ್ಯದಲ್ಲಿ ಸುಮಾರು 23 ದಶಲಕ್ಷ ಟನ್ ಮರಳಿನ ಅವಶ್ಯಕತೆ ಏನಿದೆ, ಮಾರುಕಟ್ಟೆಯಲ್ಲಿ ಅಂದಾಜು ಸುಮಾರು ಎಂಟೂವರೆ ದಶಲಕ್ಷ ಟನ್ ಸಿಗುತ್ತಿದೆ. ಮರಳು ಒಂದು ರೀತಿಯ sellers market ಆದಂತಾಗಿದೆ. ಮರಳು ಸಾಗಾಣಿಕೆಗೆ ಸಾರ್ವಜನಿಕರಿಗೆ, ಲಾರಿ ಮಾಲೀಕರು ಮಾರಾಟ ಮಾಡಲು ಸಾಗಾಣಿಕೆ ಮಾಡುವುದೇನಿದೆ, ಅವರು ನೆಮ್ಮದಿ ಜೀವನ ಮಾಡದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ನಿರ್ಮಾಣವಾಗಿದೆ. ಲಾರಿ ಮಾಲೀಕರು ಒಂದು ರೀತಿಯಲ್ಲಿ ಕ್ರಿಮಿನಲ್‌ಗಳು ಎಂಬ ವಾತಾವರಣ ನಿರ್ಮಾಣವಗಿದೆ. 2011 ರಲ್ಲಿ ಬಂದ ಮರಳು ನೀತಿ PWD ಇಲಾಖೆಯ ನೇತೃತ್ವದಲ್ಲಿ ನಿರ್ವಹಣೆ ಮಾಡುವ ನೀತಿಗಳನ್ನು ಅನುಷ್ಠಾನಕ್ಕೆ ಏನು ತಂದಿದ್ದಾರೆ, ಬಹುಶಃ ಈ ಹೊಸ ನೀತಿಯಲ್ಲಿ ಅದಕ್ಕೆ ರಕ್ಷಣೆ ಕೊಡುವುದಕ್ಕೆ ಅಪ್ಪ – ಅಮ್ಮ ಇಬ್ಬರೂ ಇಲ್ಲ ಎನ್ನುವುದು ನನ್ನ ಅಭಿಪ್ರಾಯ. ಅಂಥ ಒಂದು ಪರಿಸ್ಥಿತಿ ಈ ನಾಡಿನಲ್ಲಿ ನಿರ್ಮಾಣವಾಗಿದೆ. ಇಲ್ಲಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ, ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿಕೊಂಡರು. ಇವತ್ತು ಆ ಜಿಲ್ಲಾಧಿಕಾರಿಗಳ ಸಮಿತಿಯಲ್ಲೂ ಯಾವುದೇ ರೀತಿಯಾಗಿ ಕೆಲಸಗಳ ನಿರ್ವಹಣೆ ಮಾಡುವುದು ಸಾಧ್ಯವಾಗಿಲ್ಲ. ನಮ್ಮ ರಾಜ್ಯದಲ್ಲಿ ಈ ಒಂದು ಮರಳುಗಾರಿಕೆಗೆ ಸುಮಾರು 1540 ಬ್ಲಾಕ್‌ಗಳನ್ನು

ಗುರುತಿಸಿದರು. ಆದರೆ 1540 ಬ್ಲಾಕ್‌ಗಳನ್ನು ಗುರುತಿಸಿದರೂ ಇವತ್ತು 640 ಬ್ಲಾಕ್‌ಗಳಿಗೆ ಮಾತ್ರ ಕೆಲಸ ನಿರ್ವಹಿಸುವ ಒಂದು ಜವಾಬ್ದಾರಿಯನ್ನು ಕೊಟ್ಟುಕೊಂಡಿದ್ದಾರೆ. ಇಲ್ಲಿ ಮರಳು ನಿಕ್ಷೇಪವನ್ನು ಸರಿಯಾಗಿ ಎಷ್ಟು ಪ್ರಮಾಣದಲ್ಲಿ ಸಿಗಬಹುದೆನ್ನುವ ಒಂದು ಸರ್ವೇ ಕಾರ್ಯಗಳನ್ನು ಇದುವರೆವಿಗೂ ಮಾಡಿಲ್ಲ. 2012ರಲ್ಲಿ ಸುಪ್ರೀಂ ಕೋರ್ಟ್ ಒಂದು ಆದೇಶ ಕೊಟ್ಟಿತು. ಅದರ ಹಿನ್ನೆಲೆಯಲ್ಲಿ ಇವತ್ತು ಯಾವ environment clearance ತೆಗೆದುಕೊಳ್ಳುವುದು ಕಡ್ಡಾಯ ಮಾಡಿದರು? ಈ ಒಂದು environment clearanceಗೆ 50 ಹೆಕ್ಟೇರ್ ಪ್ರದೇಶದ ಒಳಗಿದ್ದರೆ ರಾಜ್ಯದ State Environment Impact Assessment, ಅಂದರೆ ರಾಜ್ಯ ಪರಿಸರ ಇಲಾಖೆಯವರು ಇಲ್ಲಿ ಪರ್ಮಿಷನ್ ಕೊಡಬೇಕು. 50 ಹೆಕ್ಟೇರ್‌ಗಿಂತ ಜಾಸ್ತಿ ಇದ್ದರೆ ಕೇಂದ್ರ ಪರಿಸರ ಇಲಾಖೆಯವರಿಗೆ ರೆಕ್ಮಂಡ್ ಮಾಡಿ ಅಪ್ಲೈ ಮಾಡಿ ಇ.ಸಿ ಪಡೆಯಬೇಕು.

ಅಧ್ಯಕ್ಷರು: ಸುಪ್ರೀಂ ಕೋರ್ಟ್ ತೀರ್ಮಾನನಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಸುಪ್ರೀಂ ಕೋರ್ಟ್‌ನವರು ಕೊಟ್ಟಿರುವುದು. ಆದರೆ ನಮ್ಮ ರಾಜ್ಯದ PWD ಇಲಾಖೆಗೆ ಕಳೆದ 3 ವರ್ಷಗಳಿಂದ ಈ ಒಂದು ಇ.ಸಿ ಕೊಡುವುದಕ್ಕೆ ಆಗಿಲ್ಲ.

ಅಧ್ಯಕ್ಷರು: ಈಗ ಈ ಸುಪ್ರೀಂ ಕೋರ್ಟ್ ತೀರ್ಮಾನ ಮಾಡಿದೆಯಲ್ಲಾ, ಆ ಸುಪ್ರೀಂ ಕೋರ್ಟ್ ತೀರ್ಮಾನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮದೇ ಆದ ಒಂದು ಕಾನೂನು ಮಾಡದಿರುವ ಕಾರಣಕ್ಕಾಗಿ ಮಾಡಿದೆಯೋ ಅಥವಾ ಅವರಿಗೆ inherent power ಇದೆಯೋ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ ಇತ್ತೀಚಿನ ದಿನಗಳಲ್ಲಿ, ವರ್ಷಗಳಲ್ಲಿ ಏನಾಗಿದೆ ಎಂದರೆ, ಇವತ್ತು ಕೇಂದ್ರ ಸರ್ಕಾರವಿರಲಿ, ರಾಜ್ಯ ಸರ್ಕಾರಗಳಿರಲಿ ಸರ್ಕಾರ ನಡೆಸುವವರಿಗೆ ಎಲ್ಲೋ ಒಂದು ಕಡೆ ಹಿಡಿತ ಹೊರಟು ಹೋಗಿದೆ ಎಂದು ನನಗನಿಸುತ್ತದೆ. ಇವತ್ತು ಕೋರ್ಟ್‌ಗಳು ಕೊಡುವ ಆದೇಶಗಳ ಸಬೂಬು ಹೇಳಿಕೊಂಡು, ಕೋರ್ಟಿನವರು

ಯಾವರೀತಿಯಲ್ಲಿ ತೀರ್ಪುಗಳನ್ನು ಕೊಡುತ್ತಾರೋ ಗೊತ್ತಿಲ್ಲ. ಅವರೇನೂ ವೈಜ್ಞಾನಿಕವಾಗಿ ವಿಷಯಗಳನ್ನೆಲ್ಲ ಕ್ರೋಢೀಕರಿಸಿ ಕೋರ್ಟಿನವರು ಕೊಡುವ ಆದೇಶಗಳೋ ಇವಲ್ಲ ಅವರು ಕೊಟ್ಟಂಥ ಇಂಥ ಆದೇಶಗಳಿಂದಲೇ ಈ ಒತ್ತುವರಿ ಪ್ರಕರಣದಲ್ಲಿ ಈ ರೀತಿ ಆಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: Minor minerals ಯಾರಿಗೆ ಸೇರಿದ್ದು? Major minerals ಕೇಂದ್ರ ಸರ್ಕಾರಕ್ಕೆ ಸೇರುತ್ತದೆ. Minor minerals ಸಂಪೂರ್ಣ ಅಧಿಕಾರ ರಾಜ್ಯ ಸರ್ಕಾರದ Mines and Geology Departmentಗೆ ಸೇರುತ್ತದೆ.

ಶ್ರೀ ವೈ.ಎಸ್.ವಿ.ದತ್ತಾ: ನೀವು ಕೇಳಿರುವುದು ಕರೆಕ್ಟ್, ಅದರಲ್ಲಿ major minerals and minor minerals ಎಂದು ಮಾಡಿದ ಮೇಲೆ, sand is miner mineral. It comes under the jurisdication of the State Government. ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದು. ಆದರೆ ಸುಪ್ರೀಂ ಕೋರ್ಟ್ ಏಕೆ ಮಧ್ಯಪ್ರದೇಶ ಮಾಡಿತೆಂದರೆ, ಶಾಸಕಾಂಗ ನಿಷ್ಕ್ರಿಯೆಯಾದಾಗ ನ್ಯಾಯಾಂಗ active ಆಗುತ್ತದೆ.

ಅಧ್ಯಕ್ಷರು: ಹಾಗಾದರೆ ಅದನ್ನು ಹೇಳಿ, ಅದಕ್ಕೇ ನಾನು ಕೇಳಿದ್ದು.

ಶ್ರೀ ವೈ.ಎಸ್.ವಿ.ದತ್ತಾ: ಅದನ್ನೇ ನಾನು ಹೇಳುತ್ತಿರುವುದು. ನಾನು ಹೇಳಿದರೆ ಬೇರೆ ಒಂದು ಬಣ್ಣ ಬರುತ್ತದೆ, ನೀವು ಹೇಳಿದರೆ ನ್ಯಾಯಾಧೀಶರು ಹೇಳಿದಂತಾಗುತ್ತದೆ. ನೀವು ಹೇಳಿದರೆ ನ್ಯಾಯಾಧೀಶರು, ನಾವು ಹೇಳಿದರೆ ಹೇಗಪ್ಪ ಎಂದು ಮುಜುಗರಪಟ್ಟುಕೊಳ್ಳುತ್ತೇವೆ.

ಅಧ್ಯಕ್ಷರು: ಎಲ್ಲಾ ಒಂದೇ, ನೀವು ಹೇಳಿದ್ದೂ ಒಳ್ಳೆಯದೇ.

ಶ್ರೀ ಸಿ.ಟಿ. ರವಿ: ಹಾಗಲ್ಲ ದತ್ತಾತ್ರರವರೆ, ನೀವು ಹೇಳಿದರೆ argument, ಅವರು(ಅಧ್ಯಕ್ಷರು) ಹೇಳಿದರೆ judgment.

ಅಧ್ಯಕ್ಷರು: ಅದಕ್ಕೆ ನಿಮ್ಮ ನಾಯಕರು ಚರ್ಚೆ, ಮಾಡುವ ಸಂದರ್ಭದಲ್ಲಿ, ನಾವು ಕಾನೂನು ಮಾಡದಿರುವ ಕಾರಣಕ್ಕಾಗಿ, ಅವರು ಹೇಳುವ ಪರಿಸ್ಥಿತಿ ಬಂದಿದೆ, ಹೀಗೆ ಮಾಡಿ ಹೀಗಾಗಿದೆ ಎಂದು ಹೇಳಿ.

ಶ್ರೀ ವೈ.ಎಸ್.ವಿ.ದತ್ತಾ: ನೀವು ಹೇಳಿದ್ದು judgment. ನಾನು ಹೇಳಿದ್ದು argument.

ಅಧ್ಯಕ್ಷರು: ಇಲ್ಲಿ ಗ್ರಹಚಾರಕ್ಕೆ ಕಂದಾಯ ಸಚಿವರೂ ಇರುವುದಿಲ್ಲ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಆ ಕಡೆ ಭದ್ರಾ ಈ ಕಡೆ ತುಂಗಾ ಎರಡೂ ಕಡೆ ಹರಿಯುತ್ತದೆ. ಶೃಂಗೇರಿಯಲ್ಲಿ ಒಂದು ಅಂಗಡಿಯಲ್ಲಿ ಬೋರ್ಡ್ ಹಾಕಿದ್ದಾರೆ, ಆ ಬೋರ್ಡಿನಲ್ಲಿ interesting ಏನೆಂದರೆ, 'ಇಲ್ಲಿ ಚೀಲದಲ್ಲಿ ಮರಳು ಸಿಗುತ್ತದೆ' ಎಂದು. ಆ ಕಡೆ ತುಂಗಾ ಈ ಕಡೆ ಭದ್ರಾ ಹರಿಯುತ್ತದೆ ಮಧ್ಯದಲ್ಲಿ ದಿನಸಿ ಅಂಗಡಿಯಲ್ಲಿರುವ ಬೋರ್ಡಿನಲ್ಲಿ 'ಇಲ್ಲಿ ಮರಳು ಚೀಲದಲ್ಲಿ ಸಿಗುತ್ತದೆ' ಎಂದು ಇದೆ. ಇದು ರಾಜ್ಯದ ಸ್ಥಿತಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ ಯಾವುದಕ್ಕೂ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಸುಮ್ಮನೇ ನಾವು ಬಾಯಿಬಡಿದುಕೊಳ್ಳಬೇಕಷ್ಟೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇದು ರಾಜ್ಯದ ಜ್ವಲಂತ ಸಮಸ್ಯೆ, ಸಿಮೆಂಟ್, ಕಬ್ಬಿಣ ಅಂಗಡಿಯವರೆಲ್ಲಾ ಖಾಲಿ ಹೊಡೆಯುತ್ತಿದ್ದಾರೆ, ಬಹಳ ದೊಡ್ಡ ಸಮಸ್ಯೆ, ಸಂಬಂಧಪಟ್ಟವರು ಇದ್ದರೆ ಅನುಕೂಲವಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ಸರ್, ಇದಕ್ಕೆ concerned ಒಬ್ಬ ಮಂತ್ರಿಯಾದರೂ ಇಲ್ಲ, Forest, PWD, ಮುಖ್ಯಮಂತ್ರಿ – ಈ ಮೂರು ಜನಕ್ಕೆ ಬರುತ್ತದೆ, ಒಬ್ಬರೂ ಇಲ್ಲ, ಹೊಳೆ side ಎಲ್ಲಾ forest ಎಂದು ಹೇಳುವುದಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆ, ಗೃಹ ಇಲಾಖೆ, PWD ಇಲಾಖೆ, ಗಣಿಗಾರಿಕೆ ಇಲಾಖೆ ಮತ್ತು ಅರಣ್ಯ ಹೀಗೆ ಐದು ಇಲಾಖೆಗಳಿಗೆ ಸೇರಿದ ಸಮಸ್ಯೆ ಇದಾಗಿದೆ, ಐದು ಇಲಾಖೆಯ ಮಂತ್ರಿಗಳೂ ಇಲ್ಲ. ನಾವು ಯಾರ ಮುಂದೆ ಈ ಸಮಸ್ಯೆಯನ್ನು ಹೇಳೋಣ?

ಶ್ರೀ ಬಸವರಾಜ ಬೊಮ್ಮಾಯಿ: ಈಗ ಮರಳಿನ ಪರಿಸ್ಥಿತಿ ಹೇಗಾಗಿದೆ ಎಂದರೆ, ಕಂದಾಯ, ಗೃಹ, PWD, ಗಣಿಗಾರಿಕೆ ಮತ್ತು ಅರಣ್ಯ ಈ ಐದೂ ಇಲಾಖೆಗಳಿಗೆ ಸಿಕ್ಕು ದ್ರೌಪದಿಯ ಪರಿಸ್ಥಿತಿಯಾಗಿದೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ನನಗೆ ಮಾಹಿತಿ ಇದೆ, ಐದೂ ಜನ ಸಚಿವರು ಪಂಚನಾಮೆಗೆ ಹೋಗಿದ್ದಾರೆ.

ಅಧ್ಯಕ್ಷರು: ಅಲ್ಲಿ[ಮೇಲ್ಮನೆಯಲ್ಲಿ] 8 ಜನರಿದ್ದಾರೆ, ಇಲ್ಲಿ 10 ಜನರಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತಾ: ಈ ವಿಷಯಕ್ಕೆ ಸಂಬಂಧಪಟ್ಟವರು ಒಬ್ಬರೂ ಇಲ್ಲ, ಹೋಗಲಿ officers ಇದ್ದಾರಾ? ಅಧಿಕಾರಿಗಳಿದ್ದಾರೋ ಏನೋ ಗೊತ್ತಿಲ್ಲ. ಗೃಹ ಇಲಾಖೆಯ ಕಾರ್ಯದರ್ಶಿ ಇರಬೇಕು, ಕಂದಾಯ ಇಲಾಖೆ, ಗಣಿಗಾರಿಕೆ ಇಲಾಖೆ ಕಾರ್ಯದರ್ಶಿಗಳಿರಬೇಕು. ಅಧಿಕಾರಿಗಳು ಇದ್ದಾರೆಯೇ? ಹೇಳಿ, ಅಧಿಕಾರಿಗಳನ್ನು ಕರೆಸಲಿ.

ಅಧ್ಯಕ್ಷರು: ಈ ಸದನ ಗ್ರಹಿಸಿದೆ, ಅದನ್ನು ಸರ್ಕಾರ ಗಮನಿಸಿದೆ ಎಂದುಕೊಳ್ಳೋಣ.

ಶ್ರೀ ವೈ.ಎಸ್.ವಿ.ದತ್ತಾ: ಆಗಲೇ ನೀವು ಒಂದು ಪ್ರಶ್ನೆಯನ್ನು ಕೇಳಿದಿರಿ, ನೀವು ಕೇಳಿ ಎಂದಿರಿ, ಸರ್ಕಾರಕ್ಕೆ ಕೇಳಿದರೆ ನೀವು ಕೊಡುತ್ತೀರಾ ಎಂದಿರಿ, ಸರ್ಕಾರ ಕೊಡುತ್ತೇವೆಂದರು, ನಾವು ಜನಕ್ಕೆ ಹೋಗಿ ತೃಪ್ತಿಕರವಾದ ಉತ್ತರ ಸಿಕ್ಕಿದೆ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ದೇವರೇ ಕಾಪಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ 2011ರಲ್ಲಿ ಹೊಸ ನೀತಿಯನ್ನು ತಂದರು.

ಅಧ್ಯಕ್ಷರು: ಆ ನೀತಿಯಿಂದ ಆದ ತೊಂದರೆಗಳೇನು? ಅದರಲ್ಲಿ ಜನರಿಗೆ ತೊಂದರೆಯಾಗದಿರುವಂತೆ ಮಾಡುವುದಕ್ಕೆ ಏನು ಬದಲಾವಣೆಯಾಗಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದನ್ನೂ ಹೇಳುತ್ತೇನೆ, ಲಾಭ ಯಾರ್‍ಯಾರು ತೆಗೆದುಕೊಂಡಿದ್ದಾರೆ, ಯಾರ ಕೈಯಲ್ಲಾದರೂ ರಾಜೀನಾಮೆ ಕೊಡಿಸಬೇಕೆಂದರೆ ಕೊಡಿಸುತ್ತೀರಾ? ಈಗ ಲಾಭ ತೆಗೆದುಕೊಂಡವರದು ಒಂದು, ಇದಕ್ಕೆ solution ಹೇಳೋಣ. ಲಾಭ ತೆಗದುಕೊಂಡವರು ರಾಜೀನಾಮೆ ಕೊಡಬೇಕು, ರಾಜೀನಾಮೆ ಕೊಡುವುದಕ್ಕೆ ಸದನ ಒಪ್ಪಿಗೆ ಕೊಡುತ್ತದೆಯೇ ಎನ್ನುವುದು.

ಶ್ರೀ ಎಂ.ಟಿ. ಕೃಷ್ಣಪ್ಪ: ಯಾರ್‍ಯಾರು ಸಚಿವರಿದ್ದಾರೆ, ಅವರ ಮಕ್ಕಳೇ ಮಾಫಿಯ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಇವತ್ತು ಇಲ್ಲಿ ಇಡುವ ಕೆಲವು ಮಾಹಿತಿಗಳು, ದಾಖಲೆಗಳಿಂದ ಇವತ್ತು ಈ ಸರ್ಕಾರ ಈ ರಾಜ್ಯದಲ್ಲಿ ಇದೆಯಾ ಎಂದು ಪ್ರಶ್ನೆ ಮಾಡಬೇಕಾಗಿರುವುದು. ಈ ಪಾಲಿಸಿಯಿಂದಾಗಿರುವ ಡ್ಯಾಮೇಜ್, ಈ ಪಾಲಿಸಿಯಿಂದ ಇವತ್ತು ರಾಜ್ಯದಲ್ಲಿ ಮರಳು ಸಿಗದಿರುವುದು, ಇಷ್ಟೇ ಅಲ್ಲ, ಇವತ್ತು ಈ ರಾಜ್ಯದಲ್ಲಿ ಲೂಟಿ ನಡೆಯುತ್ತಿದೆ ಪ್ರಾಮಾಣಿಕವಾಗಿ ಸರ್ಕಾರ ನಡೆಸುತ್ತೇವೆ, ಸ್ವಚ್ಛ ಆಡಳಿತ ಕೊಡುತ್ತೇವೆ ಎಂದು ಹೇಳಿಕೆ ಕೊಟ್ಟು ಅಧಿಕಾರಕ್ಕೆ ಬಂದರಲ್ಲ, ಇವತ್ತು ನಿರಂತರವಾಗಿ ಯಾವರೀತಿ ಕೇರಳಕ್ಕೆ ಮರಳು ಹೋಗುತ್ತಿದೆ? ಕೇರಳದಿಂದ trip sheets ತರಿಸಲಾಗಿದೆ, ಇಲ್ಲಿ ನಮ್ಮ ಚೆಕ್‌ಪೋಸ್ಟ್‌ನಲ್ಲಿ ಹೋಗಿರುವುದಕ್ಕೆ ಅದರ ಮಾಹಿತಿ ಇಲ್ಲ. ಕೇರಳದಲ್ಲಿ ಒಂದೊಂದು ಲೋಡಿಗೆ ದುಡ್ಡು ಕಟ್ಟುತ್ತಾರೆ, ದಂಡ ಹಾಕಿದ್ದಾರೆ, ಇವತ್ತು ಇದಕ್ಕೆ ಈ ಸರ್ಕಾರದಲ್ಲಿ ಯಾರು ಜವಾಬ್ದಾರಿ ತೆಗೆದುಕೊಳ್ಳುವವರು? ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ? ನಮ್ಮ ರಾಜ್ಯದಲ್ಲಿ ಮರಳು ಇಲ್ಲ. ಯಾವ

ಪುರುಷಾರ್ಥಕ್ಕೆ ಇವತ್ತು ಈ ಸದನದಲ್ಲಿ ನೀವು ಈ ಕಾನೂನುಗಳನ್ನು ಕೆಲವು ರಚನೆ ಮಾಡುತ್ತೀರಿ, ನನಗೆ ಗೊತ್ತಿಲ್ಲ 2011ರಲ್ಲಿ ಒಂದು ಕಾನೂನು ತಂದರು.

ಅಧ್ಯಕ್ಷರು: ಅದಕ್ಕೆ ನಾನು ಒಂದು ಸಾರಿ ಹೇಳಿದೆ. ಹಳೆಯ ಸರ್ಕಾರದ್ದೇ ಇವರು ಮುಂದುವರೆಸಬೇಕಾದರೆ ಇವರ ಸರ್ಕಾರ ಏಕೆ ಬೇಕಾಗಿತ್ತು? ಎಂದು

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ತಪ್ಪಾಗಿದ್ದರೆ ಇವರು ಸರಿಪಡಿಸಿಕೊಳ್ಳಬೇಕು. ಆ ಕಾನೂನು ಇಟ್ಟುಕೊಂಡು ಇವರು ದರೋಡೆ ಮಾಡಿ ಎಂದು ಹೇಳಿದ್ದೇವಾ ನಾವು? ಅವರು ಈ ಕಾನೂನು ತಂದರು ಎಂದು ಈ ಸರ್ಕಾರಕ್ಕೆ ದರೋಡೆ ಮಾಡಿ ಎಂದು ಹೇಳಿದ್ದೇವಾ?

ಅಧ್ಯಕ್ಷರು: ಒಳ್ಳೆಯ ಚರ್ಚೆ ಮಾಡಿ ಬಹಳ ಜನ ಮಕ್ಕಳು ಬಂದು ಕೂತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಆಯಿತು ಅದ್ಯಕ್ಷರೆ, ನಮ್ಮಂತಹ ಜನ ಪ್ರತಿನಿಧಿಗಳ ಕೆಲಸ ಏನು ನಡೆಯುತ್ತಿದೆ ಎಂದು ಮಕ್ಕಳಿಗೂ ಗೊತ್ತಾಗಲಿ. 660 ಬ್ಲಾಕ್‌ನ E.C. ಇಲ್ಲಿಯವರೆಗೆ ಏನು ಪಡೆದುಕೊಂಡರು ಈ ಕೆಲಸ ನಿರ್ವಹಿಸಬೇಕಾದರೆ ಇಲ್ಲಿ PWDಗೆ, ಅರಣ್ಯ ಇಲಾಖೆಗೆ, ರೆವಿನ್ಯೂ ಇಲಾಖೆಗೆ ಒಬ್ಬರಿಗೊಬ್ಬರಿಗೆ co-ordination ಇಲ್ಲ. ಇಲ್ಲಿ ನಾವು ಈ ಸದನದಲ್ಲಿ ಕಾನೂನು ತಂದೆವು. ಈ ಜಿಲ್ಲಾ ಡಿ.ಸಿ. ಅಧ್ಯಕ್ಷತೆಯಲ್ಲಿ ಉಸ್ತುವಾರಿ ಏನು ಕೊಡುತ್ತೇವೆ ಆ ಕಮಿಟಿ ಒಳಗೆ, Deputy Commissioner of the District Chairman, Chief Executive Officer of the Zilla Panchayath - Member, Police Officer incharge of the District, the Executive Engineer, Public Works Department, the Deputy Conservator of Forest, the Regional Transport Officer, the Officer incharge of the Karnataka Pollution Control Board, the Tahasildar of the respective region, the Deputy Director, Senior Geoligist Department, Mines & Geology ಇವರು ಇಷ್ಟು ಜನ ಈ ಒಂದು ಕಮಿಟಿ ಸದಸ್ಯರುಗಳಿದ್ದಾರೆ. ಈ ಕಮಿಟಿ ಏನು ರಚನೆ ಆಗಿದೆ?

ಅಧ್ಯಕ್ಷರು: ಅವರ powers and functions ಏನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈ ಪರ್ಮಿಷನ್ ಕೊಡತಕ್ಕಂಥದ್ದಕ್ಕೆ ಡಿ.ಸಿ. ಅಧ್ಯಕ್ಷತೆಯಲ್ಲಿ ಒಂದು Single Window Taskforce Committee ಎಂದು ರಚನೆ ಮಾಡಿರತಕ್ಕದ್ದು ಈ Mining activities ಗೆ ಏನು recommendation ಮಾಡಬೇಕು ಉಸ್ತುವಾರಿ ಏನು ನೋಡಿಕೊಳ್ಳಬೇಕು ಈ ಎಲ್ಲದರ ಜವಾಬ್ದಾರಿಯನ್ನು ಆಯಾಯ ಜಿಲ್ಲೆಯಲ್ಲಿ ಆ ಕಮಿಟಿಗೆ ಕೊಡುತ್ತಾರೆ. ಇವತ್ತು ಈ ಕಮಿಟಿ ಮುಂದೆ ಜಿಲ್ಲಾಧಿಕಾರಿ ಮುಂದೆ ಪ್ರತಿಯೊಂದು ಜಿಲ್ಲೆಯಲ್ಲಿ ಅರ್ಜಿ ಹಾಕಿಕೊಂಡಿರುವವರು ಸಾವಿರಾರು ಅರ್ಜಿಗಳನ್ನು ಹಾಕಿದ್ದಾರೆ. ಈ ಸರ್ಕಾರದಲ್ಲಿ ಜಿಲ್ಲಾ ಕಮಿಟಿ ಮುಂದೆ mining activities ಗೆ ಅರ್ಜಿ ಸಲ್ಲಿಸಿರತಕ್ಕಂತಹ ಸಂಖ್ಯೆ ಎಷ್ಟು? ಇದರ ಬಗ್ಗೆ ಡಿ.ಸಿ.ಗಳಿಗಾಗಲಿ, ಸರ್ಕಾರಕ್ಕಾಗಲಿ, ಎಷ್ಟು ಅರ್ಜಿ ಬಾಕಿ ಇವೆ ಎಂದು ಏನಾದರೂ ಮಾಹಿತಿ ಇದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ದಯವಿಟ್ಟು ಇದನ್ನು note ಮಾಡಿಕೊಳ್ಳಬೇಕು. ಇವತ್ತು ಎಷ್ಟು ಅರ್ಜಿ ಹಾಕಿಕೊಂಡಿದ್ದಾರೆ? ಎಷ್ಟು ಬಾಕಿ ಇದೆ? ಎಷ್ಟು clearance ಮಾಡಿದ್ದೀರಿ ಎನ್ನತಕ್ಕಂಥದ್ದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಯಾರು note ಮಾಡಿಕೊಳ್ಳುತ್ತಿದ್ದೀರಿ? Note ಮಾಡಿಕೊಳ್ಳಿರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮ್ಮ ಪರಿಸ್ಥಿತಿ ಏನಾಗಿದೆ, ಎಂದರೆ ಮಾಧ್ಯಮದ ಸ್ನೇಹಿತರು ನಾವು ಹೇಳಿದ್ದು ಬರೆಯುವುದಿಲ್ಲ. ಇಲ್ಲಿ ಸರ್ಕಾರವೂ ನಮ್ಮ ಮಾತನ್ನು ಕೇಳುವುದಿಲ್ಲ. ನಮ್ಮ ಪರಿಸ್ಥಿತಿ ಈ ಮಟ್ಟದಲ್ಲಿದೆ.

ಶ್ರೀ ಕೃಷ್ಣ ಭೈರೇಗೌಡ: ಅಧಿಕಾರಿಗಳು note ಮಾಡಿಕೊಳ್ಳುತ್ತಿದ್ದಾರೆ ಅಧ್ಯಕ್ಷರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಏನು ಕ್ರಮ ತೆಗದುಕೊಳ್ಳುತ್ತೀರಿ ನೋಡೋಣ. ಹೊಸ ನೀತಿಗಳು ಕೋರ್ಟಿನವರು ಕೊಡತಕ್ಕಂತಹ ಆದೇಶಗಳಿಂದ ಅಕ್ರಮವಾಗಿ ಇಂತಹ activities ಮಾಡುವವರಿಗೆ, ಗಣಿಗಾರಿಕೆ

ಮಾಡುವವರಿಗೆ ಹಬ್ಬ ಆಗಿ ಹೋಗಿದೆ. ಈ ಕೋರ್ಟಿನವರು ಕೊಡತಕ್ಕಂತಹ ಆದೇಶಗಳು ಪುಣ್ಯಾತ್ಮರು ಕೂತಿದ್ದಾರೆ ನಾವು ಮಾತನಾಡುವ ಹಾಗಿಲ್ಲ. ಮಾತನಾಡಿದರೆ ನಮ್ಮನ್ನು ಇನ್ನು ಯಾವುದರಲ್ಲಿ ಸಿಕ್ಕಿ ಹಾಕಿಸುತ್ತಾರೋ ಗೊತ್ತಿಲ್ಲ. ಸತ್ಯ ಹೇಳುವುದಕ್ಕೆ ಹೋದರೆ ನಮಗೆ ಕಷ್ಟ. ಇಲ್ಲಿ ಈ permit ಇಲ್ಲದೇ ಸಾಗಿಸತಕ್ಕಂತಹ ಮರಳು ಎನಿದೆ, ಇಲ್ಲಿ river sand, filter sand ಕೆಲವು ಭಾಗಗಳಲ್ಲಿ ಮರಳು ದೊರಕಲಿಲ್ಲವೆಂದು filter sand activities ಯಾವ ರೀತಿ ನಡೆಯುತ್ತಿದೆ ಒಳ್ಳೊಳ್ಳೆಯ ಫಲವತ್ತಾದ ತೆಂಗಿನ ತೋಟಗಳಲ್ಲಿ ನಡೆಯುತ್ತಿದೆ.

ಶ್ರೀ ಚಂದ್ರಶೇಖರ ಮಾಮನಿ: ನಮ್ಮಲ್ಲಿ PWD ಯವರು cubic ಏನು ಗುರುತಿಸಿದ್ದಾರೆ ಯಾವ cubic ನಲ್ಲಿ ಗುರುತಿಸಿ 1500 cubic ನಲ್ಲಿ sand ಸಿಗುತ್ತದೆ ಎಂದು ಗುರುತಿಸಿ ಅದರಲ್ಲಿ 650 functioning ಮಾಡುತ್ತಿವೆ. ಯಾವುದರಲ್ಲಿ ಉಸುಕು ಸಿಗುತ್ತದೆ ಅದನ್ನು ತಂದು filter ಮಾಡುವುದು ನೀರು ಹಾಕಿ ಮಾಡುತ್ತಾರೆ. ರೈತರು ಹೊಲಕ್ಕೆ ನೀರು ಹಾಕುವುದು ಬಿಟ್ಟು ಇದನ್ನು wash ಮಾಡುತ್ತಿದ್ದಾರೆ. ಸವದತ್ತಿ ತಾಲ್ಲೂಕು ತಗ್ಗಾಳು ಗ್ರಾಮದಲ್ಲಿ ಒಂದು ತಿಂಗಳಿಗೆ washing ಮಾಡುವುದು ನೀನು ಇಲ್ಲಿ ಏಕೆ wash ಮಾಡುತ್ತೀಯ ಏಕೆ sale ಮಾಡುತ್ತೀಯ ಎಂದು ಕೇಳುವವರಿಲ್ಲ. ಒಂದು ತಿಂಗಳಿಗೆ 1.20,000 ಪಂಚಾಯತಿ ಮಾಜಿ ಛೇರ್ಮನ್ ಇವತ್ತು collect ಮಾಡುತ್ತಿದ್ದಾನೆ. ಮುನವಳ್ಳಿಯಲ್ಲಿ ಪೊಲೀಸ್ ಸ್ಟೇಷನ್ ಮುಂದೆಯೇ ಗ್ರಾಮ ಪಂಚಾಯತಿಯ ಹಿಂದಿನ ಅಧ್ಯಕ್ಷರುಗಳು ಕೂತು ಒಂದು ಟ್ರಕ್‌ಗೆ 25,000 ದಿಂದ 30,000 ಯಾರು ಕೊಡುತ್ತಾರೆ ಅವನು slip ಕೊಟ್ಟರೆ ಗಾಡಿ pass ಮಾಡುತ್ತಾರೆ. ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: River bed sand ದ್ದು ಒಂದು ಭಾಗ filter sand ದ್ದು, ದಯವಿಟ್ಟು ಸರ್ಕಾರ ಇದೆಯೇ? ಜಿಲ್ಲಾ ಉಸ್ತುವಾರಿ ಕೊಟ್ಟಿರತಕ್ಕಂತಹ ಪುಣ್ಯಾತ್ಮರು ಏನು ಮಾಡುತ್ತಿದ್ದಾರೆ? ತೆಂಗಿನ ತೋಟದಲ್ಲಿ ಈ filter sand ತಯಾರು ಮಾಡಿಕೊಂಡು ಯಾರು ಹೇಳುವವರು

ಕೇಳುವವರು ಇಲ್ಲ. ಈ ಪರಿಸ್ಥಿತಿ ಇದೆ. ಯಾರು ಜವಾಬ್ದಾರಿ ತೆಗೆದುಕೊಳ್ಳುವವರು?

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ಒಬ್ಬನ ownershipನ ಜಮೀನು ಅದು. ಖಾತೆ ಜಮೀನು. ಅವನು ಬೇರೆಯವರಿಗೆ ಕೊಟ್ಟುಕೊಂಡಿದ್ದರೆ ಏನು ಮಾಡಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಆ ರೈತನ ಪರಿಸ್ಥಿತಿ ಅವನಿಗೆ ಅವನು ಬೆಳೆಯುವ ಬೆಳೆಗೆ ಸರಿಯಾಗಿ ನೀರು ಕೊಡುವುದಿಲ್ಲ.

ಅಧ್ಯಕ್ಷರು: ಅವನು ಅನುಮತಿ ಪಡೆದು ಹಾಕುತ್ತಿದ್ದಾನಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅವನು ಅನುಮತಿ ಪಡೆದುಕೊಳ್ಳುತ್ತಾರೆ. ಅದು ıllegal ಆಗಿ ನಡೆಯುತ್ತಿದೆ. ಸರ್ಕಾರ ಅನುಮತಿ ಕೊಡಬೇಕಲ್ಲ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಧ್ಯಕ್ಷರೆ, ಅದನ್ನು ಬಳಕೆ ಮಾಡಿದರೆ ಕಟ್ಟಡ ಏನಾಗುತ್ತದೆ, ಕಟ್ಟಡದ ಮೇಲೆ ಬಹಳ ದೊಡ್ಡ ಅಪಾಯ. ಆ sand illegal. ಇದು ಅತ್ಯಂತ ಅಪಾಯಕಾರಿ.

(ಇದಕ್ಕೆ ಸಂಬಂಧಪಟ್ಟ ಘೋಟೋ ದೃಶ್ಯಾವಳಿಯನ್ನು ಅಧ್ಯಕ್ಷರಿಗೆ ಕಳುಹಿಸಿ ಕೊಡಲಾಯಿತು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ತಾವು ಇದನ್ನು ನೋಡಿ. ಇಂತಹ ಪರಿಸ್ಥಿತಿ ಇವತ್ತು ಈ ರಾಜ್ಯದಲ್ಲಿದೆ. ನಿಮ್ಮ ಸರ್ಕಾರದವರು ಇದನ್ನು ನೋಡಿ. ಇಂತಹ ಪರಿಸ್ಥಿತಿ ಇವತ್ತು ಈ ರಾಜ್ಯದಲ್ಲೇನಿದೆ? ಇದಕ್ಕೆ ಮರಳು ನೀತಿ ತಂದಿದ್ದೀರಾ? ಯಾರಿಗೆ ಹೇಳಬೇಕು ನಾವು? ಅಧ್ಯಕ್ಷರೆ, ಇಂತಹ ಮರಳು ಬಳಕೆ ಮಾಡಿ ಈ ರಾಜ್ಯದಲ್ಲಿ ಕಟ್ಟಿರುವ ಕಟ್ಟಡಗಳ ಪರಿಸ್ಥಿತಿ ಏನಾಗಬಹುದು ಎಂದು ಮಾನ್ಯ ಮಟ್ಟಣ್ಣಯ್ಯನವರು ಹೇಳಿದ ಹಾಗೆ ಯೋಚನೆ ಮಾಡಬೇಕು. 2011ರಲ್ಲಿ Manufacture sand (M-Sand) ಎಂದು ಹೇಳಿ ಇನ್ನೊಂದು ಜಾರಿಗೆ ತಂದರು. ಯಾವ ಒಂದು ಕಲ್ಲು ಗಣಿಗಾರಿಕೆಯಿಂದ raw material ಅನ್ನು M-

Sand ಎಂದು ಮಾಡಿದರು. ಮಹಾರಾಷ್ಟ್ರದಲ್ಲಿ ಚೆನ್ನಾಗಿ ಮಾಡುತ್ತಿದ್ದಾರೆಂದು ಹೇಳುತ್ತಾರೆ, ಅಲ್ಲಿಯ policy ಏನಿದೆ ಎಂದು ನನಗೆ ಗೊತ್ತಿಲ್ಲ. ಈ policy ತಂದು ಮೂರು ವರ್ಷ ಆಯಿತು ಇದಕ್ಕೆ permission ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಇವತ್ತು atleast ಇದಕ್ಕಾದರೂ ಪ್ರೋತ್ಸಾಹ ಕೊಟ್ಟಿದ್ದರೆ ಸ್ವಲ್ಪ ನಿಮಗೆ ಈ ಮರಳಿನ ಕೊರತೆ ನೀಗಿಸುವುದಕ್ಕೆ ಅವಕಾಶ ಇತ್ತು. ಇಲ್ಲಿ ಯಾವೊಂದು Forest Department, Revenue Department, Mines and Geology ಇಲಾಖೆಯಿಂದ M-Sand ಗೆ NOC ಕೊಡಬೇಕು. ಇಲ್ಲಿ ಯಾರೂ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಎಲ್ಲಾ ರೀತಿಯ ತೊಂದರೆ ಕೊಡುವುದಕ್ಕೆ ಎಷ್ಟು ಬೇಕೋ ಅಷ್ಟು ಈ ಇಲಾಖೆಗಳು ಕೆಲಸ ನಿರ್ವಹಿಸುತ್ತಿವೆ. ಇಲ್ಲಿ ಇವನ್ನು regulation ಮಾಡತಕ್ಕಂಥದ್ದಕ್ಕೆ ಡಿ.ಸಿ.ಗಳಾಗಲಿ, ಕಮಿಟಿಗಳಾಗಲಿ ಇಲ್ಲಿಯವರೆಗೆ ತಲೆ ಕೆಡಿಸಿಕೊಂಡಿಲ್ಲ. ಈ Taskforce Meeting ಮಾಡತಕ್ಕಂತಹ ಕೆಲಸವನ್ನೂ ಇಲ್ಲಿಯವರೆಗೆ ನಿರ್ವಹಿಸುತ್ತಿಲ್ಲ. ನನಗಿರತಕ್ಕಂತಹ ಮಾಹಿತಿ, ಒಂದು ಜಿಲ್ಲೆಯಲ್ಲಿ Taskforce Committee Meeting ನಲ್ಲಿ approve ಮಾಡಿ ಇನ್ನೂ ಅದನ್ನು permission ಕೊಡದೇ ಜಿಲ್ಲಾಧಿಕಾರಿಗಳು ಇಟ್ಟುಕೊಂಡಿದ್ದಾರೆ. ಪ್ರಾಮಾಣಿಕವಾಗಿ ಕೆಲಸ ಮಾಡುವವರು ಅವರೆಲ್ಲ.

ಅಧ್ಯಕ್ಷರು: ಏಕೆ ಅದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಏಕೆಂದರೆ ಅವರಿಗೆ ಬೇಕಲ್ಲ.

ಅಧ್ಯಕ್ಷರು: ಏನು ಬೇಕು ರೀ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈ ರಾಜ್ಯದಲ್ಲಿ ಎಂತಹ ಕೆಟ್ಟ ಪರಿಸ್ಥಿತಿಗೆ ಬಂದಿದ್ದೇವೆಂದರೆ, ರಾಜಾರೋಷವಾಗಿ ಹೇಳುತ್ತಾರೆ. ಅಧಿಕಾರಿಗಳು ಯಾವ ಮಟ್ಟಕ್ಕೆ ಹೇಳುತ್ತಾರೆಂದರೆ, ನಾವು ಈ ಹುದ್ದೆಗೆ ಬರಬೇಕಾದರೆ 50 ಲಕ್ಷದಿಂದ ಒಂದು ಕೋಟಿ ರೂ. ಕೊಟ್ಟು ಬಂದಿದ್ದೇವೆ. ನಾವು ದುಡ್ಡು ವಾಪಸ್ ಪಡೆಯುವುದು ಹೇಗೆ? ಇದು ಪರಿಸ್ಥಿತಿ ಅಧ್ಯಕ್ಷರೆ. ಇಂತಹ ಪರಿಸ್ಥಿತಿ ಇದೆ. ಸ್ವಚ್ಛತೆ ಪ್ರಾಮಾಣಿಕ ಸರ್ಕಾರ ಕೊಡುವಂಥದ್ದು. ಇಂತಹ ಪರಿಸ್ಥಿತಿ

ಬಂದ ಮೇಲೆ ಇನ್ನೇನಾಗುತ್ತದೆ ಇಲ್ಲಿ? ಇವತ್ತು ಇಂತಹ ಪರಿಸ್ಥಿತಿಯಲ್ಲಿ ಮರಳು ನೀತಿಯ ವಿಷಯದಲ್ಲಿ ಇವತ್ತು ನಾವು ಇಲ್ಲೇನು ಚರ್ಚೆ ಮಾಡುತ್ತಿದ್ದೇವೆ, sand mafia ಎನ್ನುವುದು ಹೊಸದಾಗಿ ಏನು ಪ್ರಾರಂಭವಾಯಿತು ಬಹುಶಃ ನಮ್ಮ ರಾಜ್ಯದಲ್ಲಿ ಈ ಒಂದು ಸಮಸ್ಯೆ ಬಗೆಹರಿಸುವುದಕ್ಕೆ ಏನು ಮಾಡಬೇಕೆಂದು ಹೇಳಿದಿರಿ. ಈಶಾನ್ಯ ರಾಜ್ಯಗಳ ಜೊತೆ ಏನಾದರೂ ಮಾಡಿ ಮರಳು ಸರಬರಾಜಿಗೆ long term contract ಮಾಡಿಕೊಳ್ಳುವುದು ಒಳ್ಳೆಯದು. ಆ ಭಾಗದಲ್ಲಿ ಮರಳಿಗೆ ಇಲ್ಲಿರತಕ್ಕಂತಹ ಪರಿಸ್ಥಿತಿಗಳಿಲ್ಲ. ನಮ್ಮಲ್ಲಿ ಕೊರತೆ ಇರುವುದು ಒಂದು ಭಾಗ. ಕೆಲವು ಕಡೆ ಮರಳು ಎತ್ತುವುದಕ್ಕಾಗುವುದಿಲ್ಲ. ಇವತ್ತು ಕಾಂಗ್ರೆಸ್ ಮಿತ್ರರು ನಿನ್ನೆ ಅವರ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ಮಾಡಿರುವುದು ಬಂದಿದೆ ಇಲ್ಲ. Sand policy ವಿಷಯದಲ್ಲಿ ನಿನ್ನೆ ಅವರೆಲ್ಲಾ ಶಾಸಕರು ಗಲಾಟೆ ಮಾಡಿದ್ದಾರೆ. ನನಗೆ ಒಂದು ಆಶ್ಚರ್ಯ ಎಂದರೆ, ಒಂದು ಇಲ್ಲಿ ಚರ್ಚೆಯಾಗಿರುವುದು ನೀವೇಕೆ ನಿಮ್ಮ ತಲೆ ಮೇಲೆ ಹೊತ್ತುಕೊಳ್ಳುವುದಕ್ಕೆ ಹೊರಟಿದ್ದೀರಿ ಎಂದು ನಮ್ಮ ಶಾಸಕರು. ನೀವು ಮಾತನಾಡಿದ್ದೀರೋ ಇಲ್ಲವೋ ಗೊತ್ತಿಲ್ಲ ಪತ್ರಿಕೆಯಲ್ಲಿ ಒಂದು ವಿಷಯ ಬಂದಿದೆ. ನಿನ್ನೆ ಮರಳು ನೀತಿ ಬಗ್ಗೆ ಶಾಸಕರುಗಳೇನು ಗಲಾಟೆ ಮಾಡಿದ್ದಾರೆ.

'District incharge Ministers and local M.L.A's would be appointed as chair persons of the District and Taluk Level Committees set up to oversee sand mining.' ಇದನ್ನು ಮಾಡಿಕೊಂಡು ನೀವೇಕೆ ನಿಮ್ಮ ತಲೆ ಮೇಲೆ ಶಾಸಕರುಗಳು ಎಳೆದುಕೊಳ್ಳುತ್ತೀರಿ? ಇದರಲ್ಲಿ ಬಂದಿರುವುದನ್ನು ಹೇಳಿದೆ. ಒಂದು ವೇಳೆ ಈ ರೀತಿ ಚರ್ಚೆಯಾಗಿದ್ದರೆ ಇಂಥದ್ದಕ್ಕೆ ಹೋಗಬೇಡಿ ಎಂದು ಹೇಳಬಯಸುತ್ತೇನೆ. ಕೇರಳ ರಾಜ್ಯದಲ್ಲಿ Sand Depot ಎಂದು ಮಾಡಿಕೊಂಡಿದ್ದಾರೆ. ಕೇರಳದಲ್ಲಿ ಲಾರಿಯಲ್ಲಿ ಮರಳು ಲೋಡ್‌ನ್ನು ಸಾಗಿಸತಕ್ಕಂಥ system ಈಗ ಇಟ್ಟುಕೊಂಡಿಲ್ಲ. ಅವರು ಮೂಟೆಯಲ್ಲಿ ಯಾವ ರೀತಿಯಲ್ಲಿ cement supply ಆಗುತ್ತದೆಯೋ, ಆ ರೀತಿಯಲ್ಲಿ ಮರಳನ್ನು supply ಮಾಡತಕ್ಕಂಥ policy ಜಾರಿಗೆ ತಂದಿದ್ದಾರೆ. ಇವತ್ತು M Sand

ಉತ್ಪಾದನೆಗೆ ಎಷ್ಟು potentiality ನಮ್ಮ ರಾಜ್ಯದಲ್ಲಿದೆ ಎಂಬ ಬಗ್ಗೆ ಒಂದು survey ಮಾಡಿ ಈ Forest Department, Mining Department, Revenue Department, ಈ ಇಲಾಖೆಗಳವರೆಲ್ಲರೂ ಸೇರಿ ತಕ್ಷಣ ಸಮಯ ವ್ಯರ್ಥ ಮಾಡದೆ ಇದಕ್ಕೆ ಯಾರು application ಗಳನ್ನು ಹಾಕಿಕೊಂಡಿದ್ದಾರೋ ಅದಕ್ಕೆ encouragement ಕೊಟ್ಟು N.O.C. ಯನ್ನು release ಮಾಡತಕ್ಕಂಥದ್ದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡರೆ ತುಂಬಾ ಒಳ್ಳೆಯದು. ಬಹುಶ: ನನಗೆ ಗೊತ್ತಿಲ್ಲ, ಬಾದಾಮಿ ಬಾಗಲಕೋಟೆಯಲ್ಲಿ sand stone ಇದೆ ಎನ್ನತಕ್ಕಂಥದ್ದನ್ನು ಹೇಳುತ್ತಾರೆ. ಅಲ್ಲಿ ಯಾವ policy ಗಳನ್ನು ಇಟ್ಟುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಅಲ್ಲಿ research ಮಾಡಿ ಮರಳಿಗೆ ಪರ್ಯಾಯವಾಗಿ ಏನೊಂದು sand stone ಅನ್ನತಕ್ಕಂಥದಿದೆಯೋ ಅದಕ್ಕೆ ಏನಾದರೂ ಅವಕಾಶ ಕೊಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಕೇರಳದಲ್ಲಿ ಬ್ಯಾಗ್‌ಗಳಲ್ಲಿ ಮರಳನ್ನು ಸಾಗಿಸಲು dealership ಕೊಟ್ಟಿದ್ದಾರೆ. ಆ ರೀತಿ policy ತರುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು. ಅದೇ ರೀತಿಯಲ್ಲಿ ಈ ಕಲ್ಲು ಕ್ವಾರಿಗಳಲ್ಲಿರತಕ್ಕಂಥ existing lease ರಿನ್ಯೂ ಆಗದೇ ಇರತಕ್ಕಂಥದ್ದೇನಿದೆ, ಮೊನ್ನೆ ಕೃಷಿಯೆತರ ಚಟುವಟಿಕೆ ಎಂದು ಹೇಳಿ ಬಿಲ್ ತಂದುಕೊಂಡಿದ್ದಾರೆ, ಇಲ್ಲಿ ಯಾವೊಂದು Revenue Department, Forest Department ಇದರೊಳಗೆ ಒಂದು ದೊಡ್ಡ nexus ಇದೆ. ಅದನ್ನು ಸರಿಪಡಿಸುವುದಕ್ಕೆ, tight ಮಾಡುವುದಕ್ಕೆ ಏನಾದರೂ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುವುದು ಒಳ್ಳೆಯದು. ಇವತ್ತು ಸರ್ಕಾರದಲ್ಲಿ ಒಟ್ಟು ನಮಗೆ sand ಎಷ್ಟು ಬೇಕಾಗುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ಕಂಡುಹಿಡಿಯಬಹುದಾಗಿದೆ. ಇದೇನೂ ದೊಡ್ಡ ಸಮಸ್ಯೆಯೇನಲ್ಲ. ಇವತ್ತು ಈ ರಾಜ್ಯದಲ್ಲಿ ಎಷ್ಟು ಸಿಮೆಂಟ್ ಬಳಕೆಯಾಗುತ್ತಿದೆ, ಆ ಸಿಮೆಂಟ್ ಬಳಕೆಯಾಗಬೇಕದರೆ ಅದಕ್ಕೆ ಎಷ್ಟು ಮರಳನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೋ ಅದರ equation ಅನ್ನು ಮಾಡಿಕೊಂಡರೆ ನಮಗೆ ಎಷ್ಟು sand ಬೇಕಾಗುತ್ತದೆ ಎಂಬ ಬಗ್ಗೆ ನಮಗೆ ಮಾಹಿತಿ ಸಿಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ಈ ಮರಳು ದಂಧೆಯೇನು ನಡೆಯುತ್ತಿದೆ

ಇದಕ್ಕೆ full stop ಹಾಕತಕ್ಕಂಥದಕ್ಕೆ ಒಂದು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ಈಗ sand ಗೆ ಸಂಬಂಧಪಟ್ಟಂತೆ 2012 ರಲ್ಲಿ ಒಂದು order ಮಾಡಿದ್ದಾರಲ್ಲ. ಈ order defective ಆಗಿದೆಯೋ ಅಥವಾ ಸರಿಯಿದೆಯೋ? ಸರಿಯಿದ್ದರೆ ಅದನ್ನು implement ಮಾಡುವುದರಲ್ಲಿ ಏನು ತಪ್ಪಿದೆ ಹೇಳಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ ನಮ್ಮ ಕೋರ್ಟಿನಲ್ಲಿ ಆದೇಶ ಏನು ಕೊಡುತ್ತಾರೋ ಅವರು ಕೊಡುವ ಆದೇಶವೇ supreme.

ಅಧ್ಯಕ್ಷರು:– ಅದನ್ನು ಈಗ ಬಿಟ್ಟುಬಿಡಿ.

ಹೆಚ್.ಡಿ. ಕುಮಾರಸ್ವಾಮಿ:– ಈ ಕೋರ್ಟ್ ಆದೇಶಗಳು ಬಂದೇ ನಮ್ಮನ್ನು ಕುಲಗೆಡೆಸಿರುವುದು.

ಅಧ್ಯಕ್ಷರು:– ಈಗ G.O. ಮಾಡಿದ್ದಾರೆ ತಾನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹೌದು ಅಧ್ಯಕ್ಷರೆ,

ಅಧ್ಯಕ್ಷರು:– ಈ G.O. ಸಮರ್ಪಕವಾಗಿದೆಯೋ, ಇಲ್ಲವೋ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದನ್ನು ಸದನದಲ್ಲಿ ತಂದು change ಮಾಡಲಿ. ನಮಗಿಂತಲೂ ಕೋರ್ಟ್‌ಗಳು ದೊಡ್ಡದಲ್ಲ. ನಮಗಿಂತ ಕೋರ್ಟ್‌ಗಳು ದೊಡ್ಡದೇನಲ್ಲ. ಇಲ್ಲಿ ತೀರ್ಮಾನ ಮಾಡೋಣ. ಏನು ಅವರೇ ಬೃಹಸ್ಪತಿಗಳೇ,

ಅಧ್ಯಕ್ಷರೆ:– ಅಂದರೆ ಹೊಸ ಕಾನೂನು ತರಬೇಕು ಎಂದು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ತರಬೇಕು ಅಧ್ಯಕ್ಷರೆ, ಇದಕ್ಕೆ ಯಾವ ಮುಲಾಜಿಲ್ಲ.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಅಧ್ಯಕ್ಷರೆ, ಇಲ್ಲಿ ಆಶ್ರಯ ಮನೆಗಳಿಗೆ ಮರಳಿಲ್ಲದಿದ್ದರೂ ಸಾವಿರಾರು load ಹೊರ ರಾಜ್ಯಕ್ಕೆ ಹೋಗುತ್ತಿರುವುದನ್ನು ತಡೆದಿಲ್ಲ. ರಾತ್ರೋ ರಾತ್ರಿ ಸಾವಿರಾರು loadಗಳು ಕೇರಳ ರಾಜ್ಯಕ್ಕೆ ಹೋಗುವುದು, ಹೊರ ರಾಜ್ಯಕ್ಕೆ ಹೋಗುವುದನ್ನು ತಡೆಯುವ ಕೆಲಸವನ್ನು ಮಾಡಿಲ್ಲ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಈ ಮರಳು scarcity ಗೆ internal demand ಒಂದಿದ್ದರೆ, ಇನ್ನೊಂದು ಹೊರ ರಾಜ್ಯಗಳಿಗೆ ಕಳ್ಳ ಸಾಗಣಿಕೆಯಾಗುತ್ತಿರುವುದು ಕೂಡ ದೊಡ್ಡ ಪ್ರಮಾಣದ ಕಾರಣ.

ಅಧ್ಯಕ್ಷರು:- ಕುಮಾರಸ್ವಾಮಿಯವರೆ ಬೇಗ ಚರ್ಚೆ ಪೂರೈಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ಇದನ್ನು ಹೆಚ್ಚು lengthy ಯಾಗಿ ಎಳೆಯುವುದಿಲ್ಲ. ಊಟಕ್ಕೆ ಬೇರೆ ಸದನ ಮುಂದೂಡಬೇಕಿದೆ. ಬಹಳಷ್ಟು ಜನ sugar complaint ನವರಿದ್ದಾರೆ.

ಅಧ್ಯಕ್ಷರು:- ಹೌದೌದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ರಾಜ್ಯದಲ್ಲಿ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಘೋಷಣೆಯನ್ನು ಮಾಡಿದ್ದಾರೆ. ಪ್ರಾಮಾಣಿಕ ಆಡಳಿತವನ್ನು ಕೊಡುತ್ತೇನೆಂದು ಹೇಳಿದರು. ಈಗ ನೇರವಾಗಿ subject ಗೆ ಬಂದುಬಿಡುತ್ತೇನೆ. ಇವತ್ತು PWD ಇಲಾಖೆಯಲ್ಲಿ ಈ ಒಂದು ನಿಯಮಗಳನ್ನು ಪಾಲನೆ ಮಾಡುವಂಥದ್ದಕ್ಕೆ ಅಧಿಕಾರವನ್ನು ಕೊಟ್ಟು PWD ಇಲಾಖೆ ಮರಳನ್ನು ಇವತ್ತು ಗುತ್ತಿಗೆ ಕೊಡತಕ್ಕಂಥದ್ದಕ್ಕೆ ಆ ಇಲಾಖೆಗೆ ನೀವು 2011 ರಲ್ಲಿ ಜವಾಬ್ದಾರಿಯನ್ನು ಕೊಟ್ಟಿರಿ. ಆದರೆ ಇವತ್ತೇನಾಗಿದೆ, ಇವತ್ತು ನಮ್ಮ ಪಿಡಬ್ಲೂಡಿ ಮಂತ್ರಿಗಳು ಈಗ ಇಲ್ಲಿ ಇಲ್ಲ. ಇವತ್ತು ಮೈಸೂರು ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳಿದ್ದಾರೆ, ಕಂದಾಯ ಇಲಾಖೆಯ ಸಚಿವರಿದ್ದಾರೆ, ಸಹಕಾರಿ ಇಲಾಖೆಯ ಸಚಿವರಿದ್ದಾರೆ, ಪಿಡಬ್ಲ್ಯೂಡಿ ಮಂತ್ರಿಗಳು ಈಗ ಅಲ್ಲಿದ್ದಾರೆ. ಮಾನ್ಯ ಅಧ್ಯಕ್ಷರೆ, ಇವತ್ತು ಮೈಸೂರು ಜಿಲ್ಲೆಯ ಟಿ.

ನರಸೀಪುರದಲ್ಲಿ ನಡೆದಿರತಕ್ಕಂಥ ಈ ಮರಳು ದಂಧೆಯ ಪಿತೃ ಯಾರು, ಇದಕ್ಕೆ ಪಿತೃ ಯಾರು ಟಿ. ನರಸೀಪುರದಲ್ಲಿ ಎಂದು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು:– ಯಾರ್ರೀ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಇವತ್ತು ಟಿ. ನರಸೀಪುರ ಭಾಗದಿಂದ river sand ಇವತ್ತು ಕೇರಳಕ್ಕೆ ಹೋಗುತ್ತಿದೆ. ಇದಕ್ಕೆ ಮೈಸೂರು ಜಿಲ್ಲೆಯಲ್ಲಿ ಯಾರು ರಕ್ಷಣೆಯನ್ನು ಕೊಡುತ್ತಿರತಕ್ಕಂಥವರು? ಇದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ ಮಾನ್ಯ ಅಧ್ಯಕ್ಷರೆ, ಯಾವ enquiry ಮಾಡಿಸುತ್ತೀರಿ, ಇದಕ್ಕೆ enquiry ಯೇ ಬೇಕಾಗಿಲ್ಲ.

ಅಧ್ಯಕ್ಷರು:– ಯಾರಿಂದ ಎಂದು ಅದರಲ್ಲಿ ಇದೆಯೇ? ಯಾರಿಂದ ಎಂದು ಅದರಲ್ಲಿ ಇದೇಯೇನ್ರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಅದಕ್ಕೇ ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಹೇಳಿಬಿಡುತ್ತೇನೆ. ಇದು ಎಲ್ಲಿಂದ ಪ್ರಾರಂಭವಾಯಿತು ಎಂದು ಹೇಳುತ್ತೇನೆ. ಇವತ್ತು ಅವರ ಹೆಸರನ್ನೇ ಹೇಳುತ್ತೇನೆ, ನನಗೇನೂ ಯಾವ ಮುಲಾಜಿಲ್ಲ. ಇದರಲ್ಲಿ ಇವತ್ತು PWD ಮಂತ್ರಿಗಳೇ ನೇರವಾಗಿ ಜವಾಬ್ದಾರಿಯನ್ನು ಇವತ್ತು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಎಲ್ಲರೂ ಸುಮ್ಮನಿರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನಾನು document ಇಟ್ಟುಕೊಂಡಿದ್ದೇನೆ. ನಾನೇನೂ ಸುಳ್ಳು ಹೇಳುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ನೇರವಾಗಿ ನೀವು ಆಪಾದನೆಯನ್ನು ಮಾಡಿದರೆ ಹೇಗೆ?

ಶ್ರೀ ವಿನಯಕುಮಾರ್ ಸೊರಕೆ:– ಕಾನೂನು ಸಚಿವರು ಈ ಮರಳುಗಾರಿಕೆಯ ಉಪ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅವರು ಈಗ ಆ ಸದನದಲ್ಲಿದ್ದಾರೆ.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ. ಅವರು ಅಲ್ಲಿ ಇದ್ದಾರೆ. ಅವರು ಬರುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಎಲ್ಲಿಂದ ಇದು ಪ್ರಾರಂಭವಾಗಿದೆ ಅದನ್ನು ತರುತ್ತೇನೆ. ನಾನು ಇಲ್ಲಿ ಸುಮ್ಮನೆ ಸಂತೆ ಭಾಷಣ ಮಾಡುವುದಕ್ಕೆ ಕುಳಿತಿಲ್ಲ.

(ಗೊಂದಲ)

ಅಧ್ಯಕ್ಷರು:– ಕುಮಾರಸ್ವಾಮಿ,

(ಗೊಂದಲ)

ಅಧ್ಯಕ್ಷರು:– ಹೀಗೆ ನೀವು ನೀವೇ ಮಾತನಾಡಿದರೆ ಹೇಗೆ? ಕುಮಾರಸ್ವಾಮಿ, ಈಗ ಒಂದು ಕೆಲಸ ಮಾಡೋಣ. ಸ್ವಲ್ಪ ಎಲ್ಲರೂ ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು:– ಕುಮಾರಸ್ವಾಮಿ, ಈಗ ಮಂತ್ರಿಗಳು ಇಲ್ಲ. ನಿಮಗೆ ಮಾತನಾಡುವುದಕ್ಕೆ ಅಧಿಕಾರವಿದೆ. Within the frame of the law, ನೀವು ಏನು ಮಾತನಾಡಬಹುದೋ ಅದನ್ನು ಮಾತನಾಡಿ. ಈಗ ಅವರು ಇಲ್ಲ. ಅವರನ್ನು ಎದುರಿಗೆ ಇಟ್ಟುಕೊಂಡರೆ ಒಳ್ಳೆಯದು. ಆದುದರಿಂದ ಈಗ ಒಂದು ತುತ್ತು ಊಟ ಮಾಡಿಕೊಂಡು ಬಂದುಬಿಡೋಣ. ಆಮೇಲೆ ಮುಂದುವರಿಸೋಣ. ಈಗ ಸದನವನ್ನು ಮತ್ತೆ 2 ಗಂಟೆ 45 ನಿಮಿಷಕ್ಕೆ ಸೇರುವಂತೆ ಮುಂದೂಡುತ್ತೇನೆ.

(ಸದನವು ಮಧ್ಯಾಹ್ನ 1 ಗಂಟೆ 48 ನಿಮಿಷಕ್ಕೆ ಮುಂದೂಡಿ ಮತ್ತೆ 2 ಗಂಟೆ 45 ನಿಮಿಷಕ್ಕೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಭೋಜನ ವಿರಾಮದ ನಂತರ ಸದನವು ಪುನ: ಮಧ್ಯಾಹ್ನ 3.05ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಶ್ರೀ ವಿ. ಸುನಿಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಂತ್ರಿಗಳ್ಯಾರೂ ಕಾಣುತ್ತಿಲ್ಲ, ಸದನವನ್ನು ಸ್ವಲ್ಪ ಹೊತ್ತು ಮುಂದಕ್ಕೆ ಹಾಕಿ.

ಅಧ್ಯಕ್ಷರು: ಇದ್ದಾರಲ್ಲಾ.

ಶ್ರೀ ಸಿ.ಟಿ. ರವಿ: ಮೂರು ಜನ ಸಚಿವರು ಮಾತ್ರ ಇದ್ದಾರೆ.

ಶ್ರೀ ಕೃಷ್ಣ ಬೈರೇಗೌಡ: ನಾವು ಇದ್ದೇವಲ್ಲ.

ಶ್ರೀ ವಿ. ಸುನಿಲ್ ಕುಮಾರ್: ನೀವು ಮೂರನೇ ಬೆಂಚಿನಲ್ಲಿದ್ದೀರಿ, ನೀವು ಮೊದಲನೇ ಬೆಂಚಿಗೆ ಬರಬೇಕು ಎನ್ನುವುದು ನಮ್ಮ ಅಪೇಕ್ಷೆ.

ಶ್ರೀ ಗೋವಿಂದ ಎಂ ಕಾರಜೋಳ್: ಅಧ್ಯಕ್ಷರೆ, ಹತ್ತು ನಿಮಿಷ ಮುಂದಕ್ಕೆ ಹಾಕಿಬಿಡಿ, ಯಾರ್‍ಯಾರೂ ಇಲ್ಲ. ಕೃಷ್ಣಬೈರೇಗೌಡರೆ, ನೀವು ಮುಖ್ಯಮಂತ್ರಿಯಾದ ಮೇಲೆ ನೀವು ಒಬ್ಬರೇ ಇದ್ದರೂ ನಾವು ಕೂರಲು ತಯಾರಿದ್ದೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಬೈರೇಗೌಡರು ಮೊದಲನೇ ಬೆಂಚಿಗೆ ಬರುವ ಹಾಗೆ ಆಗಬೇಕು.

ಅಧ್ಯಕ್ಷರು: ನಿಯಮ 69ರಡಿಯಲ್ಲಿ ಮರಳು ಗಣಿಗಾರಿಕೆಯ ಚರ್ಚೆಯನ್ನು ತೆಗೆದು ಕೊಳ್ಳೋಣ. ಕುಮಾರಸ್ವಾಮಿಯವರು ಬಂದಿಲ್ಲವೇ?

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ಅದರಲ್ಲಿ ನಿಮ್ಮದೂ ಇದೆಯಲ್ಲ. ಜಗದೀಶ ಶೆಟ್ಟರ್, ಆರ್.ಅಶೋಕ್, ಬಸವರಾಜ ಬೊಮ್ಮಾಯಿ, ಗೋವಿಂದ ಎಂ. ಕಾರಜೋಳ ಎಲ್ಲರೂ ಇದ್ದೀರಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನೂ signatory. ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ನಿಮ್ಮಲ್ಲಿ initiate ಮಾಡುವವರು ಯಾರು?

ಶ್ರೀ ಗೋವಿಂದ ಎಂ ಕಾರಜೋಳ: ಮರಳು ಮೇಲೆ ನಾವು ಮಾತನಾಡುತ್ತೇವೆ.

ಅಧ್ಯಕ್ಷರು: ಮೊದಲನೇ ಹೆಸರು ಜಗದೀಶ ಶೆಟ್ಟರ್‌ರವರದ್ದಿದೆ, ಎರಡನೆಯದು ಅಶೋಕ್. ಮೊದಲು ಯಾರು ಮಾತನಾಡುತ್ತೀರಿ ಎಂದು ನಿಮ್ಮಲ್ಲಿ ತೀರ್ಮಾನ ಮಾಡಿಕೊಳ್ಳಿ.

ಶ್ರೀ ಗೋವಿಂದ ಎಂ ಕಾರಜೋಳ್: ಮೊದಲು ಜಗದೀಶ ಶೆಟ್ಟರ್‌ರವರು ಮಾತನಾಡುತ್ತಾರೆ.

ಅಧ್ಯಕ್ಷರು: ಅವರು ಇಲ್ಲವಲ್ಲ. ನಾನು ಕಾಯುವುದಕ್ಕೆ ಆಗುವುದಿಲ್ಲ.

ಶ್ರೀ ಗೋವಿಂದ ಎಂ ಕಾರಜೋಳ್: ಬರುತ್ತಾರೆ.

ಶ್ರೀ ವೈ.ಎಸ್.ವಿ. ದತ್ತಾ: ಮಾನ್ಯ ಅಧ್ಯಕ್ಷರೆ, ಕುಮಾರಣ್ಣ ಬರುತ್ತಾರೆ.

ಅಧ್ಯಕ್ಷರು: ಕುಮಾರಣ್ಣ ಬರುತ್ತಾರೆ ಎಂದು ನಾನು ಕಾಯುವುದಕ್ಕೆ ಆಗುತ್ತದೆಯೇ? ಕಾರಜೋಳ್‌ರವರೇ ನೀವು ಮಾತನಾಡಿ.

ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ): ಸನ್ಮಾನ್ಯ ಸಭಾಧ್ಯಕ್ಷರೆ, ಮರಳು ಮಾಫಿಯಾ ಎನ್ನುವುದು ಬಳ್ಳಾರಿಯ ಗಣಿ ಮಾಫಿಯಾಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಈ ರಾಜ್ಯದಲ್ಲಿ ನಡೆದಿದೆ. ಕಳೆದ ಎರಡೂವರೆ ಮೂರು ವರ್ಷಗಳಿಂದ ಕೃತಕವಾಗಿ ಅಭಾವವನ್ನು ಸೃಷ್ಟಿಸಿ ಬಡವರು ಮನೆ ಕಟ್ಟದ ಹಾಗೆ ಆಗಿದೆ, ಅನೇಕ ಸರ್ಕಾರಿ ಕೆಲಸಕಾರ್ಯಗಳಿಗೆ ಮರಳು ಸಿಗುತ್ತಿಲ್ಲ. ಐದು ಸಾವಿರ ರೂಪಾಯಿ, ಮೂರೂವರೆ ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದಂಥ ಮರಳು ಇವತ್ತು 50 ಸಾವಿರ, 70 ಸಾವಿರ, 35 ಸಾವಿರ ರೂಪಾಯಿಗಳಷ್ಟು ರೇಟ್ ಆಗಿದೆ. ಇದರಿಂದಾಗಿ ಅನೇಕ ಕಟ್ಟಡ

ಕಾಮಗಾರಿಗಳು ಮತ್ತು ಸರ್ಕಾರಿ ಅಭಿವೃದ್ಧಿ ಕೆಲಸಗಳು ನಿಂತಿದ್ದರಿಂದ, ಪ್ರತಿ ತಾಲ್ಲೂಕಿನಲ್ಲಿ ಎಂಟರಿಂದ ಹತ್ತು ಸಾವಿರ ಬಡ ಕೂಲಿ ಕಾರ್ಮಿಕರು ಉದ್ಯೋಗವನ್ನು ಕಳೆದುಕೊಂಡು ನಿರದ್ಯೋಗಿಗಳಾಗಿದ್ದಾರೆ. ಅಷ್ಟೇ ಅಲ್ಲ, ನಮ್ಮನ್ನು ನೋಡಿ ಬಯ್ಯುತ್ತಾರೆ, sand ಸಿಗಲಾರದ ಹಾಗೆ ಮಾಡಿಟ್ಟಿರಿ, ಕಡಿ ಸಿಗಲಾರದ ಹಾಗೆ ಮಾಡಿಟ್ಟಿರಿ, ನಮ್ಮ ಹೊಟ್ಟೆಯ ಮೇಲೆ ಹೊಡೆದಿರಿ ಎನ್ನುವ ಮಾತನ್ನು ಹೇಳುತ್ತಾರೆ. ಈ ಬಗ್ಗೆ ಸರಿಯಾದಂಥ ಸಮಯಕ್ಕೆ ಕ್ರಮ ತೆಗೆದುಕೊಂಡು ಮರಳು ಸಿಗುವ ಹಾಗೆ ಮಾಡಬೇಕು ಎಂದು ನಾವು ಅನೇಕ ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡೆವು. ನಾನು ಅಖಂಡ ಬಿಜಾಪುರ ಜಿಲ್ಲೆಯಿಂದ ಬಂದಂಥವನು. ನಮ್ಮ ಜಿಲ್ಲೆಯಲ್ಲಿ ಸುಮಾರು ಐದು ನದಿಗಳು ಹರಿಯುತ್ತವೆ. ನಮ್ಮಲ್ಲಂತೂ ಯಾವ ಕಾರಣಕ್ಕೂ ಮರಳು ಕಡಮೆಯಾಗಬಾರದು. ಆದರೆ ದುರ್ದೈವದಿಂದ ಏನಾಗಿದೆ ಎಂದರೆ, ಮರಳನ್ನು ಮಹಾರಾಷ್ಟ್ರಕ್ಕೆ ಸಾಗಾಣಿಕೆ ಮಾಡುತ್ತಾರೆ, ದಿನಾಲೂ ಕನಿಷ್ಟವೆಂದರೆ ಒಂದು ಸಾವಿರ ಗಾಡಿಗಳು ಅಖಂಡ ಬಿಜಾಪುರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಹೋಗುತ್ತವೆ. ಇದು ಸರ್ಕಾರಕ್ಕೂ ಗೊತ್ತಿದೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೂ ಗೊತ್ತಿದೆ, ಜಿಲ್ಲಾಧಿಕಾರಿಗಳಿಗೆ ಗೊತ್ತಿದೆ, ಪೊಲೀಸ್ ಅಧಿಕಾರಿಗಳಿಗೆ ಗೊತ್ತಿದೆ. ಆದರೂ ಯಾರೂ ಕೂಡ ಅದನ್ನು ನಿಯಂತ್ರಣ ಮಾಡಲು ಆಗಿಲ್ಲ. ಇದಕ್ಕೆ ಕಾರಣವಿಷ್ಟೇ ಅತಿಯಾದಂಥ ಆಸೆಯಿಂದ ಕೆಲವು ಅಧಿಕಾರಿಗಳೂ ಅದರಲ್ಲಿ ಶಾಮೀಲಾಗಿದ್ದಾರೆ, ಅಧಿಕಾರಸ್ಥರೂ ಶಾಮೀಲಾಗಿದ್ದಾರೆ. ಹೀಗಾಗಿ ಉಸುಕಿನ ಕಳ್ಳದಂಥೆ ನಿರಂತರವಾಗಿ ನಡೆಯುತ್ತಿದೆ. ಸರ್ಕಾರಕ್ಕೆ ವರದಿ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಬಿಜಾಪುರ ಜಿಲ್ಲೆಯಲ್ಲಿರುವ ಉಸುಕು ಮಾಫಿಯಾ ಗ್ಯಾಂಗಿನವರು ಜನರ ಮೇಲೆ ಮೂರು ಸಾರಿ firing ಮಾಡಿದರು. ಡಕಾಯಿತರು, ಚಂಬಲ್‌ಕಣಿವೆಯವರನ್ನು ಏನು ನೋಡುತ್ತಿದ್ದೇವು ಆ ತರಹ ಅವರು gang ಕಟ್ಟಿಕೊಂಡಿದ್ದಾರೆ. ಉಸುಕಿನ ಕಳ್ಳ ಮಾಫಿಯಾ ಏನು ಮಾಡುತ್ತಾರೆ, ಅವರ ಹತ್ತಿರ ಐದಾರು ಮಂದಿ gunmen ಗಳಿದ್ದಾರೆ. ಅವರಿಗೆ ಯಾರು licence ಕೊಟ್ಟರೋ, ಅವರು double barrel ಬಂದೂಕುಗಳನ್ನು ಎದೆ ಮೇಲೆ ಇಟ್ಟುಕೊಂಡು ಹಿಂದೆ ಮುಂದೆ ಜೀಪಿನಲ್ಲಿ ಉಸುಕು ಹಾಕಿಕೊಂಡು

ಹೋಗುತ್ತಾರೆ. ಇದು ಸರ್ಕಾರಕ್ಕೆ ಗೊತ್ತಲ್ಲವೇ? ಸರ್ಕಾರ ನೋಡುವುದಿಲ್ಲವೇ? ಗಡಿ ದಾಟಿ ಹೋಗುತ್ತಾರೆ. ಮಹಾರಾಷ್ಟ್ರಕ್ಕೆ ಹೋಗಿ ಮಾರಾಟ ಮಾಡುತ್ತಾರೆ. ಇದನ್ನು ನಿಯಂತ್ರಣ ಮಾಡಲಿಕ್ಕೆ ಸರ್ಕಾರಕ್ಕೆ ಏಕೆ ಇಚ್ಛಾಶಕ್ತಿಯ ಕೊರತೆ ಇದೆಯೋ ಗೊತ್ತಿಲ್ಲ. ಜನ ಶಾಪ ಹಾಕುತ್ತಿರುತ್ತಾರೆ. Sand ತೆಗೆಯಲು ಪರಿಪಾಠ ಏನು? ನದಿಗಳು ಇರುವ ಕಡೆ, ಹಳ್ಳಗಳು ಇರುವ ಕಡೆ ಮೇ, ಜೂನ್‌ನಲ್ಲಿ blockಗಳನ್ನು identify ಮಾಡುತ್ತಾರೆ. auction ಮಾಡುತ್ತಾರೆ. Auction ಮಾಡಿ royalty ಕಟ್ಟಿಸಿಕೊಂಡು ಒಯ್ಯಲಿಕ್ಕೆ ಅವಕಾಶ ಮಾಡಿಕೊಡಬೇಕು. ಏನಾಗಿದೆ ಎಂದರೆ, ಬಹಳಷ್ಟು ಜಿಲ್ಲೆಗಳಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಜೂನ್‌ನಲ್ಲಿ block identify ಮಾಡಲಿಲ್ಲ. ಮಾಡಲಾರದ ಕಾರಣಕ್ಕಾಗಿ ಮರಳು ಅಭಾವ ಸೃಷ್ಟಿಯಾಯಿತು. ಕಳ್ಳತನದಿಂದ ಈ ಉದ್ಯೋಗ ಪ್ರಾರಂಭವಾಯಿತು. ಇದನ್ನು ತಡೆಗಟ್ಟಲಿಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೆಂದರೆ ನಾನು ಇದಕ್ಕೆ ಏನೆನ್ನಬೇಕೋ ಗೊತ್ತಿಲ್ಲ. ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ Deputy Commissionerರವರು report ಮಾಡಿದ್ದಾರೆ. ಏನೆಂದರೆ, ಹುನಗುಂದ ತಾಲ್ಲೂಕಿನಲ್ಲಿ ಮಲಪ್ರಭಾ ನದಿ ದಂಡೆಯ ಮೇಲೆ ಕರಡಿ, ಮಲ್ಲಗೆಹ್ಯಾಳ, ಪಾಲ್ತಿ, ಮುಂತಾದ ಗ್ರಾಮಗಳಲ್ಲಿ 8 ಕೋಟಿ ರೂಪಾಯಿಗಳ revenue loss ಆಗಿದೆ, ಅಲ್ಲಿ sand stock ಇದ್ದುದ್ದನ್ನು ಕಳ್ಳತನ ಮಾಡಿದ್ದಾರೆಂದು report ಮಾಡಿದರೂ ಸಹ ಸರ್ಕಾರ ಇವತ್ತಿನವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರಕ್ಕೆ report ಬಂದಿದೆ. ಅಧಿಕೃತವಾಗಿ Deputy Commissionerರವರೇ report ಮಾಡಿದ್ದಾರೆ. ಇದನ್ನು ನಾವು ಎಷ್ಟು ದಿವಸಗಳೆಂದು ನೋಡಿಕೊಂಡು ಕುಳಿತುಕೊಳ್ಳುವುದು? ನಾನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡುವುದೇನೆಂದರೆ, ತಮ್ಮ ಸರ್ಕಾರದಲ್ಲಿ sand ವಿಚಾರದಲ್ಲಿ ಬಿಗಿ ಮಾಡಿ. ಬಿಗಿ ಮಾಡಿಸಿಬಿಡಿ. ಒಂದೇ ದಿನದಲ್ಲಿ 24 ಗಂಟೆಯೊಳಗೆ ಬಿಗಿಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು): ನೀವು ಮಾಡಿದ ನೀತಿಯಿಂದಾಗಿ ಇವೆಲ್ಲಾ ಆಗಿರುವುದು. ಆಗ ನೀವು ಬಿಗಿ ಮಾಡುವುದಕ್ಕೆ ಹೋಗಲಿಲ್ಲ. ಎಲ್ಲವನ್ನೂ ಬಿಟ್ಟುಬಿಟ್ಟಿರಿ.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ:** ಯಾರು ಮಾಡಿದ್ದೋ, ನೀವು ಮಾಡಿದ್ದು ನಾವು ಮಾಡಿದ್ದು ಅದನ್ನು ಕೇಳಲಿಲ್ಲ. ನಾನು ನಾವು

ಮಾಡಿದ್ದೇವೆಂದು ಹೇಳಲಿಲ್ಲ, ನೀವು ಮಾಡಿದಿರಿ ಎಂದು ಹೇಳಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ: ನಿಮ್ಮ ಕಾಲದ ಕೂಸೇ ಇದು.

(ಗೊಂದಲ)

ಶ್ರೀ **ಗೋವಿಂದ ಎಂ. ಕಾರಜೋಳ:** ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುವುದೇನೆಂದರೆ, ಯಾರು ಮಾಡಿದರು ಎನ್ನುವುದು ಮುಖ್ಯವಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ನೀತಿ ಮಾಡಿತು, ಅದರಂತೆ ಇವರು ನಡೆದುಕೊಂಡರು.

(ಗೊಂದಲ)

ಶ್ರೀ ಸಿ.ಟಿ. ರವಿ: ನಮ್ಮ ನೀತಿ ಇವರ ನಡತೆ. ನೀತಿಯನ್ನು ನಾವು ಪುಸ್ತಕದಲ್ಲಿ ಮಾಡಿದೆವು. ಇವರು ನಡೆದುಕೊಂಡರು.

ಶ್ರೀ **ಗೋವಿಂದ ಎಂ. ಕಾರಜೋಳ:** ಮಾನ್ಯ ಸಭಾಧ್ಯಕ್ಷರೆ, ಜಿಲ್ಲಾಧಿಕಾರಿಗಳು report ಮಾಡಿದ್ದಾರೆ. 8 ಕೋಟಿ ರೂಪಾಯಿಗಳ ಉಸುಕು ಕಳವು ಆಗಿದೆ ಬಾಗಲಕೋಟೆ ಜಿಲ್ಲೆಯಲ್ಲಿ ಎಂದು. ಇವತ್ತಿಗೂ ಕ್ರಮ ತೆಗೆದುಕೊಂಡಿಲ್ಲ. ಸಂಬಂಧಪಟ್ಟವರನ್ನು ಒಂದು ಸಲ ಕರೆದು ಬಿಗಿ ಮಾಡಿದರೆ ಮುಗಿದುಹೋಗುತ್ತದೆ. ಬಿಗಿ ಮಾಡಿದರೆ ಈ ಸಮಸ್ಯೆಯೇ ಪರಿಹಾರವಾಗುತ್ತದೆ.

ಇನ್ನೊಂದು, ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆಗಿರತಕ್ಕಂಥ ಒಂದು ಲೋಪವೇನೆಂದರೆ, ಇದನ್ನು ಲೋಕೋಪಯೋಗಿ ಇಲಾಖೆಯವರಿಗೆ ವಹಿಸಿಕೊಟ್ಟರು, ಕೊಡಬಾರದಾಗಿತ್ತು. ಇದು ಗಣಿ ಇಲಾಖೆಯಲ್ಲಿಯೇ ಇರಬೇಕಾಗಿತ್ತು. ಅವರೇ ಈ ಕೆಲಸ ಮಾಡಬೇಕಾಗಿತ್ತು. ಈಗ ಲೋಕೋಪಯೋಗಿ ಇಲಾಖೆಯ ಇಂಜಿನಿಯರುಗಳು, Executive Engineer, AEE, Junior Engineer, Assistant Engineer ಇವರುಗಳು ಮರಳು ಮಾರಾಟ ಮಾಡುವ ವ್ಯಾಪಾರಸ್ಥರಾಗಿದ್ದಾರೆ. ಅದರ ಸಲುವಾಗಿ ಪ್ರತ್ಯೇಕ ಗಣಿಗಾರಿಕೆ ಇಲಾಖೆಯಿಂದ ಮಾಡಿಸಿ. ಏನೂ ಆಗುವುದಿಲ್ಲ. ಆ ಬಗ್ಗೆ ಆವತ್ತೂ ಕೂಡ ಅದು ಬೇಡ ಎಂದು ನಾನು cabınet ನಲ್ಲಿ ಹೇಳಿದೆ. ಲೋಕೋಪಯೋಗಿ ಇಲಾಖೆಗೆ ವಹಿಸಬೇಡಿ, ಅಲ್ಲಿಯ ಇಂಜಿನಿಯರ್ ಇದೇ ಕೆಲಸ ಮಾಡುತ್ತಾರೆ, ಅವರು ರಸ್ತೆ ಮಾಡುವುದು, ಕಟ್ಟಡ ಕಟ್ಟುವುದು, ಸೇತುವೆ ಕಟ್ಟುವುದು ಬಿಡುತ್ತಾರೆ ಎಂದು ಹೇಳಿದ್ದೆ. ಅದಕ್ಕೆ ನಾನು ಮನವಿ ಮಾಡುವುದೇನಂದರೆ PWD ಯವರನ್ನು ಬಿಟ್ಟು ಮರಳು ಸಲುವಾಗಿ ಪ್ರತ್ಯೇಕ ಮಾಡಿಬಿಡಿ.

ಶ್ರೀ ಕೆ.ಜೆ ಜಾರ್ಜ್ (ಗೃಹ ಸಚಿವರು): ಕಾರಜೋಳ್‌ರವರೆ ಒಂದು ನಿಮಿಷ. ಜಿಲ್ಲಾಧಿಕಾರಿಗಳು report ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ. 8 ಕೋಟಿ ರೂಪಾಯಿಗಳ ಮರಳು ಕಾಣೆಯಾಗಿದೆ ಎಂದು ಜಿಲ್ಲಾಧಿಕಾರಿಗಳು report ಮಾಡಿದ್ದಾರೆಂದು ಹೇಳಿದಿರಿ. ಜಿಲ್ಲಾಧಿಕಾರಿಗಳು report ಮಾಡುವ ಅವಶ್ಯಕತೆ ಇಲ್ಲ. ಅವರೇ ಅದರ ಅಧ್ಯಕ್ಷರು. SP ಮತ್ತು ಇತರೆ ಅಧಿಕಾರಿಗಳು ಇದ್ದಾರೆ. ಕ್ರಮ ಅವರೇ ತೆಗೆದುಕೊಳ್ಳಬೇಕೇ ಹೊರತು ಯಾವ ಸರ್ಕಾರಕ್ಕೆ, ಯಾವ ಇಲಾಖೆಗೆ ಕೊಟ್ಟಿದ್ದಾರೆ? ಯಾವ ಇಲಾಖೆಗೆ ಇವರು report ಮಾಡಿದ್ದಾರೆ?

(ಗೊಂದಲ)

ಅಧ್ಯಕ್ಷರು: ಮಂತ್ರಿಗಳು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮೊನ್ನೆಯ ದಿವಸ ನಾನು ಬಾಗಲಕೋಟೆ ಜಿಲ್ಲೆಗೆ ಹೋಗಿ review meeting ಮಾಡಿದ್ದೇನೆ. ಯಾರು ಕಳ್ಳಸಾಗಾಣಿಕೆ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು SP ಯವರಿಗೆ ಆದೇಶ ಕೊಟ್ಟು ಬಂದಿದ್ದೇನೆ. ಏನಾದರೂ ಆ ತರಹ ಆಗಿದ್ದರೆ ಅವರು ತೆಗೆದುಕೊಳ್ಳಬೇಕಾದ ಕ್ರಮ SP, DC ಅವರು ತೆಗೆದುಕೊಳ್ಳಬೇಕಾಗುತ್ತದೆ. ಅವರು ಬಹುಶ: ಯಾವ ಸರ್ಕಾರಕ್ಕೂ report ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಈ ರೀತಿ ಉತ್ತರ ಕೊಟ್ಟರೆ ಹೇಗೆ? Deputy Commissioner report ಮಾಡುತ್ತಾರೆಂದ ಮೇಲೆ ಅವರ powerಗಿಂತ ಹೆಚ್ಚಿನವರು ಇರಬೇಕಲ್ಲವೇ?

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಸಭಾಧ್ಯಕ್ಷರೆ, ಈಗ ಹೊರಗಡೆಯವರು ಯಾರಾದರೂ ಕಳ್ಳಸಾಗಾಣಿಕೆ ಮಾಡಿದರೆ ಕ್ರಮ ಕೈಗೊಳ್ಳುವುದಕ್ಕೆ D.C., S.P. ಗೆ ಅಧಿಕಾರವಿದೆ. ಆದರೆ, ಇಲಾಖೆಯೊಳಗೆ ಇದ್ದವರೇ ಕದ್ದು ತೆಗೆದುಕೊಂಡು ಹೋದರೆ ಯಾರು ಕ್ರಮ ಕೈಗೊಳ್ಳಬೇಕು?

ಅಧ್ಯಕ್ಷರು: ಇಲಾಖೆಯವರು ಎಂದರೆ ಯಾರು?

ಶ್ರೀ ಸಿ.ಟಿ. ರವಿ: ಬೆಳಗಾಂನಲ್ಲಿ ಕಳ್ಳತನ ಮಾಡಿದಂಥ ಕಳ್ಳಸಾಗಾಣಿಕೆ ಆಗುತ್ತಿದ್ದುದ್ದನ್ನು seize ಮಾಡಿ PWD IB ನಲ್ಲಿ stock ಮಾಡುತ್ತಾರೆ. 600 ಲೋಡ್ ಮರಳನ್ನು stock ಮಾಡುತ್ತಾರೆ. ಆ stock ಮಾಡಿದ್ದನ್ನು ಅಧಿಕಾರಿಗಳೇ ಸೇರಿ ಕದ್ದು ಮಾರುತ್ತಾರೆ. ಅದನ್ನು ಜಿಲ್ಲಾಧಿಕಾರಿಗಳು, Principal Secretary, ಲೋಕೋಪಯೋಗಿ ಇಲಾಖೆಗೆ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಿ ಎಂದು ವರದಿ ಮಾಡುತ್ತಾರೆ. ಆದರೆ, ಇವತ್ತಿನವರೆಗೂ ಕ್ರಮ ಕೈಗೊಂಡಿಲ್ಲ. ಅಂದರೆ, ಈ mafia ಹಿಂದುಗಡೆ ಇರುವವರು ಯಾರು? Mafia ಹಿಂದುಗಡೆ ನಮ್ಮಂಥವರು ಯಾರಾದರೂ

ಇಲ್ಲದಿದ್ದರೆ ಎಲ್ಲ ಮಾಡಿದ ಮೇಲೂ ಆ ಅಧಿಕಾರಿ ರಾಜಾರೋಷವಾಗಿ ಓಡಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಎಲ್ಲಿ ಸದನ ನಡೆಯುತ್ತಿದೆಯೋ ಅದೇ ಜಾಗದಲ್ಲಿ ಅಂದರೆ ಬೆಳಗಾಂನಲ್ಲಿಯೇ. ಬೆಳಗಾಂ ಜಿಲ್ಲಾಧಿಕಾರಿ ದಿನಾಂಕ:3–2–2014ಕ್ಕೆ ವರದಿ ಕಳುಹಿಸುತ್ತಾರೆ. ಇನ್ನು 2 ತಿಂಗಳು ಕಳೆದರೆ ಒಂದು ವರ್ಷವಾಗುತ್ತದೆ. ಕ್ರಮ ಕೈಗೊಳ್ಳುವುದಕ್ಕೆ ಕೈ ಕಟ್ಟಿಹಾಕಿದ್ದು ಯಾರು?

ಅಧ್ಯಕ್ಷರು: ಆಯಿತು. ಸರ್ಕಾರವನ್ನು ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಸಭಾಧ್ಯಕ್ಷರೆ, ಜಿಲ್ಲಾಧಿಕಾರಿ, ಎಸ್.ಪಿ. ಅವರೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಎಂದು ಗೃಹ ಮಂತ್ರಿಗಳು ಹೇಳಿದರು. ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು 24 ಗಂಟೆಯೊಳಗೆ ಸಂಬಂಧಪಟ್ಟವರು ಯಾರ್ಯಾರು mafia ಗಳು ಇದ್ದಾರೆ ಅವರು ಹಿಡಿದು ಹಾಕುತ್ತೇನೆ, ಕಳ್ಳತನ ಮಾಡಿದವರನ್ನು ಹಿಡಿದು ಹಾಕುತ್ತೇನೆ ಎನ್ನುವ statement ಕೊಟ್ಟಿದ್ದಾರೆ. ದಯಮಾಡಿ ಅವರ ಕಡೆಯಿಂದ ಉತ್ತರ ಕೇಳಿರಿ.

ಡಾ|| ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಮರಳು ಗಣಿಗಾರಿಕೆ ಬಗ್ಗೆ Rule 69ನಲ್ಲಿ ಮಾತನಾಡುವಾಗ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಿರಿಯ ಸದಸ್ಯರಾದಂಥಹ ಕುಮಾರಸ್ವಾಮಿಯವರು ಟಿ.ನರಸೀಪುರ ನದಿ ತೀರದಲ್ಲಿ ಮರಳು ಗಣಿಗಾರಿಕೆ ನಡೆದು, filter ಮರಳು ಕೇರಳಕ್ಕೆ ಹೋಗಿದೆ, ಅದಕ್ಕೆ ಯಾರು ಕಾರಣ ಎಂದು ಅವರ ಮಾತಿನಲ್ಲಿ ಹೇಳಿದ್ದಾರೆ. ಹೇಳುವಾಗ ಈ ತರಹ ಆಗಿರುವುದಕ್ಕೆ PWD Minister ಇದರ ಜವಾಬ್ದಾರಿ ಹೊರಬೇಕಾಗುತ್ತದೆಂದು mention ಮಾಡಿದ್ದಾರೆ. ಅವರಿಗೆ ಯಾವ ಸಾಕ್ಷಿ ಆಧಾರ ಇದೇ? ನಾನು 1985ನೇ ಇಸವಿಯಲ್ಲಿ ಈ ವಿಧಾನಸಭೆಗೆ ಪ್ರವೇಶ ಮಾಡಿದ್ದೇನೆ.

ಅಧ್ಯಕ್ಷರು: ಮುಂದೆ ಹೋಗಬೇಡಿ, ತಾಳಿ, ಹೇಳುತ್ತೇನೆ. ಈಗ ನಾನೂ ಅದನ್ನು ನೋಡಿದ್ದೇನೆ. ಅದಕ್ಕೆ ಆವಾಗ ನಾನು ಸದನವನ್ನು ಮುಂದಕ್ಕೆ ಹಾಕಿರುವುದು. ಜವಾಬ್ದಾರಿ ಹೊರಬೇಕಾಗುತ್ತದೆ. ಏಕೆಂದರೆ, ನಿಮ್ಮ ಇಲಾಖೆಗೆ ಇದರ ಮೇಲ್ವಿಚಾರಣೆ ಮಾಡುವ ಕೆಲಸವನ್ನು ವಹಿಸಿಕೊಟ್ಟಿದ್ದಾರೆ. ಆ

ಹಿನ್ನಲೆಯಲ್ಲಿ ಜವಾಬ್ದಾರಿಯನ್ನು ಹೊರಬೇಕೆನ್ನುವ ಮಾತು ಹೇಳಿದ್ದಾರೆ. ಮುಂದುವರೆದು ಕೆಲವು ಕಾಗದ ಪತ್ರಗಳು ಇವೆ ಎಂದು ಹೇಳಿದರು. ಆ ಕಾರಣಕ್ಕಾಗಿಯೇ ನಾನು ಅವರಿಗೆ ಹೇಳಿದ್ದೇನೆ, ನೀವು ನೇರವಾಗಿ ವೈಯಕ್ತಿಕ ಆಪಾದನೆ ಮಾಡುವುದಾದರೆ ಮೊದಲು ನಮಗೆ ಒಂದು ಪತ್ರ ಕೊಡಬೇಕು, ಪತ್ರದ ಜೊತೆಗೆ ದಾಖಲೆಗಳನ್ನು ಹಾಜರುಪಡಿಸಬೇಕು, ಅದನ್ನು ನೋಡಿ ನಿಮಗೆ ಕಳುಹಿಸಿಕೊಟ್ಟು ನಮ್ಮ ನಿಯಮ ಪ್ರಕಾರ ಏನು ಅವಕಾಶವಿದೆ ಆ ಅವಕಾಶಗಳ ಪ್ರಕಾರ ನಡೆದುಕೊಳ್ಳಬೇಕೆಂದು ಹೇಳಿದ್ದೇನೆ. ಈಗ ಪತ್ರ ಬಂದಿದೆ.

ಡಾ|| ಹೆಚ್.ಸಿ. ಮಹದೇವಪ್ಪ: ಈ ಸದನಕ್ಕೆ ತಮ್ಮ ಮೂಲಕ ಹೇಳಬಯಸುವುದೇನೆಂದರೆ, ಆ ಕ್ಷೇತ್ರದ ಪ್ರತಿನಿಧಿಯಾಗಿ ಸತತವಾಗಿ ಈ ಸದನಕ್ಕೆ ಬಂದು 30 ವರ್ಷಗಳಾಯಿತು. ನನಗೆ ತುಂಬಾ hurt ಆಗಿದೆ. ನಾನು ಒಂದು ಕೂದಲೆಳೆಯಷ್ಟು ದಂಧೆ, ಮಾಫಿಯಾ, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಇದುವರೆಗೂ ಭಾಗಿಯಾಗಿಲ್ಲ. ಆ ತರಹದ್ದು ಏನಾದರೂ ಇದ್ದರೆ ನಾನು ಸಾರ್ವಜನಿಕ ಜೀವನದಲ್ಲಿಯೇ ಇರುವುದಿಲ್ಲ. ಯಾರೋ ಮಾಡಿದ್ದು, ಏನೋ ಮಾಡಿಕೊಂಡು ಹೋಗಿದ್ದು, ಅದು ನಡೆಯುತ್ತಿದೆ. ಹಿಂದೆ ಎಲ್ಲ 2004ನೇ ಇಸವಿ ಇದ್ದಾಗ rules ಇರಲಿಲ್ಲ, policy ಇತ್ತು. ಮಾತನಾಡುವವರೆಲ್ಲರೂ ಕೂಡ ಈ ಮರಳು ಗಣಿಗಾರಿಕೆ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವವರೇ, ಅದರ ಒಡನಾಟ ಇದೆ, ಅದನ್ನು transport ಮಾಡುತ್ತಾರೆ, extract ಮಾಡುತ್ತಾರೆ. ಅಭಿವೃದ್ಧಿಯಲ್ಲಿ ಭಾಗಿಗಳಾಗುತ್ತಾರೆ. ಆದರೆ, ನಿಜವಾದ ಸತ್ಯಸಂಗತಿಯೇ ಬೇರೆ. ಕಾನೂನು ಇಲ್ಲದೆ ಒಂದು ಮೀಟರ್ ನದಿ ಆಳದಲ್ಲಿ ಮಾತ್ರ ಮರಳನ್ನು manually ತೆಗೆಯುವುದಕ್ಕೆ ಅವಕಾಶವಿರುವುದು.

ಅಧ್ಯಕ್ಷರು: ಉತ್ತರ ಹೇಳುವ ಸಮಯದಲ್ಲಿ ಹೇಳಿ.

ಡಾ|| ಹೆಚ್.ಸಿ. ಮಹದೇವಪ್ಪ: ಏಕೆ ಹೀಗೆ ಆಯಿತೆಂದು ತಮಗೆ ಹೇಳಿಬಿಡುತ್ತೇನೆ.

ಅಧ್ಯಕ್ಷರು: ಉತ್ತರವನ್ನು ನೀವೇ ಹೇಳಬೇಕಲ್ಲ ರೀ.

ಡಾ॥ ಹೆಚ್.ಸಿ. ಮಹದೇವಪ್ಪ: ಅದನ್ನು ತೆಗೆದುಬಿಟ್ಟು ಈಗ ಎಲ್ಲವನ್ನೂ ಐದಾರು ವರ್ಷಗಳಲ್ಲಿ ಒಡೆದು ಖಾಲಿ ಮಾಡಿ, ಆಮೇಲೆ ಅದನ್ನು ತೆಗೆಯಬೇಡಿ ಎಂದು Supreme Court order ಬಂತು.

ಅಧ್ಯಕ್ಷರು: ಮಹದೇವಪ್ಪನವರೆ, ಉತ್ತರವನ್ನು ನೀವೇ ಹೇಳಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ: ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಟಿ. ನರಸೀಪುರದಲ್ಲಿ ಹೊಡೆಯಬಾರದೆಂದು ವಿರೋಧ ಮಾಡಿದ್ದೇನೆ. ದಂಧೆ ಮಾಡಿಕೊಂಡು ನಿಂತಿರುವವರು ಇವರೆಲ್ಲ ಒಂದು ಗುಂಪು, ಆಗಿ ಏನು ಬೇಕೋ ಅದನ್ನೆಲ್ಲ ಮಾಡಿಬಿಡುತ್ತಾರೆ. ಆದರೆ, ನಾನು ನೇರವಾಗಿ ಅಥವಾ ಪ್ರತ್ಯಕ್ಷ/ಪರೋಕ್ಷವಾಗಿ ಕಾನೂನು ಬಾಹಿರ, ಕಾನೂನು ಬದ್ಧವಾಗಿ ಒಂದು ಕೂದಲಷ್ಟು ಇದರಲ್ಲಿ ಭಾಗಿಯಾಗುವುದಿಲ್ಲ. ನಾನು ಆಗಿಯೇ ಇಲ್ಲ.

ಅಧ್ಯಕ್ಷರು: ಅವರು ಹೇಳಿದ್ದು ಇಷ್ಟೇ ಇದೆ.

ಡಾ॥ ಹೆಚ್.ಸಿ. ಮಹದೇವಪ್ಪ: ಆ ರೀತಿ ಇದ್ದೇನೆಂದರೆ ನಾನು ಸಾರ್ವಜನಿಕ ಬದುಕಿನಲ್ಲಿಯೇ ಇರುವುದಿಲ್ಲ.

ಅಧ್ಯಕ್ಷರು: ಸಮಾಧಾನದಿಂದ ಇರಿ. ನನಗೇನೂ ಯಾವ ಮುಲಾಜಿಲ್ಲ. ಇದರಲ್ಲಿ ಇವತ್ತು PWD ಮಂತ್ರಿಗಳು ನೇರವಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಅಂದರೆ, as a Minister in-charge of the Department concerned ಇದು ಬರುತ್ತದೆ ಅದರಲ್ಲಿ ನಿಮ್ಮ personal allegations ಏನೂ ಬಂದಿಲ್ಲ. ಅದಕ್ಕೆ ಹೇಳಿದಾಗ ಅವರು ನನಗೊಂದು letter ಕಳುಹಿಸಿದ್ದಾರೆ. ಅದರ ಜೊತೆಗೆ, ಕೆಲವು ದಾಖಲಾತಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದನ್ನು ನೀವು ನೋಡಿ. ಅದನ್ನು ನೋಡಿದಮೇಲೆ ಮುಂದುವರೆಯುವುದಕ್ಕೆ ಅವಕಾಶ ಕೊಡುತ್ತೇನೆ. ಅಲ್ಲಿಯವರೆಗೆ ಹಾಗೇ ಇಟ್ಟಿರುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ್: ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡುವಂಥದ್ದೇನೆಂದರೆ, ಜನರಿಗೆ ತೊಂದರೆಯಾಗಿದೆ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ. ಲೋಕೋಪಯೋಗಿ ಇಲಾಖೆಯಿಂದ ತೆಗೆದು Mines and Geology Department ಗೆ ಹಾಕಿದ್ದೀರಿ.

ಅಧ್ಯಕ್ಷರು: ಹೇಳಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ: ಪ್ರತ್ಯೇಕ check post ಗಳನ್ನು ಹಾಕಿ ವ್ಯವಸ್ಥೆಯನ್ನು ಸರಿಪಡಿಸಿ. ಇಲ್ಲದೇ ಇದ್ದರೆ ಜನ ಶಾಪ ಹಾಕುತ್ತಾರೆ. ಇನ್ನೊಂದು ಏನಾಗಿದೆ ಎಂದರೆ, ಕೆಲವು Sub Inspectors ಗೆ, ಕೆಲವು ತಹಶೀಲ್ದಾರ್‌ಗಳಿಗೆ, ಕೆಲವು Engineer ಗಳಿಗೆ ಹಬ್ಬವಾಗಿದೆ. ಇದು ಅವರಿಗೊಂದು ದೊಡ್ಡ ಹಬ್ಬ ಆದಹಾಗಾಗಿದೆ.

ಅಧ್ಯಕ್ಷರು: ಹೌದು.

ಶ್ರೀ ಗೋವಿಂದ ಎಂ. ಕಾರಜೋಳ: ದಿನನಿತ್ಯ ರಾತ್ರಿ trucks ಹೋಗುತ್ತವೆ. Revenue ದವರೂ ವಸೂಲು ಮಾಡುತ್ತಾರೆ. Police ನವರೂ ವಸೂಲು ಮಾಡುತ್ತಾರೆ.

ಅಧ್ಯಕ್ಷರು: ಇದನ್ನು ಮುಕ್ತ ಮಾಡುವುದಕ್ಕೆ ಏನು ಬದಲಾವಣೆ ತರಬಹುದು?

ಶ್ರೀ ಗೋವಿಂದ ಎಂ. ಕಾರಜೋಳ: ಪರಿಹಾರ ಹೇಳುತ್ತೇನೆ. ಇಷ್ಟೇ ಅಲ್ಲದೆ, ಕೆಲವು Sub Inspector, Inspector ಗಳು sand ಹೊಡೆಯಲು Truck ಅನ್ನೇ ಮಾಡಿದ್ದಾರೆ. ನೀವು ಯಾರಾದರೂ permit ತೆಗೆದುಕೊಂಡು ಬಂದಿದ್ದರು ಎಂದರೆ ಅದನ್ನು ಹಿಡಿದು ನಿಲ್ಲಿಸುತ್ತಾರೆ. ಅವರ truck ಗಳು ರಾಜಾರೋಷವಾಗಿ ಮಹಾರಾಷ್ಟ್ರಕ್ಕೆ ಹೋಗುತ್ತವೆ, ಬೇರೆ ಜಿಲ್ಲೆಗಳಿಗೆ ಹೋಗುತ್ತವೆ. ಈ ರೀತಿ ವ್ಯವಸ್ಥೆ ಇದೆ. ಅದಕ್ಕೆ ನಾನು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಯಾರಾದರೂ ಒಬ್ಬರನ್ನು

tight ಮಾಡಿ ಸಾರ್ ಎಂದು ವಿನಂತಿ ಮಾಡಿದೆ. Tight ಮಾಡಿದರೆ ಮುಗಿದುಹೋಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕಾರಜೋಳ್‌ರವರೆ, ನಾನು ಇವರ ಮಾತನ್ನು ಗಮನಿಸುತ್ತಿದ್ದೇನೆ. ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಪ್ರಾರಂಭದಲ್ಲಿ ಏನು ಹೇಳಿದರೆಂದರೆ, ಸರ್ಕಾರಕ್ಕೆ ಇದು ಗೊತ್ತಿದೆ, ಇದು ಜಿಲ್ಲಾ ಉಸ್ತುವಾರಿ ಮಂತ್ರಿಗೆ ಗೊತ್ತಿದೆ ಎಂದರು.

ಶ್ರೀ ಗೋವಿಂದ ಎಂ. ಕಾರಜೋಳ: ಗೊತ್ತಿದೆ ಸಾರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಹೇಳಿ. DC ಗೆ ಗೊತ್ತಿದೆ, ಎಲ್ಲರಿಗೂ ಅದು ಗೊತ್ತಿದೆ. ಅಂದರೆ ಉಸ್ತುವಾರಿ ಮಂತ್ರಿ ಎಂದರೆ, he is Government. ಆಮೇಲೆ, ಈಗ check post ಹಾಕಿ ಎಂದು suggestion ಕೊಡುತ್ತಿದ್ದಾರೆ. ಅವರಿಗೇ ಗೊತ್ತಿದ್ದೂ ಅವರು ಏನೂ ಕ್ರಮ ತೆಗೆದುಕೊಂಡಿಲ್ಲವೆಂದಮೇಲೆ check post ಹಾಕಿದರೂ ಏನು ಪ್ರಯೋಜನ? ನಾನು ನಿಮಗೇನು ಹೇಳುತ್ತೇನೆಂದರೆ, ನೀವು ಹೇಳುವ ಮಾತಿನಲ್ಲಿ ನಿಮಗೆ ಬದ್ಧತೆ ಇದ್ದರೆ ಇಂಥ Inspector, ಇಂಥ Sub-Inspector, ಇದು vehicle number, ಈ route ನಿಂದ ಈ route ಗೆ ಹೋಗುತ್ತಾರೆ. ಇಂಥವರ ಸಂಬಂಧಿಗಳು ಇಂಥಿಂಥವರು ಇದರಲ್ಲಿದ್ದಾರೆಂದು ನೇರವಾಗಿ ಹೇಳಬೇಕು. ಆಗ ನಿಮ್ಮ ದಿಟ್ಟತನ ಹೊರಗೆ ಬರುತ್ತದೆ. ಹೀಗೆ ಸಾರಿಸಿದಹಾಗೆ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. Record ಗೆ ಹೋಗುತ್ತದೆ. That is not good. Rule does not permit.

ಶ್ರೀ ಸಿ.ಟಿ. ರವಿ: ರಮೇಶ್‌ಕುಮಾರ್‌ರವರೆ, ಅದಕ್ಕೆ ಬಸವಣ್ಣನವರು ಏರಿ ನೀರುಂಬಡೆ ಬೇಲಿ ಹೊಲ ಮೇಯ್ದೊಡೆ ತಾಯ ಮೊಲೆ ಹಾಲೆ ನಂಜಾಗಿ ಎಂದಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇದು ನಿಮ್ಮ ಅನುಭವದ ಮಾತು.

(ಗೊಂದಲ)

ಶ್ರೀ ಸಿ.ಟಿ. ರವಿ: ನಾನು ನಿಮಗೆ ಹೇಳಲಿಲ್ಲ. ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ?

(ಗೊಂದಲ)

(xxxx) (ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ)

ಶ್ರೀ ಸಿ.ಟಿ. ರವಿ: ಮಾಮೂಲಿ ಕೊಡುವವನಿಗೆ ಯಾವ ಕೇಸ್ ಇಲ್ಲ. ಬಡವ ಯಾರಾದರೂ ಮಾಡಿದರೆ ಕೇಸ್ ಆಗಬಹುದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: (xxxxxxxx) ನೀವು.

(ಗೊಂದಲ)

ಅಧ್ಯಕ್ಷರು: ರವಿಯವರೆ,

(ಗೊಂದಲ)

ಶ್ರೀ ಸಿ.ಟಿ. ರವಿ: ಒಂದು ಲಕ್ಷ ರೂಪಾಯಿ fine.

(ಗೊಂದಲ)

ಅಧ್ಯಕ್ಷರು: ನೀವು ಮಾತನಾಡುವಾಗ ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಬಡವ ಮನೆ ಕಟ್ಟುವುದಕ್ಕೆ ಕಷ್ಟ ಇದೆ.

(ಗೊಂದಲ)

ಅಧ್ಯಕ್ಷರು: ನೀವು ಮಾತನಾಡುವಾಗ ನೀವೇನು ಮಾತನಾಡಬೇಕು ಅದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು: ನೀವು ಬೇಗ ಹೇಳಿ.

(ಗೊಂದಲ)

ಶ್ರೀ ಆನಂದ್ @ ವಿಶ್ವನಾಥ್ ಚಂದ್ರಶೇಖರ ಮಾಮನಿ: ಮಾನ್ಯ ಸಭಾಧ್ಯಕ್ಷರೆ ಅಲ್ಲಿ ಹಿಂದುಗಡೆ ಕುಳಿತುಕೊಂಡು (xxxxxxxx) ಇವರು ಎಂದು ಮಾತನಾಡುತ್ತಾರೆ. ಇವರು ಯಾರು?

(ಗೊಂದಲ)

ಅಧ್ಯಕ್ಷರು: ಸ್ವಲ್ಪ ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು: ನಾರಾಯಣಸ್ವಾಮಿಯವರೆ, ಸುಮ್ಮನಿರಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮರಳು ಮಾಫಿಯಾ ಹಿಂದೆ ಯಾರಿದ್ದಾರೆ?

(ಗೊಂದಲ)

ಶ್ರೀ ಸಿ.ಟಿ. ರವಿ: ಅಂಗೈ ಹುಣ್ಣಿಗೆ ಕನ್ನಡಿ ಹಿಡಿಯಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಕಾಂಗ್ರೆಸ್‌ನಲ್ಲಿದ್ದಾರೆ, ಬಿಜೆಪಿಯಲ್ಲಿಲ್ಲ.

(ಗೊಂದಲ)

ಶ್ರೀ ಕೆ.ಎಂ. ನಾರಾಯಣಸ್ವಾಮಿ: ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಏನು ಹೇಳಿದರು? ನನಗೆ ಕೇಳಲಿಲ್ಲ.

(ಗೊಂದಲ)

ಶ್ರೀ ಆನಂದ್ @ ವಿಶ್ವನಾಥ್ ಚಂದ್ರಶೇಖರ ಮಾಮನಿ: (xxxxxxxx) ಇವರು ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಏನು ಮಾತನಾಡವುದು? ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು: ಅದನ್ನು ತೆಗದುಹಾಕಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಬಸವಣ್ಣ ಕಾಂಗ್ರೆಸ್ ನಲ್ಲಿದ್ದಾರೆ, ಬಿಜೆಪಿಯಲ್ಲಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಇದು ಯಾರಿಗೂ ಶೋಭೆ ತರುವಂಥದ್ದಲ್ಲ.

ಅಧ್ಯಕ್ಷರು: ಆಯಿತು, ನೀವೂ ಸರಿಯಾಗಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಏಕೆಂದರೆ, ಇದನ್ನು ನೀವು ನಡೆಮುಕೊಂಡು ಹೋಗಲಿ ಎಂದರೆ ನಾವು ಕುಳಿತುಕೊಳ್ಳುತ್ತೇವೆ, ಮಾತನಾಡುವುದೇ ಇಲ್ಲ. ಅದೇ ಇಚ್ಛೆ ಇದ್ದರೆ ಬೇಡ.

(ಗೊಂದಲ)

ಅಧ್ಯಕ್ಷರು: ಅವರು ಹೇಳಿದ ಮೇಲೆ ಕುಳಿತುಕೊಳ್ಳುವುದಲ್ಲ, ನಾವು

ಹೇಳಿದಮೇಲೆ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಈಗ ರಮೇಶ್‌ಕುಮಾರ್‌ರವರು ಏನು ಹೇಳಿದ್ದು? ನೇರವಾಗಿ ಹೇಳಬೇಡಿ, ಏನಾದರೂ ಇದ್ದರೆ, ಬಿಚ್ಚು ಮಾತಿನಿಂದ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಅಖಂಡ ಜಿಲ್ಲೆಯ ಎಲ್ಲಾ ಶಾಸಕರಿಗೂ ಗೊತ್ತಿರತಕ್ಕಂಥದ್ದು. ಜಿಲ್ಲಾ ಉಸ್ತುವಾರಿ ಮಂತ್ರಿಗೆ ಗೊತ್ತು, ಏಕೆಂದರೆ ನಾನು ಈಗ papers ತಂದಿಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳೇ ಸ್ವತಃ press statement ಕೊಟ್ಟಿದ್ದಾರೆ. ಅವರಿಗೂ ಎಲ್ಲರಿಗೂ ಗೊತ್ತಿದೆ. ಇಲ್ಲಿ ಗೊತ್ತಿರಲಾರದ ವಿಷಯ ಇಲ್ಲ. ಅದಕ್ಕೆ ಸದಸ್ಯರಲ್ಲದವರ ಹೆಸರನ್ನು ಹೇಳುವುದು ಬೇಡವೆಂದು ನಾನು ಹೇಳಲಿಲ್ಲ. ಆದರೆ, ನಾನು ನೇರವಾಗಿ ಹೇಳಿದ್ದೇನೆ. ಕಂದಾಯ ಇಲಾಖೆಯವರು ಎಂದು ಹೇಳಿದ್ದೇನೆ. ಪೋಲೀಸ್ ಇಲಾಖೆಯವರು ಎಂದು ಹೇಳಿದ್ದೇನೆ. ಲೋಕೋಪಯೋಗಿ ಇಲಾಖೆಯ ಕೆಲವು engineers ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

ಅಧ್ಯಕ್ಷರು: ಏಕೆ ಹೇಳುತ್ತೇನೆಂದು ತಿಳಿದುಕೊಳ್ಳಿ. ಏಕೆ ಹೇಳುತ್ತೇನೆಂದರೆ, ನಿರ್ದಿಷ್ಟವಾಗಿ ಯಾರಾದರೂ ಅದರಲ್ಲಿ ತೊಡಗಿದ್ದರೆ, ಅವರನ್ನು ನೀವು mention ಮಾಡುವುದು ಒಳ್ಳೆಯದು. ಏಕೆಂದರೆ, ಸರ್ಕಾರ ಕೂಡ ಅವರ ವಿರುದ್ಧವಾಗಿ ಕ್ರಮ ಕೈಗೊಳ್ಳುವುದಕ್ಕಾಗುತ್ತದೆ. ಏಕೆ ಹೇಳುತ್ತೇನೆಂದರೆ ಮೊನ್ನೆ ಕುಮಾರಸ್ವಾಮಿಯವರು ರಾಯಚೂರಿನ ಒಂದು ಪ್ರಕರಣವನ್ನು ಹೇಳಿದರು. ಜಿಲ್ಲಾಧಿಕಾರಿಗಳೇ ಅವರ ಮೇಲೆ COD ಗೆ refer ಮಾಡಬೇಕೆಂದು ಪತ್ರ ಬರೆದಿದ್ದರು. ಆ ಕಾಗದವನ್ನು ನಾನು ಮಂತ್ರಿಗಳಿಗೆ, ಕಳಿಸಿದೆ. ತಕ್ಷಣ COD ಗೆ ಮಾಡಿ ಮಾಡಿದ್ದಾರೆ. ಹಾಗೆ, ಇವತ್ತು ಎಲ್ಲರಿಗೂ ಚಾಟಿ ಬೀಸಬೇಕು. ಅದಕ್ಕೆ ನಿಮ್ಮ ಹತ್ತಿರ ನಿರ್ದಿಷ್ಟವಾದಂಥ ಏನಾದರೂ ದಾಖಲೆ ಇದ್ದರೆ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ: ದಾಖಲೆ ಇಲ್ಲ ಸಾರ್.

ಅಧ್ಯಕ್ಷರು: ಮತ್ತೆ ಹೇಳಿ. ಇಲ್ಲೇನಾಗುತ್ತದೆಂದರೆ,

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ: ರಾತ್ರಿ ಸಮಯದಲ್ಲಿ ಮರಳು ತೆಗೆದುಕೊಂಡು ಹೋಗುತ್ತಾರೆ.

ಅಧ್ಯಕ್ಷರು: ಅಷ್ಟು ಹೇಳಿ.

ಶ್ರೀ ಉಮೇಶ್ ವಿ. ಕತ್ತಿ: ರಾತ್ರಿ ತೆಗೆದುಕೊಂಡು ಹೋಗುವ ಮರಳನ್ನು ನಾವು follow ಮಾಡೋಣವೇ?

ಅಧ್ಯಕ್ಷರು: ಅದಕ್ಕೆ ಏನು ವ್ಯವಸ್ಥೆ ಮಾಡಬೇಕು ಹೇಳಿ?

ಶ್ರೀ ಉಮೇಶ್ ವಿ. ಕತ್ತಿ: ಸರ್ಕಾರಕ್ಕೆ ಎಲ್ಲಾ ಗೊತ್ತಿದೆ.

ಅಧ್ಯಕ್ಷರು: ಮತ್ತೆ ಇದೊಳ್ಳೆ ಕಥೆಯಾಯಿತಲ್ಲ.

ಶ್ರೀ ಉಮೇಶ್ ವಿ. ಕತ್ತಿ: DC ಗೆ ಗೊತ್ತಿದೆ, SP ಗೆ ಗೊತ್ತಿದೆ, Firing ಮಾಡಿಸಬೇಕೇ?

ಅಧ್ಯಕ್ಷರು: ನೀವೆಲ್ಲ ಸರ್ಕಾರ ನಡೆಸಿದವರು.

ಶ್ರೀ ಉಮೇಶ್ ವಿ. ಕತ್ತಿ: 3 ಸಲ firing ಆಯಿತು. ಈಗ firing ನಮ್ಮ ಮೇಲೂ ಆಗಬೇಕೆ?

ಅಧ್ಯಕ್ಷರು: ಹಿಂದೆ ನೀವೆಲ್ಲ ಸರ್ಕಾರ ನಡೆಸಿದವರು.

ಶ್ರೀ ಉಮೇಶ್ ವಿ. ಕತ್ತಿ: Firing ಆಗಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಈಗ ಅದಕ್ಕೆ ನೀವು ಗಮನಿಸಿದ್ದೀರಿ. ಇದನ್ನೆಲ್ಲ ಮುಕ್ತಾಯ ಮಾಡಬೇಕೆಂದರೆ ಏನು ಮುಂದಿನ ಕ್ರಮ ಕೈಗೊಳ್ಳಬೇಕೆಂಬುದಕ್ಕೆ ಸಲಹೆ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಸರ್ಕಾರಕ್ಕೆ ನನ್ನ ಸಲಹೆ ಇಷ್ಟೆ. ಇದಕ್ಕೆ ಪ್ರತ್ಯೇಕ sub division ಗಳನ್ನು open ಮಾಡಿ. ಈಗ ಲೋಕೋಪಯೋಗಿ ಇಲಾಖೆಯವರಿಗೆ ಕೊಡಬೇಡಿ. Border ಗಳಲ್ಲಿ check post ಗಳನ್ನು ಹಾಕಿ. ಆಯಾ ಜಿಲ್ಲೆಯಲ್ಲಿಯೇ sand ಮಾರಾಟವಾಗುವ ಹಾಗೆ ಮಾಡಿ. ಜನರ ಸಮಸ್ಯೆಯನ್ನು ಪರಿಹಾರ ಮಾಡಿ ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಆಯಿತು, ಸರಿ ಬಿಡಿ. ಕುಮಾರಸ್ವಾಮಿಯವರೆ, ನೀವು ಮುಕ್ತಾಯ ಮಾಡಿ. ಮುಕ್ತಾಯ ಮಾಡೋತ್ತೀರೋ, ಆಯಿತೋ? ನಿಮ್ಮ ಕಾಗದ ಬಂದಿದೆ. ಅದನ್ನು ಅವರಿಗೆ ನಾನು ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಿಮಗೆ ಆ documents, papers ಎಲ್ಲ ಕಳುಹಿಸಿದ್ದೇನೆ.

ಅಧ್ಯಕ್ಷರು: ಅದೇ ನೋಡುತ್ತಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: Copy ಎಲ್ಲ ಅಲ್ಲಿಯೇ ಕೊಟ್ಟುಬಿಟ್ಟಿದ್ದೇನೆ. ನನ್ನ ಹತ್ತಿರ ಇಲ್ಲಿ ಯಾವುದೂ ಇಲ್ಲ. Xerox ಮಾಡಿಸಿಕೊಡಿ ಅಷ್ಟರಲ್ಲಿ ಜಗದೀಶ್ ಶೆಟ್ಟರ್‌ರವರು ಮಾತನಾಡಲಿ. ತೊಂದರೆ ಇಲ್ಲ.

ಅಧ್ಯಕ್ಷರು: O.K. ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಕಳೆದ ಅಧಿವೇಶನದಲ್ಲಿ ಸಹ ಈ ಅಕ್ರಮ ಮರಳು ಸಾಗಾಣಿಕೆ ಬಗ್ಗೆ ಮಾತನಾಡಿದ್ದೇವೆ. ಅಂದು ಬೆಂಗಳೂರಿನಲ್ಲಿ 30 ದಿವಸ ಅಧಿವೇಶನ ನಡೆದಂಥ ಸಂದರ್ಭದಲ್ಲಿ ಮಹದೇವಪ್ಪನವರು ಇಲ್ಲಿ ಉತ್ತರವನ್ನೂ ಕೊಟ್ಟರು. ಸಾಕಷ್ಟು ವಿಚಾರಗಳನ್ನು ಹೇಳಿದೆವು. ಅವತ್ತು ಕೆಲವು documents ಬಗ್ಗೆ

ಹೇಳಿದೆವು. Filter sand ಆನೇಕಲ್ ಭಾಗದಲ್ಲಿ ನಡೆಯುತ್ತಿದೆ. ಹಿರೇಕೆರೂರು, ರಾಣೆಬೆನ್ನೂರು– Immediately ಒಬ್ಬರನ್ನು inspection ಗೆ ಕಳುಹಿಸಿ ಎಂದು ಹೇಳಿದೆ. ಅದರ result ಏನಾಯಿತೆಂದು ಗೊತ್ತಾಗಲಿಲ್ಲ. ಅಕ್ರಮವಾಗಿ ನಡೆಯುತ್ತಿದೆ. Filter sand ಮಾಡುವಂಥದ್ದು, ಎಲ್ಲ ಮಾಡುವುದು ಇವತ್ತಿಗೂ ನಡೆಯುತ್ತಿದೆ. ಅದು ಇಲ್ಲಿಯವರೆಗೂ ಬಂದ್ ಆಗಿಲ್ಲ. ನಾನು ಮೊನ್ನೆಯವರೆಗೂ ಕೇಳಿದೆ. ನಾನು ಮಾಹಿತಿ ತೆಗೆದುಕೊಂಡೆ. ಇನ್ನೂ ಇವತ್ತಿಗೂ ರಾಜಾರೋಷವಾಗಿ ನಡೆಯುತ್ತಿದೆ. ಈಗ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು. ಇವತ್ತು ಇದರಲ್ಲಿ ಯಾರು involve ಆಗಿದ್ದಾರೆ ಹೇಳಿ ಎಂದರು. ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಅಧಿಕಾರಿಗಳು involve ಆಗಿದ್ದಾರೆ. ಇದಕ್ಕೆ ನಾವು ಸಾಕ್ಷಿ, ಪುರಾವೆ ತರುವುದಕ್ಕಾಗುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಎಲ್ಲಾ ಕಡೆಯಲ್ಲಿ ಎಲ್ಲಾ ಅಧಿಕಾರಿಗಳು involve ಆಗಿದ್ದಾರೆಂದು ಹೇಳಿದರೆ ಅದು ಹೇಗೆ ಒಪ್ಪಲಿಕ್ಕಾಗುತ್ತದೆ?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಯಾರು involve ಆಗಿದ್ದಾರೆಂದು ಹೇಳಲಿ, ನಾವು action ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹಾಗಾದರೆ, ಇಲ್ಲವೆಂದು ಹೇಳಲಿ. ಇವತ್ತೇನೂ ನಡೆಯುತ್ತಿಲ್ಲವೆಂದು ಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ (ಮೂಲಸೌಕರ್ಯ, ವಾರ್ತಾ ಸಚಿವರು): specific ಆಗಿ ಹೇಳಲಿ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್: Sir you are sitting here. . . .

ಶ್ರೀ ಜಗದೀಶ್ ಶೆಟ್ಟರ್: ಒಂದು scarcity ಏಕಾಗುತ್ತಿದೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಎಲ್ಲಾ ಕಡೆ ಕೊರತೆಯಾಗುತ್ತಿದೆ.

ಅಧ್ಯಕ್ಷರು: ಆಪಾದನೆ ಮಾಡಿದಿರಿ. ಅದೇನು ಎಲ್ಲರೂ ಸೇರಿದ್ದಾರೆ. ಎಂದ ಕೂಡಲೇ ಎಲ್ಲರ ಮೇಲೆಯೂ ಒಂದು ರೀತಿ ಗೂಬೆ ಕೂರಿಸಿದಂತಾಗುತ್ತದೆ. ನಿರ್ದಿಷ್ಟವಾಗಿ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಮರಳು ಸಾಗಾಟ ಮಾಡುವಂಥ ಸಂಘದವರಿದ್ದಾರೆ. ಅವರು ನನ್ನ ಕಡೆ ಮನವಿ ಕೊಟ್ಟಿದ್ದಾರೆ. ಅದನ್ನು ನಿಮ್ಮ ಕಡೆ ಕಳುಹಿಸುತ್ತೇನೆ. ಅಧಿಕಾರಿಗಳು ಏನೇನು ತೊಂದರೆ ಕೊಡುತ್ತಿದ್ದಾರೆ, ಏನಾಗುತ್ತಿದೆ, ಏನು ತೊಂದರೆಯಾಗುತ್ತಿದೆ ಎಲ್ಲ ಹೇಳುತ್ತಿದ್ದಾರೆ. ಅವರಿಗೆ ಕಾನೂನುಬದ್ಧವಾಗಿ permit ಕೊಡುವುದಿಲ್ಲ. ಇವರು ಕೆಲವು guidelines, policy ಮಾಡಿದ್ದಾರಲ್ಲ, ಆ policy ಪ್ರಕಾರ ಇವತ್ತು ಅವರಿಗೆ permit ಆದರೂ ಕೊಡಬೇಕು. ಅದೂ ಇಲ್ಲ.

ಅಧ್ಯಕ್ಷರು: ಆ representative ಯಾರು?

ಡಾ|| ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): Policy ಇದ್ದದ್ದು ಅವರ ಸರ್ಕಾರದಲ್ಲಿ.

ಅಧ್ಯಕ್ಷರು: ಆಯಿತು.

ಡಾ|| ಹೆಚ್.ಸಿ. ಮಹದೇವಪ್ಪ: Please, ಕೇಳಿ ಸಾರ್. ಕಾನೂನು ಮಾಡಿರಲಿಲ್ಲ. ಹೇಗೆ ಬೇಕೋ ಹಾಗೆ ಮರಳು ಹೊಡೆಯುತ್ತಿದ್ದರು.

ಯಾವತ್ತಿಗೂ ಕೂಡ ರಾಜ್ಯಕ್ಕೆ ಎಷ್ಟು ಮರಳು ಬೇಕು, ಎಷ್ಟು ಬೇಡಿಕೆ ಇದೆ, ಎಷ್ಟು ಉತ್ಪಾದನೆ ಇದೆ? ಎಷ್ಟಾಗುತ್ತದೆ ಎಂದು ಅಂದಾಜು ಮಾಡಿ ಪೂರೈಕೆ ಮಾಡಿಲ್ಲ ಇಲ್ಲಿ ಎಲ್ಲಾ ಅಂಕಿಅಂಶಗಳಿವೆ. ಹೇಳುವವರು ಕೇಳುವವರು ಇಲ್ಲದಿರುವುದರಿಂದ ಯಥೇಚ್ಚವಾಗಿ ಹೊಡೆಯುತ್ತಿದ್ದರು. ಇದನ್ನೆಲ್ಲಾ ನೋಡಿ ನಾವು ಕಾನೂನು ತಂದೆವು. ಕಾನೂನು ಬಿಗಿಯಾದಾಗ ಸಂಪೂರ್ಣವಾಗಿ ಸಾಚಾತನದಿಂದ ಮರಳು ಗಣಿಗಾರಿಕೆ ನಡೆಯುತ್ತಿಲ್ಲ ಅಥವಾ ಕದ್ದು ಅಲ್ಲಿ ಇಲ್ಲಿ ಹೋಗುತ್ತಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಈ ತರಹದ ಘಟನೆಗಳು ಅಲ್ಲಲ್ಲಿ ನಡೆಯುತ್ತಿವೆ. ಅದಕ್ಕೆ ಕಡಿವಾಣ ಹಾಕಲಿಕ್ಕೆ ಈ ದಂಧೆ ಮಾಡುವವರನ್ನು ತಪ್ಪಿಸಬೇಕೆಂದು ಗೂಂಡಾ ಕಾಯ್ದೆ ತಂದಿದ್ದು. ಕಳೆದ 5–6 ವರ್ಷಗಳಲ್ಲಿ ಇದು ಪಾಲಿಸಿ ಇದ್ದು manually ಎಷ್ಟು ಮಾಡಬೇಕು human development ಗೆ ಎಷ್ಟು ಮರಳು ಬೇಕೋ ಅದನ್ನು ಮೀರಿ ಅಲ್ಲಿ extract ಮಾಡಿದ್ದಾರೆ. ಅದಕ್ಕೆ ನಾವು ನಿರ್ಬಂಧ ತಂದು environmental ರಕ್ಷಣೆಗಾಗಿ supreme court judgement ಬಂದ ಮೇಲೆ ಅದು slow down ಆಯಿತು. demand ನ್ನು meet ಮಾಡುವುದಕ್ಕೆ ಕಷ್ಟವಾಯಿತು. Green belt ಕೂಡ ಅದಕ್ಕೆ stay ಕೊಟ್ಟ ಮೇಲೆ environmental clearance ಆಗಬೇಕಾದರೆ ಸ್ವಲ್ಪ slow ಆಯಿತು. ಈಗ 600 ಕ್ಕೂ ಹೆಚ್ಚು points ಗುರುತಿಸಲಾಗಿದೆ.

ಅಧ್ಯಕ್ಷರು: ಈಗ ನೀವು ಏಕೆ ಉತ್ತರ ಕೊಡುತ್ತೀರಿ?

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ: ನಾನು ಇದನ್ನು ಏಕೆ ಹೇಳುತ್ತೇನೆಂದರೆ, ಹಿಂದೆ ಎಲ್ಲಾ ಈ ರೀತಿ ಮಾಡಿ ಈಗ ನಿಲ್ಲಿಸುವುದಕ್ಕೆ ಯಾವ ರೀತಿ ಮಾಡಬೇಕು, ಎಲ್ಲಾ ಹೇಳಬೇಕು ಅಲ್ಲವೆ? ಎಲ್ಲಾ ಸಾರಾಸಗಟಾಗಿ ಹೇಳಿ ಬಿಟ್ಟರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಮಹದೇವಪ್ಪನವರೆ, ಉತ್ತರ ನೀವೇ ಕೊಡುವವರು. ಇದಕ್ಕೆ ನಿಯಮವಿದೆ. ಈಗ ಸ್ವಲ್ಪ ಕೇಳಿ. ಶೆಟ್ಟರ್‌ರವರೆ ನೋಡಿ, ಈಗ ಒಂದು ಕೆಲಸ ಮಾಡಿ ನಿಮಗೆ representation ಕೊಟ್ಟಿರಬಹುದು ಅಥವಾ ಯಾರೋ ಹೇಳಿರಬಹುದು. ಯಾವ ಅಧಿಕಾರಿ ಮಟ್ಟದಲ್ಲಿ ಎಲ್ಲಿ ಯಾವ ರೀತಿ ನಡೆಯುತ್ತಿದೆ ಎಂದು ನೀವು ಹೇಳುವುದು ಒಳ್ಳೆಯದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಪತ್ರಿಕೆಯಲ್ಲಿ ಬಂದಿರುವ ಕೆಲವು ಉದಾಹರಣೆ ಕೊಡುತ್ತೇನೆ. ಯಾವ ರೀತಿಯಾಗಿ ತಹಸೀಲ್ದಾರ್ ಮೇಲೆ ಅಟ್ಯಾಕ್ ಆಗಿದೆ ಎಂಬುದರ ಬಗ್ಗೆ ಮಾಹಿತಿ ಕೊಡುತ್ತಿದ್ದೇನೆ. ಅಂದರೆ, ಇದನ್ನು ತಡೆಹಿಡಿಯಲಿಕ್ಕೆ ಏನು ಮಾಡಿದ್ದಾರೆ? ನವೆಂಬರ್ ತಿಂಗಳಲ್ಲಿ "ಮರಳು ಗದ್ದಲ ಲಾಠಿ ಏಟು" ಲಾಠಿ ಏಟು ಏಕೆ ಆಯಿತು ಅಲ್ಲಿ ಜನ ಹೋಗಿ ಅಕ್ರಮವಾಗಿ ತೆಗೆದುಕೊಂಡಿದ್ದೀರಿ ಎಂದು ಪ್ರತಿಭಟಿಸುತ್ತಾರೆ ಆಗ ಗದ್ದಲವಾಗಿ ಲಾಠಿ ಏಟು ಆಗಿದೆ. ಈ ವಿಷಯವೂ ಪತ್ರಿಕೆಯಲ್ಲಿ ಬಂದಿದೆ. ಈ documents ನ್ನು ಕಳುಹಿಸಿ ಕೊಡುತ್ತೇನೆ. ಮರಳು ಮಾಫಿಯಾಕ್ಕೆ ಒಂದು ಹುಡುಗಿ ಬಲಿ ಎಂದು ಪತ್ರಿಕೆಯ Headline ನಲ್ಲಿ ಬಂದಿದೆ. ಹಾಗಾದರೆ ಪತ್ರಿಕೆಯಲ್ಲಿ ಬಂದಿರುವ ಮಾಹಿತಿ ಸುಳ್ಳೆ? ಹಾಗಾದರೆ ಸರ್ಕಾರ ನಂಬುದಿಲ್ಲವೆ? ಅದು ಏನೂ ಇವರಿಗೆ ಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಅವನ್ನೆಲ್ಲಾ ಹೇಳ್ರಿ, ನಂತರ ಆ ಮಾಹಿತಿ ಎಲ್ಲಾ ಮಂತ್ರಿಗಳಿಗೆ ಕಳುಹಿಸಿ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸ್ವಲ್ಪ ಹೇಳಬೇಕಲ್ಲವೆ? ಹಾಗಾದರೆ ನಾವು ಹೇಳುವುದು ಬೇಡವೇ? ಹಾಗಾದರೆ ಚರ್ಚೆ ಮಾಡುವುದು ಬೇಡವೇ? ಏನಾಗಿದೆ ಎಂಬುದು ಜನರಿಗೆ ಗೊತ್ತಾಗುವುದು ಬೇಡವೇ?

(ಗೊಂದಲ)

ಅಧ್ಯಕ್ಷರು: ಆಯಿತು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ನೋಡಿ, ಕುಮಾರಸ್ವಾಮಿಯವರು ಅಕ್ರಮವಾಗಿ ಕೇರಳ ರಾಜ್ಯಕ್ಕೆ ಮರಳು ಸಾಗಾಣಿಕೆಯಾಗುತ್ತಿದೆ ಎಂದು ಹೇಳಿದರು. ಎಲ್ಲವೂ detail ಇಲ್ಲಿದೆ. ಅದನ್ನು ನಾನು ಕಳುಹಿಸಿ ಕೊಡುತ್ತೇನೆ. ಇದು ಎಲ್ಲಾ ಅಕ್ರಮವಾಗಿ ನಡೆಯುತ್ತಿದೆ. ನಾನು ಮುಗಿಸುತ್ತೇನೆ ನಾನೇನೂ yield ಆಗಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಕುಮಾರಸ್ವಾಮಿಯವರು ಹೇಳಬಹುದು, ಜಗದೀಶ್ ಶೆಟ್ಟರ್ ಹೇಳಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ಎಲ್ಲಾ ಇದೆ. ಪದೆ ಪದೇ ಏಕೆ ಈ ರೀತಿ ಮಾಡುತ್ತೀರಿ. "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ನೋಡಿಕೊಂಡನಂತೆ" ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಇವರಿಗೆ ಮನಸ್ಸು ಇಲ್ಲ.

ಶ್ರೀ ಕೆ.ಜೆ. ಜಾರ್ಜ್: ಕುಮಾರಸ್ವಾಮಿಯವರು, ಕೇರಳ ರಾಜ್ಯಕ್ಕೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ನಾನು ಈಗ ನಮ್ಮ ಮೈಸೂರು IG ಯವರ ಹತ್ತಿರ ಮಾತನಾಡಿದ್ದೇನೆ. ಅವರು

ಏನು ಹೇಳುತ್ತಾರೆಂದರೆ, ಕೇರಳಕ್ಕೆ ಮರಳು ಸಾಗಾಣಿಕೆಯಾಗುತ್ತಿಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಯಾವ ಅಧಿಕಾರಿ ಅವರು, ಅವರೇನು ಮನುಷ್ಯರೋ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಗೇಟ್‌ನಲ್ಲಿದ್ದವರನ್ನು ಏಕೆ withdraw ಮಾಡಿದಿರಿ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: Documents ತರಿಸಿ ಈಗ ತೋರಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಗೃಹ ಸಚಿವರೆ ಇದೇನಿದು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ನಮಗೆ ಅರ್ಥವಾಗುತ್ತಿಲ್ಲ. "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ನೋಡುತ್ತಾರೆ".

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಕೊಡಗಿನಿಂದ ಕಾಸರಗೂಡಿಗೆ ಎರಡು ರಸ್ತೆಗಳಿವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: documents ತರಿಸಿದ್ದೇನೆ. ಈಗ ತೋರಿಸುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ಕೇರಳಕ್ಕೆ ನಿರಂತರವಾಗಿ ಹೋಗಲಿಕ್ಕೆ ಎರಡು ರಸ್ತೆಗಳಿದ್ದ ಗೇಟ್‌ಗಳಲ್ಲಿ ಪೋಲಿಸ್‌ರನ್ನು ಏಕೆ ವಿತ್ ಡ್ರಾ ಮಾಡಿದಿರಿ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೀವು ನನಗೆ ಮಾಹಿತಿ ಕೊಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಅದು ನಿಮಗೆ ಗೊತ್ತಿರುವಂಥದ್ದೇ ಆ ಫೋಟೋ ಕೂಡ ಇದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನನಗೆ ಹತ್ತು ನಿಮಿಷ ಮಾತನಾಡಲು ಅವಕಾಶ ಕೊಡಿ ಸ್ವಾಮಿ, ಏಕೆ ಈ ರೀತಿ ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು: ಆಯಿತು ಹೇಳ್ರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು ಸ್ವಲ್ಪ ಫ್ಯಾಕ್ಟ್ಸ್ ಹೇಳಬಾರದೆ? ಇವರು ನಂತರ ಉತ್ತರ ಕೊಡಲಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನನ್ನ ಹತ್ತಿರ ಆ ಫೋಟೋ ಇದೆ. ಲೋಡ್ ಹಿಡಿದಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನನಗೆ ಆ ಫೋಟೋ ಕಳುಹಿಸಿ ಕೊಡಿ. ನಾನು action ತೆಗೆದುಕೊಳ್ಳುತ್ತೇನೆ. ಇಷ್ಟು ದಿವಸವಾಯಿತು ಒಂದು ದಿವಸವೂ ಈ ಬಗ್ಗೆ ಹೇಳಲಿಲ್ಲ, ಈಗ ಇಲ್ಲಿ ಬಂದು ಹೇಳುತ್ತೀರಿ.

(ಗೊಂದಲ)

ಅಧ್ಯಕ್ಷರು: ಬೋಪಯ್ಯನವರೆ ಇದು ಒಳ್ಳೆ ಕಥೆಯಾಯಿತಲ್ಲ. ಬೋಪಯ್ಯನವರೆ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ನನಗೆ ಹತ್ತು ನಿಮಿಷ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ನೋಡಿ ನಿಮಗೆ ಆ ಪತ್ರಿಕೆಯಲ್ಲಿ ಆ ವಿಚಾರ ಬಂದಿದೆಯೇ ಅಥವಾ ಯಾರಾದರೂ ಬರೆದು ಮನವಿ ಕೊಟ್ಟಿದ್ದಾರೆ ಅದನ್ನು ಏನೆಂದು ಹೇಳಿ. ಮುಗಂ ಆಗಿ ಹೇಳಬೇಡಿ. ಏಕೆಂದರೆ, ನಮ್ಮ ನಿಯಾಮಾವಳಿ ಪ್ರಕಾರ ಖಚಿತವಾಗಿ ಇದ್ದರೆ ಹೇಳಬೇಕು ಇಲ್ಲದಿದ್ದರೆ ಮುಗಂ ಆಗಿ ಹೇಳಬಾರದು.

ಶ್ರೀ ಜಗದೀಶ್ ಶೆಟ್ಟರ್: Minister ಮೇಲೆ ನಾವೇನಾದರೂ allegation ಮಾಡುತ್ತಿದ್ದರೆ ನಾನು notice ಕೊಡುತ್ತಿದ್ದೆ. ಈ ರಾಜ್ಯದಲ್ಲಿ general ಆಗಿ ಏನು ನಡೆಯುತ್ತಿದೆ ಎಂದು ಹೇಳಬೇಕಲ್ಲವೆ? ಅಕ್ರಮ ಮರಳು ಸಾಗಾಣಿಕೆ ಮಾಡುವಾಗ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಏನು attack ಆಗುತ್ತಿದೆ, ಇದನ್ನು ನಾನು ಇಲ್ಲಿ ಹೇಳಬೇಕಲ್ಲವೆ? ಕೇರಳ ರಾಜ್ಯಕ್ಕೆ ಅಕ್ರಮ ಮರಳು ಸಾಗಾಣಿಕೆ, ಅಕ್ರಮ ಮರಳು ಕಲ್ಲು ತೂರಾಟ, ಮರಳು ಮಾಫಿಯಾದಿಂದ ತಹಸೀಲ್ದಾರ್‌ಗೆ ಬೆದರಿಕೆ,

(ಗೊಂದಲ)

ಅಧ್ಯಕ್ಷರು: ಎಲ್ಲಿ ಏನೆಂದು ಸ್ವಲ್ಪ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹೇಳುತ್ತೇನೆ. ಕೋಲಾರದಲ್ಲಿ ಅಕ್ರಮ ಮರಳು ಸಾಗಾಣಿಕೆ ತಡೆಯಲು ಹೋದ ತಹಸೀಲ್ದಾರ್ ರಂಗೇಗೌಡರಿಗೆ ನರಸಾಪುರ ಬಳಿ ಗುಂಪೊಂದು ಮಚ್ಚು ತೋರಿಸಿ ಪ್ರಾಣ ಬೆದರಿಕೆ ಹಾಕಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದೆ ಹಾಗಾದರೆ ಇವನ್ನೆಲ್ಲಾ ನಂಬಬಾರದೆ?

ಶ್ರೀ ಕೆ.ಜೆ. ಜಾರ್ಜ್: ಪತ್ರಿಕೆಯಲ್ಲಿ ಬಂದಿರುವುದೆಲ್ಲಾ ನಂಬಬೇಕೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ತನಿಖೆ ಮಾಡಿ, ಇವರು ಇಷ್ಟು ಅವಸರ ಏಕೆ ಮಾಡುತ್ತಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಸರ್ಕಾರದಿಂದ ಕ್ರಮ ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು action ಏನು ತೆಗೆದುಕೊಂಡಿದ್ದೀರೆಂದು ಉತ್ತರ ಕೊಡುವಾಗ ಹೇಳಿ ಯಾರೂ ಬೇಡ ಎನ್ನುತ್ತಾರೆ. ಅಥಣಿ ತಾಲ್ಲೂಕಿನ ತಹಸೀಲ್ದಾರ್‌ರವರನ್ನು ಬಡಿದಿದ್ದಾರೆ. ಬಡಿದವರು ಜೈಲ್‌ನಲ್ಲಿದ್ದಾರೆ, ಹಾಗಾದರೆ ಅದು ಸುಳ್ಳು ಎಂದು ಹೇಳಲಿಕ್ಕೆ ಆಗುತ್ತದೆಯೇ? ರಾಯಚೂರಿನಲ್ಲಿ ನಕಲಿ royalty ರಶೀದಿ ಮುದ್ರಣ, ಅಧಿಕಾರಿಗಳಿಗೆ monthly fix, ಚುನಾವಣೆಗೆ ಹರಿದು ಬರುತ್ತಿದೆ ಉಸುಕಿನ ಬೇನಾಮಿ ದುಡ್ಡು. ಇಷ್ಟೆಲ್ಲಾ ಮಾಹಿತಿ ಬರುತ್ತಿದೆ ಇದನ್ನೆಲ್ಲಾ ಸರ್ಕಾರ ಗಮನಿಸಬೇಕಾಗುತ್ತದೆ. ಇದರಿಂದ royalty ಸರ್ಕಾರಕ್ಕೆ ಎಷ್ಟು ಬರುತ್ತದೆ? ಕಾನೂನುಬದ್ದವಾಗಿ ಮಾಡಿದ್ದರೆ 4 ರಿಂದ 5 ಸಾವಿರ ಕೋಟಿ ಸರ್ಕಾರಕ್ಕೆ ರಾಯಲ್ಟಿ ಬರಬೇಕಾಗಿತ್ತು. ಏಕೆ ಬರುತ್ತಿಲ್ಲ? ಪಕ್ಕದ ಆಂಧ್ರ ಪ್ರದೇಶ, ತೆಲಂಗಾಣದವರು ಮೊನ್ನೆ ಬಜೆಟ್ proposal ಎಷ್ಟು ಕೊಟ್ಟಿದ್ದಾರೆ? 4 ರಿಂದ

5 ಸಾವಿರ ಕೋಟಿ ಮರಳು ಸಾಗಾಣಿಕೆಯಿಂದ ರಾಜ್ಯಕ್ಕೆ ರಾಯಲ್ಟಿ ಬರುತ್ತದೆಂದು expect ಮಾಡುತ್ತಾರೆ. ನಮ್ಮಲ್ಲಿ ಎಲ್ಲಾ ಕೂಡಿ ಇಲ್ಲಿಯವರೆಗೆ royalty ರೂಪದಲ್ಲಿ ಬಂದಿರುವುದು 500 ಕೋಟಿ ಮಾತ್ರ. 200 ರಿಂದ 300 ಕೋಟಿ ಫೈನ್ ವಸೂಲಿ ಮಾಡುತ್ತಾರೆ, 500 ಕೋಟಿ royalty ಬರುತ್ತದೆ, ಉಳಿದಿದ್ದೆಲ್ಲಾ illegal ಆಗಿ ಹೋಗುತ್ತಿದೆ. ಇವತ್ತಿನ ವ್ಯವಹಾರ ನೋಡಿ ನಾನು ಹೇಳುವುದಾದರೆ, ಇಡೀ ರಾಜ್ಯದಲ್ಲಿ ಅಕ್ರಮ ಮರಳು ಸಾಗಾಣಿಕೆಯಿಂದಲೇ 6 ಸಾವಿರ ಕೋಟಿ ಭ್ರಷ್ಟಾಚಾರ ನಡೆಯುತ್ತಿದೆ. ನಮ್ಮ ಗ್ರಾಹಕರಿಗೆ ಒಂದು ಲೋಡಿಗೆ ಎಷ್ಟಕ್ಕೆ ಸಿಗಬೇಕು? 4 ರಿಂದ 5 ಸಾವಿರ ರಂತೆ ಒಂದು ಲೋಡಿಗೆ ಸಿಗಬೇಕು. ಆದರೆ, ಧಾರವಾಡ ಅಥವಾ ಬೆಳಗಾವಿಯಲ್ಲಿ 25 ರಿಂದ 30 ಸಾವಿರಕ್ಕೆ ಒಂದು ಲೋಡು ಉಸುಕು ಸಿಗುತ್ತಿದೆ. ಬೆಂಗಳೂರಿನಲ್ಲಿ 50 ಸಾವಿರಕ್ಕೆ ಒಂದು ಲೋಡು ಉಸುಕು ಸಿಗುತ್ತದೆ. ಹಾಗಾದರೆ, 5 ಸಾವಿರ ರೂಪಾಯಿಗೆ ಸಿಗುವಂಥ ಒಂದು ಲೋಡ್‌ಗೆ 25 ರಿಂದ 30 ಸಾವಿರ ಕೊಟ್ಟು ಗ್ರಾಹಕ ಹೇಗೆ ತೆಗೆದುಕೊಂಡು ಮನೆ ಕಟ್ಟಿ ಬದುಕಬೇಕು? ಯಾವ ರೀತಿಯಾಗಿ ಸರ್ಕಾರಿ ಕೆಲಸಗಳು ನಡೆಯಬೇಕು? ಇತ್ತೀಚಿನ ದಿನಗಳಲ್ಲಿ ಉಸುಕು ಇಷ್ಟು costly ಏಕೆ ಆಯಿತು ಎನ್ನುವುದರ ಬಗ್ಗೆ ಸರ್ಕಾರ ಅವಲೋಕಿಸಬೇಕಲ್ಲವೆ? ಹಾಗಾದರೆ ಈ royalty ಎಲ್ಲಿಗೆ ಹೋಗುತ್ತಿದೆ? ಅಕ್ರಮವಾಗಿ ಯಾರ ಜೇಬಿಗೆ ಸೇರುತ್ತದೆ? ಇದನ್ನೆಲ್ಲಾ ಒಂದು investigation ಮಾಡಿ enquiry ಮಾಡಬೇಕಲ್ಲವೆ? ಇದೇನೂ ಮಾಡಲಾರದೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದ ರೀತಿ ಮಂತ್ರಿಗಳು ಉತ್ತರ ಕೊಡುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಈ ಒಂದು ವಿಷಯದಲ್ಲಿಯೇ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಚಾರ ನಡೆಯುತ್ತಿದೆ. ನಾನು ಇತ್ತೀಚಿಗೆ ಬೆಳಗಾವಿಗೆ ಬಂದಿದ್ದೆ. ಬೆಳಗಾವಿಯಲ್ಲಿ ಎಲ್ಲಾ ಒಂದು ತಿಂಗಳು ಬಂದ್ ಮಾಡಿದ್ದರು. ಆ ಕೂಲಿ ಕಾರ್ಮಿಕರು, ಬಿಲ್ಡರ್ಸ್, ಎಲ್ಲಾ ಕೆಲಸ ಮಾಡುವವರು ಎಲ್ಲರೂ ಬೀದಿಗೆ ಬಿದ್ದಿದ್ದರು. 15 ರಿಂದ 20 ಸಾವಿರ ಜನ ಬೀದಿಗೆ ಬೀಳುವಂಥ ಪರಿಸ್ಥಿತಿ ಬೆಳಗಾವಿಯಲ್ಲಿ ಆಗಿತ್ತು. ಈಗಲೂ ಸಹ ಸರಿಯಾದ ರೀತಿಯಲ್ಲಿ ಉಸುಕು supply ಆಗುತ್ತಿಲ್ಲ. ಈ ರೀತಿಯಾಗಿ ಸರಿಯಾಗಿ

ಉಸುಕು supply ಆಗದಿದ್ದಾಗ ಇದರ ಮೇಲೆ depend ಆದಂಥ ಲಕ್ಷಾಂತರ ಜನ ಕಾರ್ಮಿಕರು ಬೀದಿಗೆ ಬೀಳುತ್ತಾರೆ. ಯಾವುದೇ ಒಂದು construction works ನಡೆಯುವುದಿಲ್ಲ. ಅಕ್ರಮವಾಗಿ ಭ್ರಷ್ಟಚಾರ ಇಂದು ನಡೆಯುತ್ತಿದೆ. ಇದೊಂದು ದೊಡ್ಡದಾದ ಲಾಬಿ. Sand mining ಇದು ಒಂದು ದೊಡ್ಡದಾದ ಲಾಬಿ. ಇದಕ್ಕೆ ಕಡಿವಾಣ ಹಾಕಿಸಿ. ಇದಕ್ಕೆ ಒಂದು ಪಾಲಿಸಿ ಇರುವುದು ಸರಿ. 2011 ರಲ್ಲಿ ಇದಕ್ಕೊಂದು ಪಾಲಿಸಿ ತಂದೆವು. ಮಾನ್ಯ ಮಹಾದೇವಪ್ಪನವರು, ಬಿಜೆಪಿ ಸರ್ಕಾರ ಇದ್ದಾಗ ಒಂದು ಪಾಲಿಸಿ ತಂದರು ಎಂದು ಹೇಳಿದರು. ಆಯಿತು ನಾವು ತಂದಿದ್ದೇವೆ ಅಲ್ಲವೆ, ಅದರಲ್ಲಿ ತಪ್ಪು ಇದ್ದರೆ ನೀವು ಅದನ್ನು ಸರಿ ಮಾಡಿ, ನಿಮಗೆ ಯಾರು ಬೇಡ ಎನ್ನುತ್ತಾರೆ. Control ಮಾಡಿ, ನೀವು ಸರ್ಕಾರ ನಡೆಸುವವರು. ನಾವು ತಪ್ಪು ಮಾಡಿದ್ದರೆ ನೀವು ಅದೇ ತಪ್ಪನ್ನು ಮುಂದುವರಿಸಬೇಕೆಂದೇನೂ ಇಲ್ಲ. ಆ ಪಾಲಿಸಿಯಲ್ಲಿ ಏನು change ಮಾಡುತ್ತೀರೋ ಮಾಡಿ. ನಿಮಗೆ ಯಾರು ಬೇಡ ಎನ್ನುತ್ತಾರೆ. ನಿಮಗೆ ಸಂಪೂರ್ಣ ಅಧಿಕಾರ ಇದೆ. ನಿಮ್ಮ ಕಂಟ್ರೋಲ್‌ನಲ್ಲಿ ಇದೆ, ಏನು ನಡೆಯುತ್ತಿದೆ ಎಂಬುದು ನಿಮಗೆಲ್ಲಾ ಗೊತ್ತಿದೆ. ಶಾಸಕರಿಗೆಲ್ಲರಿಗೂ ಅವರವರ ಜಿಲ್ಲೆಯಲ್ಲಿ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಏನು ನಡೆಯುತ್ತಿದೆ, ಏನು ಪರಿಸ್ಥಿತಿ ಇದೆ, ಎಂಬುದು ಗೊತ್ತಿರುತ್ತದೆ. ಇದನ್ನು ಕಂಟ್ರೋಲ್ ಮಾಡಿ ನಿಮಗೆ ಯಾರು ಬೇಡ ಎನ್ನುತ್ತಾರೆ? ಕಳೆದ ಅಧಿವೇಶನದಲ್ಲಿ ಹೇಳಿದೆವು, ಇದರಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ನಡೆಯುತ್ತಿದೆ ಎಂದು ಕಳೆದ ಒಂದು ವರ್ಷದಿಂದ ಹೇಳುತ್ತಿದ್ದೇವೆ. ಇದಕ್ಕೆ ಕಡಿವಾಣ ಹಾಕುವಂಥ ಕೆಲಸ ಮಾಡಿ. Policy change ಮಾಡಿ. ಏನು restrictions ಮಾಡುತ್ತಿರೋ ಮಾಡಿ. Illegal ಇದ್ದರೆ ಅದನ್ನು ತಡೆಯಿರಿ ನಾವು ನಿಮಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಈ ರೀತಿಯಾದ ಕಡಿವಾಣ ಹಾಕಿದರೆ ಮಾತ್ರ ಇದು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದಿಂದ ಪ್ರಾಮಾಣಿಕವಾದ ಪ್ರಯತ್ನ ಬೇಕು. ಇವತ್ತು ಅವರೇನು ಪಾಲಿಸಿ ಚೇಂಜ್ ಮಾಡುತ್ತಾರೋ ಮಾಡಲಿ. ನಾವು ಅವರಿಗೆ ಸಂಪೂರ್ಣ ಅಧಿಕಾರ ಕೊಡುತ್ತೇವೆ. ನಮ್ಮ ಗ್ರಾಹಕರಿಗೆ 4 ರಿಂದ 5 ಸಾವಿರಕ್ಕೆ ಒಂದು ಲೋಡು ಉಸುಕು ಸಿಕ್ಕುವಂತಾಗಬೇಕು. ಅಕ್ರಮ ತಡೆಯ ಬೇಕು,

ಇದರಲ್ಲಿ ಯಾರ್‍ಯಾರು ಅಧಿಕಾರಿಗಳು ಷಾಮೀಲಾಗಿದ್ದಾರೆ, ಅದರಲ್ಲಿ PWD ಯವರು coordinate ಮಾಡಬೇಕು. ಜಿಲ್ಲಾಧಿಕಾರಿಗಳು ಇರುತ್ತಾರೆ, RTO officers ಇರುತ್ತಾರೆ, ಗಣಿ ಇಲಾಖೆಯವರು ಇರುತ್ತಾರೆ, Police Department ನವರು ಇರುತ್ತಾರೆ, ಎಲ್ಲರೂ co-ordinate ಮಾಡಿಕೊಂಡು ಕೆಲಸ ಮಾಡಬೇಕು. ಈಗಾಗಲೇ ತಮಗೆ ಹೇಳಿದ ಹಾಗೆ, Association ನವರು ಹುಬ್ಬಳ್ಳಿಯಲ್ಲಿ ನನಗೆ ಬಂದು ಮನವಿ ಕೊಟ್ಟರು. ಮನವಿ ಕೊಟ್ಟು ಏನು ಹೇಳಿದರು ಎಂದರೆ, ಇಲ್ಲಾ ಸರ್ ಹಣದ ವ್ಯವಹಾರ ಬಹಳ ಆಗುತ್ತಿದೆ ಎಲ್ಲರಿಗೂ ಕೊಡುವುದು ನಮಗೆ ತ್ರಾಸ್ ಆಗಿದೆ ಅದಕ್ಕೆ ಕಡಿಮೆ ಮಾಡಿಸಿ, ಭ್ರಷ್ಟಾಚಾರ ಕಡಿಮೆ ಮಾಡಿಸಿ ಎಂದು ನನಗೆ ಮನವಿ ಮಾಡಿದರು.

ಅಧ್ಯಕ್ಷರು: ಅವರೇನು ಕೊಟ್ಟಿದ್ದಾರೆ ಅದನ್ನು ಸರ್ಕಾರಕ್ಕೆ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೆ ನಾನು ಏನು ಹೇಳಿದೆ ಎಂದರೆ, ನೀವು ಒಂದು statement ಕೊಡಿ. ಯಾರು ರೊಕ್ಕ ಕೇಳುತ್ತಾರೆ ಅವರ ಮೇಲೆ ನಾನು action ತೆಗೆದುಕೊಳ್ಳುತ್ತೇನೆ ನೀವು statement ಕೊಡಿ ಎಂದು ಹೇಳಿದೆ. ಈ ರೀತಿಯಾಗಿ ಭ್ರಷ್ಟಾಚಾರ open ಆಗಿ ನಡೆಯುತ್ತಿದೆ. ಅದಕ್ಕೆ ಅವರು ಇವರು ಎಂದು ಹೇಳುವುದಲ್ಲ.

ಅಧ್ಯಕ್ಷರು: ಅದಕ್ಕೆ ಅವರು ಏನು ಕೊಟ್ಟಿದ್ದಾರೆ, ಅದನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿ ಕೊಡಿ. ಮಂತ್ರಿಗಳು ಸಂಬಂಧಪಟ್ಟವರಿಂದ ತನಿಖೆ ಮಾಡಿಸಿ evidence ಬಂದರೆ proceed ಆಗುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಕಳೆದಬಾರಿ ನಾನು ಎಲ್ಲವನ್ನೂ ಕಳುಹಿಸಿದ್ದೆ, ಆನೇಕಲ್, ರಾಣೆಬೆನ್ನೂರು, ಹಿರೇಕೆರೂರು ಹತ್ತಿರ ಇಲ್ಲಿ ಎಲ್ಲಾ ಏನು ನಡೆಯುತ್ತಿದೆ, ನಮ್ಮ ಚಿಕ್ಕೋಡಿ ಭಾಗದಲ್ಲಿ ಏನು ನಡೆಯುತ್ತಿದೆ, ಎಲ್ಲಾ ಕಾಗದ ಪತ್ರಗಳನ್ನು ಕಳುಹಿಸಿದ್ದೆ. ಅದನ್ನು ಅವರು ಹೇಳಲಿ. ಕಳೆದ ಬಾರಿ ಅಧಿವೇಶನದಲ್ಲಿ ಕಳುಹಿಸಿರುವುದಕ್ಕೆ ಕ್ರಮ ಏನಾಯಿತು? ನಿಲ್ಲಿಸಿದ್ದರೋ ಇಲ್ಲವೋ ಎಂದು ಅವರು ಹೇಳಲಿ. ನಾನು ಎಲ್ಲಾ documents ನ್ನು

ಕಳುಹಿಸಿದ್ದೇನೆ. ಅವರು ಅದಕ್ಕೆಲ್ಲಾ ಉತ್ತರ ಕೊಡಲಿ. ಅವರು ಅದರ ಬಗ್ಗೆ ಸ್ಪಷ್ಟೀಕರಣ ಕೊಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯದ ಬಗ್ಗೆ ಮಾತನಾಡುವುದಿಲ್ಲ. ಆದರೆ ಸ್ಪೆಸಿಫಿಕ್ ಆಗಿ ವಿಷಯ ಹೇಳಿ ಎಂದು ತಾವು ಹೇಳುತ್ತಿದ್ದೀರಿ. ಹಿಂದಿನ ಅಧಿವೇಶನದಲ್ಲಿ ನಾವು ಸ್ಪೆಸಿಫಿಕ್ ಆಗಿ ಹೇಳಿದ್ದ ವಿಚಾರ ಏನಾಯಿತೆಂಬುದು ಗೊತ್ತಿಲ್ಲ. ಹಾವನ್ನು ಹೊಡೆದು ಹದ್ದಿಗೆ ಹಾಕುವುದು ಎಂಬ ಗಾದೆ ನಮ್ಮ ಕಡೆ ಇದೆ. ಸರ್ಕಾರ ಈ ಎಲ್ಲ ಮಾಹಿತಿ ತೆಗೆದುಕೊಂಡು ಅವರ ಜೊತೆ match mixing ಮಾಡಿಕೊಂಡಿದೆ.

ಅಧ್ಯಕ್ಷರು: ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೇ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಈ ಸದನದಲ್ಲಿ ಮತ್ತು ಹೊರಗಡೆ ಹೇಳುತ್ತೀರಿ ಹಾಗೆಯೇ ಮಾನ್ಯ ಮಂತ್ರಿಗಳ ಗಮನಕ್ಕೂ ಸಹ ತರುತ್ತೀರಿ. ಆಗಲೂ ಸಹ ಏನೂ ಕ್ರಮ ಆಗದೇ ಹೋದರೆ ನಾವು ಮಾಹಿತಿಯನ್ನು ಕಳುಹಿಸಿಕೊಟ್ಟಿದ್ದೆವು. ಅದರ ಬಗ್ಗೆ ಏನು ಮಾಡಿದ್ದೀರೆಂದು ಇನ್ನೊಂದು ಸಾರಿ ನೆನಪು ಮಾಡಿಕೊಡಿ. ಮತ್ತೊಮ್ಮೆ ಕೇಳಬೇಕಾಗುತ್ತದೆ.

ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ಹಾಗೆಯೇ ಬಹಳ ವರ್ಷಗಳಿಂದಲೂ ಸಹ ಚರ್ಚೆ ಆಗುತ್ತಿದೆ. ಎರಡು ಅಧಿವೇಶನದ ಹಿಂದೆ ನನ್ನ ಜಿಲ್ಲೆಯಲ್ಲಿ ಆಗುತ್ತಿರುವ ಘಟನೆಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಹಾಗೂ ಗೃಹ ಇಲಾಖೆಯ ಸಚಿವರೆಲ್ಲರೂ ಏನು ಹೇಳಿದರೆಂದರೆ, ಲೋಕಲ್‌ನಲ್ಲಿ ಬೇಕಾಗಿರುವ ಅಂದರೆ, ಆಶ್ರಯ ಮನೆ, ದೇವಸ್ಥಾನ, ಸರ್ಕಾರಿ ಕಟ್ಟಡಗಳಿಗೆ ತೆಗದುಕೊಳ್ಳುವುದಕ್ಕೆ ಯಾವುದೇ ಅಭ್ಯಂತರ ಇಲ್ಲ. ಲೋಕಲ್‌ನಲ್ಲಿ ಸಣ್ಣಪುಟ್ಟ ಇರುವುದನ್ನು ಉಪಯೋಗ ಮಾಡುವುದಕ್ಕೆ ಡೈರೆಕ್ಷನ್ ಕೊಡುತ್ತೇವೆಂದು ಹೇಳಿದ್ದರು. ಆದರೆ,

ಇವತ್ತಿನದಿವಸ ಇದು ಮರಳು ಮಾಫಿಯಗಳಿಗೆ ಮಾತ್ರ ಅನುಕೂಲವಾಗುತ್ತಿದೆ. ಕಾನೂನನ್ನು ಟೈಟ್ ಮಾಡಿ ಇದನ್ನು ಗೂಂಡಾ ಕಾಯಿದೆ ಅಡಿಯಲ್ಲಿ ತಂದ ಮೇಲೆ ಯಾರ ಮೇಲೆ ಗೂಂಡಾ ಕಾಯಿದೆ ಕೇಸ್ ರಿಜಿಸ್ಟರ್ ಆಗತ್ತಿದೆ ಎಂದರೆ, ಟ್ರ್ಯಾಕ್ಟರ್ ಮೂಲಕ ಆಶ್ರಯ ಮನೆಗಳಿಗೆ, ದೇವಸ್ಥಾನಗಳ ನಿರ್ಮಾಣಕ್ಕೆ ಮರಳು ತೆಗೆದುಕೊಂಡು ಹೋಗುವವರ ಮೇಲೆ ಕೇಸ್ ರಿಜಿಸ್ಟರ್ ಆಗುತ್ತಿದೆ. ಯಾರು ರಾತ್ರಿ ಸಮಯದಲ್ಲಿ ಮರಳನ್ನು ತೆಗೆದುಕೊಂಡು ಮರಳು ಮಾಫಿಯ ಮಾಡುತ್ತಿರುವವರಿಗೆ ನಿಮ್ಮ ಪೊಲೀಸ್ ಇಲಾಖೆಯವರಾಗಲೀ ಅಥವಾ ಕಂದಾಯ ಇಲಾಖೆಯವರಾಗಲೀ ಕೇಸ್ ಹಾಕತ್ಕಂಥದ್ದು ಇಲ್ಲ. ಹೊರಗಡೆ ಟೋಲ್ ಅನ್ನು ನಿಗದಿ ಮಾಡಿ ಕಂಪ್ಲೀಟ್ ಆಗಿ ಅವರನ್ನು ಕಂಟ್ರೋಲ್ ಮಾಡತಕ್ಕಂಥ ಕೆಲಸ ಆಗಬೇಕು. ಒಳಗಡೆ ಸಣ್ಣಪುಟ್ಟ ಕೆಲಸ ಮಾಡತಕ್ಕಂಥವರಿಗೆ ಅಂದರೆ, ಎರಡು-ಮೂರು ಬಾಂಡ್ಲಿ ಮರಳು ತೆಗೆದುಕೊಂಡು ಹೋಗುವುದಕ್ಕೆ ಮೊಲೀಸ್ ಮತ್ತು ಕಂದಾಯ ಇಲಾಖೆಯವರು ಬಿಡುತ್ತಿಲ್ಲ. ನಮ್ಮ ಜಿಲ್ಲೆಯ ಮಳವಳ್ಳಿಯಲ್ಲಿ ಮರಳು ಸಿಗುತ್ತದೆಂದು ಹೇಳುತ್ತಾರೆ. ಆದರೆ, ಅಲ್ಲಿ ಸ್ಟಾಕ್ ಇಲ್ಲವೆಂದು ಹೇಳುತ್ತಾರೆ. ಇವತ್ತಿನದಿವಸ ಕೆ.ಆರ್.ಪೇಟೆ ಅಥವಾ ನಾಗಮಂಗಲದಲ್ಲಿರುವ ಒಬ್ಬ ವ್ಯಕ್ತಿ ಆಶ್ರಯ ಮನೆ ಕಟ್ಟಬೇಕಾದರೆ ಮಳವಳ್ಳಿಗೆ ಹೋಗಿ ಒಂದು ಗಾಡಿ ಮರಳನ್ನು ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೂ ಸಹ ಅದನ್ನು ನಿಮ್ಮ ಇಲಾಖೆಯವರು ಪಾಲನೆ ಮಾಡುತ್ತಿಲ್ಲ. ನಾವು ಒಬ್ಬರಿಗೆ ಬಿಟ್ಟರೆ ಇನ್ನೊಬ್ಬರಿಗೆ ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಎತ್ತಿನಗಾಡಿಯವರಿಗೆ ಬಿಟ್ಟರೆ ಟ್ರ್ಯಾಕ್ಟರ್‌ನವರು ಹೋಗುತ್ತಾರೆ. ಟ್ರ್ಯಾಕ್ಟರ್‌ನವರು ಹೋದರೆ ಲಾರಿಯವರು ಸಹ ಹೋಗುತ್ತಾರೆಂದು ಈ ರೀತಿಯಾದ ಸಬೂಬನ್ನು ನಿಮ್ಮ ಪೊಲೀಸ್ ಮತ್ತು ಕಂದಾಯ ಇಲಾಖೆಯವರು ಹೇಳುತ್ತಾರೆ. ಆದ್ದರಿಂದ, ದಯಮಾಡಿ ಈ ಬಗ್ಗೆ ಹೇಳಿ. ಅವರಿಗೆ ಎಲ್ಲಾ ತರಹದ ಸಿಬ್ಬಂದಿ ಮತ್ತು ವಾಹನ, ಸಂಬಳ ಹಾಗೂ ಟಿ.ಎ., ಡಿ.ಎ. ಸಹ ಕೊಡುತ್ತೀರಿ. ಯಾರು ಮರಳು ಮಾಫಿಯ ಮಾಡುತ್ತಿದ್ದಾರೆ ಮತ್ತು ಯಾರು ಮರಳನ್ನು ಹೊರಗಡೆ ತೆಗೆದುಕೊಂಡು

ಹೋಗುತ್ತಾರೆಯೋ ಅವರನ್ನು ಹಿಡಿದು ಕೇಸ್ ಹಾಕುವುದಕ್ಕೆ ಹೇಳಿ. ಟ್ರ್ಯಾಕ್ಟರ್ ಮೂಲಕ ತೆಗೆದುಕೊಂಡು ಹೋಗುವವರು ಬಹಳ ಸುಲಭವಾಗಿ ಕೈಗೆ ಸಿಗುತ್ತಾರೆಂದು ಅವರ ಮೇಲೆ ಕೇಸ್ ಹಾಕತಕ್ಕಂಥದ್ದು ಮತ್ತು ಅವರಿಗೆ ತೊಂದರೆ ಕೊಡತಕ್ಕಂಥದನ್ನು ನಿಲ್ಲಿಸಿ. ಸಣ್ಣಪುಟ್ಟದ್ದು ಇದ್ದರೆ ಅಂದರೆ, ಹಳ್ಳದಲ್ಲಿ ಸಿಗುವ ಮರಳನ್ನು ತೆಗೆದುಕೊಂಡು ಹೋಗಿ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳುವವರಿಗೆ ತೊಂದರೆ ಕೊಡುವುದು ಬೇಡ. 20x30 ಜಾಗದಲ್ಲಿ ದೇವಸ್ಥಾನ ಕಟ್ಟತಕ್ಕಂಥವರಿಗೆ ತೊಂದರೆ ಕೊಡುವುದು ಬೇಡ. ತಾಲ್ಲೂಕು ಪಂಚಾಯಿತಿಯಿಂದ ಮಂಜೂರಾಗಿರುವ ಡ್ರೈನೇಜ್ ಕೆಲಸವನ್ನು ಹಾಳು ಮಾಡತಕ್ಕಂಥದ್ದು ಬೇಡ. ಸ್ಟೋನ್‌ನಿಂದ ಮರಳು ತಯಾರು ಮಾಡತಕ್ಕಂಥದ್ದಕ್ಕೆ ನೀವು ಲೈಸೆನ್ಸ್ ಕೊಡಿ ಎಂದು ಮಾನ್ಯ ಕುಮಾರಸ್ವಾಮಿಯವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ಈ ಸಮಸ್ಯೆಯನ್ನು ಬಗೆಹರಿಸುವಂಥ ಕೆಲಸವನ್ನು ಮಾಡಿ. ಇವತ್ತಿದಿವಸ ಇಡೀ ರಾಜ್ಯದಲ್ಲಿ ಮರಳಿನ ಅವಶ್ಯಕತೆ ಇದೆ. ಅಂತರ್‌ರಾಜ್ಯಕ್ಕೆ ಹೋಗತಕ್ಕಂಥ ಮರಳನ್ನು ನಿಲ್ಲಿಸತಕ್ಕಂಥದ್ದು ಆಗಬೇಕು ಹಾಗೆಯೇ ಮರಳನ್ನು ಬಿಟ್ಟು ಬೇರೆ ಉಪಯೋಗಿಸಿಕೊಳ್ಳುವುದಕ್ಕೆ ತಾಂತ್ರಿಕವಾಗಿ ಅದರ ಬಗ್ಗೆ ಇನ್ನೂ ಯೋಚನೆ ಮಾಡುತ್ತಿದ್ದರೆ ಸರಿ ಹೋಗುವುದಿಲ್ಲ. ತಕ್ಷಣ ಅದಕ್ಕೆ ಏನಾದರೊಂದು ತೀರ್ಮಾನ ತೆಗೆದುಕೊಳ್ಳತಕ್ಕಂಥ ಕೆಲಸ ಆಗಬೇಕು. ಇದರ ಜೊತೆಗೆ ಸ್ಥಳೀಯವಾಗಿ ಮರಳನ್ನು ತೆಗೆದುಕೊಂಡು ಹೋಗುವುದಕ್ಕೆ ಸಂಪೂರ್ಣವಾಗಿ ಬಿಟ್ಟು ಬಿಡಿ. ಅಂದರೆ, ಐದಾರು ವರ್ಷಗಳ ಹಿಂದೆ ಇದ್ದಂತೆ ಯಾರಾದರು ತೆಗೆದುಕೊಂಡು ಹೋಗಲಿ ಎಂದು ಬಿಟ್ಟು ಬಿಡಿ. ಆಗಲಾದರೂ ಅಮಾಯಕರು ಬದುಕುತ್ತಾರೆ. ರೈತರಿಗೆ, ನಾಗರೀಕರಿಗೆ, ಸಾಮಾನ್ಯ ಜನರಿಗೆ ತೊಂದರೆ ಕೊಡತಕ್ಕಂಥ ಕಾನೂನು ಜಾರಿಗೆ ತಂದು ಇವರೆಲ್ಲರನ್ನು ರಕ್ಷಣೆ ಮಾಡುವುದಕ್ಕೆ ಆಗದೇ ಇದ್ದ ಮೇಲೆ ನಿಮ್ಮ ಕಾನೂನು ಅವಶ್ಯಕತೆ ಇಲ್ಲ. ಕಾನೂನು ಯಾವತ್ತೂ ಕೂಡ ಯಾರು ಮಾಫಿಯಾದಲ್ಲಿದ್ದಾರೆಯೋ ಅವರಿಗೆ ಮಾತ್ರ effect ಆಗುವಂತೆ ಇರಬೇಕು. ಅಂಥ ಕಾನೂನನ್ನು ನಿಮ್ಮ ಅಧಿಕಾರಿಗಳು ಅನುಷ್ಠಾನ ಮಾಡುವುದಕ್ಕೆ ಸ್ಪಷ್ಟವಾದ ಆದೇಶವನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು): ಮಾನ್ಯ ಚೆಲುವರಾಯಸ್ವಾಮಿಯವರೇ, ಕಾನೂನನ್ನು ನಾವು ತರಬೇಕಾದರೆ ಏಕಾಏಕಿ ಸದನದಲ್ಲಿ ಕುಳಿತು ಕಾನೂನನ್ನು ತರಲಿಲ್ಲ. ಕಾನೂನು ತರುವುದಕ್ಕೆ ಮುಖ್ಯ ಕಾರಣ ಏನೆಂಬ ವಿಚಾರವನ್ನು ನೀವೆಲ್ಲ ಮಾತನಾಡಿದ ನಂತರ ಕೊನೆಗೆ ಹೇಳೋಣವೆಂದು ನಾನು ಸುಮ್ಮನೆ ಇದ್ದೆ. ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್‌ನ ಹಿನ್ನೆಲೆಯಲ್ಲಿ ನಾವು ನಿಯಮವನ್ನು ಮಾಡಿದ್ದೇವೆ.

ಶ್ರೀ ಎನ್. ಚೆಲುವರಾಯಸ್ವಾಮಿ: ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು: ಸುಪ್ರೀಂ ಕೋರ್ಟ್ ಏನು ಹೇಳಿದೆ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್‌ನ ನೆಪ ಮಾಡಿಕೊಂಡು ನಾವು ರೂಲ್ಸ್ ಮಾಡುತ್ತೇವೆ. ಆನಂತರ ಅಧಿಕಾರಿಗಳು ಅದರ ಲಾಭವನ್ನು ಪಡೆದುಕೊಳ್ಳುತ್ತಾರಷ್ಟೆ.

ಅಧ್ಯಕ್ಷರು: ಮಾನ್ಯ ಕಾನೂನು ಸಚಿವರೇ, ನಿಮ್ಮ ಉತ್ತರವನ್ನು ಆಮೇಲೆ ಹೇಳಿ. ಮಾನ್ಯ ಚೆಲುವರಾಯಸ್ವಾಮಿಯವರೇ, ತಾವು ಮಾತನಾಡಿ ಮುಗಿಸಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಇರಬಹುದು. ನಾವೆಲ್ಲರೂ ಸಹ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಮರಳು ಮಾಫಿಯಾ ಕಂಟ್ರೋಲ್ ಮಾಡಬೇಕೆಂಬ ಉದ್ದೇಶದಿಂದ ಕಾನೂನನ್ನು ಜಾರಿಗೆ ತಂದಿದ್ದೇವೆ. ಕಾನೂನನ್ನು ಜಾರಿಗೆ ತಂದಿರುವುದು ತಪ್ಪೆಂದು ನಾನು ಹೇಳುವುದಿಲ್ಲ. ಆದರೆ, ಕಾನೂನು ತಂದಿರತಕ್ಕಂಥ ಪರಿಸ್ಥಿತಿಯಲ್ಲಿ ಕಾನೂನು ಯಾರಿಗೆ ಅನುಕೂಲವಾಗುತ್ತಿದೆ ಮತ್ತು ಯಾರಿಗೆ ಅನಾನುಕೂಲವಾಗುತ್ತಿದೆ ಎಂದರೆ, ಸಾಮಾನ್ಯ ಜನರಿಗೆ ಅನಾನುಕೂಲವಾಗುತ್ತಿದೆ. ಆದರೆ, ಮರಳು ಮಾಫಿಯದವರಿಗೆ ಯಾವುದೇ ರೀತಿಯ restriction ಆಗುತ್ತಿಲ್ಲವೆಂಬುದನ್ನು ನಿಮಗೆ ತಿಳಿಸುವುದಕ್ಕೆ ಬಯಸುತ್ತೇನೆ. ಲೋಕಲ್‌ನವರಿಗೆ ಯಾವುದೇ ರೀತಿಯ ತೊಂದರೆಗಳು

ಆಗಬಾರದೆಂದು ಹಾಗೂ ಹೊರಗಡೆ ಹೋಗತಕ್ಕಂಥದನ್ನು ನಿಲ್ಲಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಇದೇ ಚೇರ್‌ನಿಂದ ಆದೇಶ ಮಾಡಿದ್ದಾರೆ. ಆದರೆ, ಇದು ಇನ್ನೂ ಸಹ ಜಾರಿಗೆ ಬಂದಿಲ್ಲ. ಟ್ರ್ಯಾಕ್ಟರ್ ಅನ್ನು ಬಿಟ್ಟರೆ ಲಾರಿಯವರು ನಮ್ಮನ್ನು ಸಹ ಬಿಡಿ ಎಂದು ಹೇಳುತ್ತಾರೆ. ಆದ್ದರಿಂದ, ನಾವು ಬಿಡುವುದಕ್ಕೆ ಆಗುದಿಲ್ಲವೆಂದು ಪೊಲೀಸ್‌ನವರು ಹೇಳುತ್ತಾರೆ.

ಅಧ್ಯಕ್ಷರು: ಈಗಾಗಲೇ ಹೇಳಿರುವ ವಿಚಾರವನ್ನೇ ಮತ್ತೆ ಹೇಳುತ್ತಿದ್ದೀರಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಅವರು ಹೇಳಿದ್ದಕ್ಕೆ ನಾನು ಮತ್ತೆ ಹೇಳಿದೆ. ಆದರೆ, ನಾನು ಸಮಯವನ್ನು ವೇಸ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಲೋಕಲ್ ಜನರಿಗೆ ಅನುಕೂಲವಾಗುವಂತೆ ತಾವು ಆದೇಶ ಕೊಡಿ. ಹಾಗೆಯೇ ಜಿಲ್ಲೆಗಳಿಂದ ಹೊರಗಡೆ ಹೋಗತಕ್ಕಂಥದ್ದನ್ನು ನಿಯಂತ್ರಣ ಮಾಡಿ ಮತ್ತೆ ಅದು ರಾಜ್ಯದಿಂದ ಹೊರಗಡೆ ಹೋಗತಕ್ಕಂಥದ್ದಕ್ಕೆ ಪೂರ್ಣವಾಗಿ ಸ್ಥಗಿತ ಮಾಡಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಯಾವ ಜಿಲ್ಲೆಯ ಡಿಮಾಂಡ್ ಎಷ್ಟು, ಎಷ್ಟು block ಗಳನ್ನು ಗುರುತಿಸಲಾಗಿದೆ ಎಂದು ಮತ್ತು ರೂಲ್ಸ್ ಫೇಂ ಮಾಡಿದ ಮೇಲೆ ಎಷ್ಟು ಜಿಲ್ಲೆಗಳಲ್ಲಿ stock yard ಮಾಡಿದ್ದಾರೆ ಎಂಬ ಮಾಹಿತಿ ಸರ್ಕಾರದಿಂದ ಬೇಕು. ನಾವು ದುಡ್ಡು ಕೊಟ್ಟು ಮಾಲನ್ನು ತೆಗೆದುಕೊಳ್ಳುತ್ತೇವೆಂಬ ಪ್ರಾಮಾಣಿಕ ಜನರಿಗೆ ಮರಳು ಸಿಗುತ್ತದೆಯೇ ಎಂದು ಹೇಳಬೇಕು. ಪ್ರಾಮಾಣಿಕವಾಗಿ ಸಿಗುವಂಥ ವ್ಯವಸ್ಥೆಯನ್ನು ಇವರು ಮಾಡಿಲ್ಲ. ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದ ಹಾಗೆ ಸಣ್ಣಪುಟ್ಟ ಟ್ರ್ಯಾಕ್ಟರ್‌ನಲ್ಲಿ ತೆಗೆದುಕೊಂಡು ಹೋಗುವವರನ್ನು ಹಿಡಿದು ಒಂದೊಂದು ಲಕ್ಷ ರೂಪಾಯಿ ಫೈನ್ ಹಾಕುತ್ತಿದ್ದಾರೆ. ಈ ಮರಳು ಮಾಫಿಯಾದಿಂದ ನನ್ನ ಕ್ಷೇತ್ರದಲ್ಲಿ ಒಂದು ಲಾರಿ ಇಟ್ಟುಕೊಂಡಿದ್ದವನು ಒಂದು ವರ್ಷಕ್ಕೆ 20 ಲಾರಿಯನ್ನು ಇಟ್ಟುಕೊಳ್ಳುವ ಸ್ಥಿತಿಗೆ ಬಂದಿದ್ದಾನೆ. ಅವರ ಹೆಸರಿನ ಜೊತೆಗೆ ಮರಳಿನ ಬ್ರಾಂಡ್ ಹೆಸರು

ಸೇರಿಕೊಂಡಿದೆ. ಆತನಿಗೆ ಯಾವುದೇ ರೀತಿಯ ಮಟ್ಟ ಹಾಕಿಲ್ಲ. ಈ ರೂಲ್ಸ್ ಫ್ರೇಮ್ ಮಾಡಿದ್ದರಿಂದ ಲಾಭ ಆಗಿದ್ದು ಏನೆಂದರೆ, 200, 500 ರೂಪಾಯಿ ಲಂಚ ತೆಗೆದುಕೊಳ್ಳುತ್ತಿದ್ದ. ಪೊಲೀಸ್ ಕಾನ್ಸ್‌ಟೇಬಲ್ ಬದಲು ಡಿವೈಎಸ್ಪಿ ಅಲ್ಲಿಗೆ ಬಂದು ನಿಂತುಕೊಂಡಿದ್ದಾರೆ. ಲಂಚ 25 ರಿಂದ 50 ಸಾವಿರ ರೂಪಾಯಿಗೆ ಹೋಯಿತು. ಸೀಸ್ ಮಾಡಿದರೆ ನಿನ್ನ ಗಾಡಿ ಶಾಶ್ವತವಾಗಿ ಸೀಸ್ ಆಗುತ್ತದೆ. ಆದ್ದರಿಂದ, ನನಗೆ 25 ಸಾವಿರ ಕೊಟ್ಟರೆ ಬಿಡುತ್ತೇನೆಂಬ ಸ್ಥಿತಿಗೆ ತಲುಪಿದೆ. ಹಾಗೆಯೇ ಲಂಚದ ರೇಟ್ ಜಾಸ್ತಿ ಆಯಿತು. ಮರಳು ನಿಯಂತ್ರಣ ಇಲ್ಲದಂತಾಯಿತು. ಆದ್ದರಿಂದ, ನನ್ನ ವಿನಂತಿ ಏನೆಂದರೆ, ಎಷ್ಟು M-sand unit ಗಳಿಗೆ ಸರ್ಕಾರ ಅನುಮತಿಯನ್ನು ಕೊಟ್ಟಿದೆ ಎಂದು ಹಾಗೆಯೇ ಎಷ್ಟು natural sand block ಗಳನ್ನು ಗುರುತು ಮಾಡಿದೆ? ವಾರ್ಷಿಕ ಬೇಡಿಕೆ ಎಷ್ಟು? ಎಂಬ ಮಾಹಿತಿಯನ್ನು ಹೇಳಬೇಕು. Natural sand and M-sand ಇಲ್ಲವೆಂದರೆ alternative mechanism ಏನು? ಏನಾದರೂ ಪರ್ಯಾಯ ಕಂಡು ಹಿಡಿಯುವ ವ್ಯವಸ್ಥೆ ಆಗಿದಯೇ? ಇವತ್ತಿನ ದಿವಸ ಲೋಕೋಪಯೋಗಿ ಇಲಾಖೆಯಲ್ಲಿ ವ್ಯಕ್ತಿಗಳು ಇಲ್ಲ ಮತ್ತೆ ಸರಿಯಾದ ಸಿಸ್ಟಮ್ ಸಹ ಇಲ್ಲ. ಆದ್ದರಿಂದ, ಅವರು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಪರ್ಮಿಟ್ ವ್ಯವಸ್ಥೆಯನ್ನು ಸರಿಯಾದ ದಾರಿಗೆ ತರಬೇಕಾದರೆ ಒಂದು ಪ್ರತ್ಯೇಕವಾದಂಥ ಸಿಸ್ಟಮ್ ಅನ್ನು ಕ್ರಿಯೇಟ್ ಮಾಡಬೇಕು. ಆದ್ದರಿಂದ, ಸರ್ಕಾರಕ್ಕೆ ಪ್ರಾಮಾಣಿಕ ಇಚ್ಛಾಶಕ್ತಿ ಇದ್ದರೆ ಹಾಗೆಯೇ ಸ್ಯಾಂಡ್ ಮಾಫಿಯಾ ಜೊತೆ ಸರ್ಕಾರ ಕೈ ಜೋಡಿಸಿಲ್ಲವೆಂದರೆ ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ, ಸ್ಯಾಂಡ್ ಮಾಫಿಯ ಜೊತೆಗೆ 2014 ಕ್ಕೆ ಬೆಳಗಾವಿಯಲ್ಲಿ ಸಾರ್ವಜನಿಕರ ಗಮನಕ್ಕೆ ಬರುತ್ತದೆ. ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ದೂರು ಕೊಡುತ್ತಾರೆ. ಆನಂತರ ಅದರ ತನಿಖೆಗೆ ಜಿಲ್ಲಾಧಿಕಾರಿಗಳು ಆದೇಶ ಮಾಡುತ್ತಾರೆ. ಅದರ ಪಂಚನಾಮೆ ಮಾಡಿ ಏನು ಹೇಳುತ್ತಾರೆಂದರೆ, 600 ಲಾರಿ ಲೋಡ್‌ಗಳಷ್ಟು ಮರಳು ಸ್ಟಾಕ್ ಇದ್ದಂಥದ್ದು ನಾಪತ್ತೆಯಾಗಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ವರದಿ ಸಹ ಮಾಡುತ್ತಾರೆ. ಇದಕ್ಕೆ ಸಂಬಂಧಪಟ್ಟವರು ಯಾರ್‍ಯಾರು ಇದ್ದಾರೆಯೋ ಅವರ ಹೆಸರನ್ನು ಕೋಟ್

ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಸರ್ಕಾರಕ್ಕೆ ದಿ.5.02.2014ಕ್ಕೆ ವರದಿ ಮಾಡುತ್ತಾರೆ.

ಅಧ್ಯಕ್ಷರು: ಯಾರಿಗೆ?

ಶ್ರೀ ಸಿ.ಟಿ. ರವಿ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ಬೀದಿ, ಇಲ್ಲಿಗೆ ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿಗಳು ವರದಿ ಮಾಡಿದ್ದಾರೆ. ಅಂದರೆ, 10 ತಿಂಗಳಿಂದ ಕ್ರಮ ಕೈಗೊಂಡಿಲ್ಲ. ಇದು ಇನ್ನೊಂದು ಬೇಲಿಕೇರಿ ಪ್ರಕರಣ ಆಗಿದೆ. ಬೇಲಿಕೇರಿಯಲ್ಲಿ ಅದಿರು ನಾಪತ್ತೆ ಆಗಿದ್ದಕ್ಕಾಗಿ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ಮಾಡಿದ ಕೀರ್ತಿ ರಾಜ್ಯದ ಮುಖ್ಯ ಮಂತ್ರಿಗಳಿಗೆ ಇದೆ. ಆ ರೀತಿಯಾಗಿ ಮಾಡಿದವರು ಈಗ ಅವರ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಆಯಿತು. ಅದಕ್ಕೆ ಅವರಿಂದ ಉತ್ತರ ಕೇಳೋಣ. ಇದಕ್ಕೆ ಅವರು ಉತ್ತರ ಹೇಳುತ್ತಾರೆ. ಮಾನ್ಯ ರವಿಯವರೇ, ನಾನು ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ, ಅಲ್ಲಿನ ಜಿಲ್ಲಾಧಿಕಾರಿಗಳು ಅಲ್ಲಿಗೆ ವರದಿ ಕೊಟ್ಟಿರುವುದು ಆಯಿತು. ಇನ್ನೊಂದು ವರದಿಯನ್ನು ಜಿಲ್ಲೆಯ ಎಸ್‌ಪಿ ಗೆ ಕಳುಹಿಸಿದ್ದರೆ ತನಿಖೆಯನ್ನು ಮಾಡುತ್ತಿದ್ದರು.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇಲ್ಲಿ investigation ನಂತರ ಪಂಚನಾಮೆ ಆಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಬರೆಯುತ್ತಾರೆ. ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇಲ್ಲ.

ಅಧ್ಯಕ್ಷರು: ಆಯಿತು ಬಿಡಿ. ಮಾನ್ಯ ಸಚಿವರು ಇದಕ್ಕೆ ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಶಾಮೀಲಾಗಿದ್ದವರು ಹೊರಗಡೆ ಕಳ್ಳರಿದ್ದರೆ ಅವರ ಮೇಲೆ ಕೇಸ್ ಹಾಕಿಬಿಡುತ್ತಾರೆ. ಆದರೆ, ಒಳಗಡೆ ಇರುವ ಕಳ್ಳರಿಗೆ ಯಾರು ಕೇಸ್ ಹಾಕುತ್ತಾರೆ?

ಅಧ್ಯಕ್ಷರು: ಏನು ಮಾಡಿದ್ದಾರೆಂಬುದನ್ನು ನೋಡೋಣ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ನಡೆದಿರುವುದು ಇದೊಂದು ಮಾತ್ರವಲ್ಲ. ರಾಜ್ಯದ ಎಲ್ಲಾ ಕಡೆ ಇದೇ ಸ್ಥಿತಿ ಇದೆ. ಚಿಕ್ಕಮಗಳೂರಿನಲ್ಲಿ ಪರ್ಮಿಟ್ ಇದ್ದವರಿಗೆ ನಾಲ್ಕು ಸಾವಿರ ಕಟ್ಟಿಸಿಕೊಂಡು ರಶೀದಿ ಹಾಕಿಕೊಡುತ್ತಾರೆ. 4 ಸಾವಿರ ರೂ.ಗಳನ್ನು ಕಟ್ಟಿಸಿಕೊಂಡು ರಸೀದಿ ಹಾಕಿ ಕೊಟ್ಟರೆ ಅಲ್ಲಿ ಅದನ್ನೇ ಹೇಳುತ್ತಾನೆ, 8 ಸಾವಿರ ರೂ.ಗಳನ್ನು ಕೊಟ್ಟರೆ ಮಾತ್ರ ತುಂಬಿ ಕೊಡುತ್ತೇನೆಂದು ಹೇಳುತ್ತಾನೆ. ಇದು ಪರಿಸ್ಥಿತಿ ಇರುವಂಥದ್ದು. ಅದಕ್ಕೆ sand block ಗಳನ್ನು ಗುರುತಿಸುವಂಥ ಕೆಲಸಗಳನ್ನು ಮಾಡಲಿ. ನಮ್ಮ ಜಿಲ್ಲೆಯಲ್ಲಿ ಬಂದ್ ನಡೆಯಿತು ಹೋರಾಟ ನಡೆಯಿತು. ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆ ಎಂದು ಆಗಿ ಮುತ್ತಿಗೆ ಹಾಕಿದರು. ತಳ್ಳಾಟದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ front door glass ಒಡೆಯಿತು. ಹಿಂದುಗಡೆಯಿಂದ ಪೋಲೀಸ್‌ರು ಬಾಗಿಲು ತಳ್ಳಿದರು ಈ ಕಡೆಯಿಂದ ಪ್ರತಿಭಟನಾಕಾರರನ್ನು ತಳ್ಳಿದರು. ಅರ್ಧ ಅಡಿಯ ಒಂದು ಗ್ಲಾಸ್ ಒಡೆಯಿತು. ಅದು ಒಡೆದದ್ದಕ್ಕೆ ನನ್ನನ್ನೂ ಸೇರಿಸಿ ಕೇಸ್ ಹಾಕುತ್ತಾರೆ. ಯಾವ sand mafia ಮೇಲೆ ಕೇಸ್ ಹಾಕಬೇಕಾಗಿತ್ತು. ಅವರ ಮೇಲೆ ಕೇಸ್ ಹಾಕುವುದಕ್ಕೆ ಇವರಿಗೆ ದಮ್ಮಿಲ್ಲ. ಯಾರು ಜನರ ಪರವಾಗಿ ಹೋರಾಟ ಮಾಡುತ್ತಾರೆ ಅವರ ಮೇಲೆ ಕೇಸ್ ಹಾಕುತ್ತಾರೆ ಇದು ಇವರ ಪ್ರಾಮಾಣಿಕತೆ. Sand mafia ವಿರುದ್ಧ ಯಾರೂ ಪ್ರತಿಭಟನೆ ಮಾಡಬಾರದು. ಆ ಪ್ರತಿಭಟನೆಯನ್ನು ಹತ್ತಿಕ್ಕುವಷ್ಟು ಸಾಮರ್ಥ್ಯ ತೋರಿದಷ್ಟು ಆ mafia ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ತೋರಿಸಿದ್ದರೆ ಈ sand mafia ಇಷ್ಟು ಪ್ರಮಾಣದಲ್ಲಿ ಬೆಳೆಯುತ್ತಿರಲಿಲ್ಲ. ಇವರೇ ಇವತ್ತು ರಾಜಕೀಯ ನಿಯಂತ್ರಣ ಮಾಡುವ ಮಟ್ಟಕ್ಕೆ ಕೆಲವು ಜಿಲ್ಲೆಗಳಲ್ಲಿ ಬಂದಿದ್ದಾರೆ. ಅದಕ್ಕೋಸ್ಕರ ಈ sand mafia ಇನ್ನೊಂದು ಗಣಿ ಮಾಫಿಯಾ ರೀತಿಯಲ್ಲಿ ನಮ್ಮ ರಾಜ್ಯ ಹಾಳು ಮಾಡಬಾರದು ಎಂದಾದರೆ ಅದರ ಇಚ್ಛಾಶಕ್ತಿಯನ್ನು ಪ್ರಕಟ ಮಾಡಲಿ. ಜನಸಾಮಾನ್ಯರಿಗೆ ಪ್ರಾಮಾಣಿಕವಾಗಿ ಕೊಳ್ಳುವವರಿಗೆ ಪರ್ಮಿಟ್‌ನಲ್ಲಿ ಮರಳು ಸಿಗುವಂತಹ ವ್ಯವಸ್ಥೆಯನ್ನು ಮಾಡಲಿ. ಹಾಗೆ ಮಾಡುವಂಥದ್ದನ್ನು ತೋರಿಸಿ ನಮ್ಮ ಹೆಗಲು

ಮುಟ್ಟಿ ನೋಡಿಕೊಳ್ಳಲಿ. ಇಲ್ಲದಿದ್ದರೆ ನಾನು ಮುಂಚೆ ಏನು ಹೇಳಿದೆ, ಇನ್ನಾರಿಗೆ ದೂರಲಿ ಕೂಡಲ ಸಂಗಮದೇವಾ ಎಂದು. ಹಾಗೆ ದೇವರಿಗೆ ಮಾತ್ರ ಕೈ ಮುಗಿಯಬೇಕಾಗುತ್ತದೆ. ಏರಿಯೇ ನೀರು ಕುಡಿದರೆ ಇನ್ನಾರಿಗೆ ದೂರುವುದು ಎಂದು ಹೇಳುತ್ತೇನೆ. ಹಾಗೆ ಆಗಬಾರದು.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ): ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಿಲ್ಲ. ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನನ್ನ ಕ್ಷೇತ್ರದ ಒಳಗಡೆ ಆ ಕಡೆ ಭದ್ರಾ ಈ ಕಡೆ ತುಂಗಾ ನಮಗೆ ಬಾರ್ಡರ್ ಭದ್ರಾ ಮತ್ತು ತುಂಗಾ. ಅಲ್ಲಿ ಆಶ್ರಯ ಮನೆ ಕಟ್ಟುವವರಿಗೆ ಒಂದು ಗಾಡಿ ಮರಳು ಸಹಿತ ತೆಗೆಯುವುದಕ್ಕೆ ಬಿಟ್ಟಿಲ್ಲ. ಹಾಗೆ ಆ ಹೊಳೆಯಲ್ಲಿ ಮರಳು ಇದೆಯಾ ಎಂದು ಕೇಳಿದರೆ ಅಲ್ಲಿ ಮರಳು ಖಾಲಿ ಆಗಿದೆ. ಮರಳನ್ನು ಹೇಗೆ ಹೊಡೆದರು ಎಂದು ಹೇಳಿದರೆ, ಕತ್ತೆ ಮೇಲೆ ಹೊಡೆಯುತ್ತಾರೆ. ಇದನ್ನು ಎಲ್ಲಿಯಾದರೂ ಕೇಳಿದ್ದೀರಾ, ಕತ್ತೆ ಮೇಲೆ ಯಾರಾದರೂ ಮರಳು ಹೊಡೆಯುತ್ತಾರಾ? ಯಾರ ಮೇಲೆ ಕೇಸ್ ಹಾಕುವುದು. ಕತ್ತೆ ಮೇಲೆ ಮರಳು ಹೊಡೆದು ಅದನ್ನು ಒಂದು ಕಡೆ ತುಂಬಿ ಇರುವ ಒಂದು ಪರ್ಮಿಟ್ ಮೇಲೆ rotation ಮಾಡುತ್ತಾರೆ. ಸತ್ಯ ಇರುವ ವಿಷಯವನ್ನು ಹೇಳಿದೆ.

ಅಧ್ಯಕ್ಷರು: ಇರಬಹುದು, ಕತ್ತೆ ಮೇಲೆ ಯಾರು ಮರಳು ಹೊಡೆದಿರುತ್ತಾರೆ ಅವರ ಮೇಲೆ ಕೇಸ್ ಹಾಕಬೇಕು.

ಶ್ರೀ ಡಿ.ಎನ್. ಜೀವರಾಜ್: ನಾನು ಹೇಳುವುದು ಇಷ್ಟೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಕತ್ತೆ ಮೇಲೆ ಸಾಗಿಸಿದರೆ ಯಾರ ಮೇಲೂ ಕೇಸ್ ಹಾಕುವುದಕ್ಕೆ ಬರುವುದಿಲ್ಲ. ಕತ್ತೆಗೆ ಸರಿಸಮಾನವಾದ ವಸ್ತು ಎಂದರೆ ಆ local M.L.A., M.L A. ಮೇಲೆ ಕೇಸ್ ಹಾಕಬೇಕು. ನಮ್ಮ ಗತಿ ಅಲ್ಲಿಗೆ ಬಂದಿದೆ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯರು ಏನೋ ಹೇಳುತ್ತಾರೆ. ನನ್ನ ಪಾಯಿಂಟ್ ಏನೆಂದರೆ, ನಾನು ಹೇಳುವುದಕ್ಕೆ

ಹೊರಟಿರುವುದನ್ನು ಒಂದೇ ಲೈನ್‌ನಲ್ಲಿ ಮುಗಿಸುತ್ತೇನೆ. ಇವರು ನಮ್ಮ ಹತ್ತಿರ ಇರುವ ಮರಳನ್ನು ದಯಮಾಡಿ ಈಗ ಇವರು ಪರ್ಮಿಟ್ ಕೊಟ್ಟು ಮರಳು ಹೊಡಿಯುವುದಕ್ಕೆ ಅವಕಾಶ ಮಾಡಿಕೊಟ್ಟು ಬಿಡಲಿ. ಆ ಅವಕಾಶ ಕೊಡದೇ ಇರುವುದರಿಂದ ಕದ್ದು ಹೊಡೆಯುತ್ತಿದ್ದಾರೆ. ಪರ್ಮಿಟ್ ಕೊಟ್ಟು ಬಿಟ್ಟರೆ ಆ ಕದ್ದು ಹೊಡೆಯುವುದು ನಿಂತು ಹೋಗುತ್ತದೆ. ಶೃಂಗೇರಿಯ ಒಂದು ಅಂಗಡಿಯಲ್ಲಿ ಒಂದು ದೊಡ್ಡ ಬೋರ್ಡ್ ಅನ್ನು ಹಾಕಿದ್ದಾರೆ. ಮರಳು ಚೀಲದಲ್ಲಿ ಸಿಗುತ್ತದೆ ಎಂದು, ಸಿಮೆಂಟ್ ಅಲ್ಲ. ಅದು ಎಲ್ಲಿಂದ ಬರುತ್ತದೆ. ಆದರೆ ಅಂಗಡಿಗೆ ಮರಳು ಬರುತ್ತದೆ. ಆದರೆ ಹೊಳೆ ಎರಡು ಕಡೆ ಇದ್ದು ನಮಗೆ ಮರಳು ಸಿಗುತ್ತಿಲ್ಲ. ಪರ್ಮಿಟ್ ಕೊಡುವುದಕ್ಕೆ ನಮ್ಮ ಚಿಕ್ಕಮಗಳೂರು ಜಿಲ್ಲಾಡಳಿತದಿಂದ ಇವತ್ತಿನವರೆಗೆ ಅವರು ಏನೋ ಒಂದು ಕಮಿಟಿ ಎಂದು ಹೇಳುತ್ತಾರಲ್ಲಾ, ಆ ಕಮಿಟಿ ತೀರ್ಮಾನ ಮಾಡಲಿಲ್ಲ. ಈ ಕದ್ದು ಹೊಡೆಯುವವರಿಗೆ ರಾತ್ರಿ ಹೊಡೆಯುವವರಿಗೆ ಮರಳು ಉಂಟು. ಪರ್ಮಿಟ್ ಕೊಟ್ಟು ಮರಳು ಹೊಡೆಸಲಿ ಸರ್ಕಾರಕ್ಕೂ ದುಡ್ಡು ಆಗುತ್ತದೆ ಜನರಿಗೂ ಮರಳು ಸಿಗುತ್ತದೆ. ಇಷ್ಟು ಮಾಡಿಸಿದರೆ ಒಳ್ಳೆಯದು.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೆಕೆರೆ): ಮಾನ್ಯ ಅಧ್ಯಕ್ಷರೆ, ಮರಳು ನೀತಿ ಏನಿದೆ ಇದಕ್ಕೆ ಕೆಲವು amendment ತರಬೇಕು. ಆಶ್ರಯ ಮನೆ ಮಂಜೂರು ಮಾಡುತ್ತಾರೆ ಅವರಿಗೆ ಮರಳು ಸಿಗಬೇಕು. ಆರಾಧನಾ ಸ್ಕೀಂ ನಲ್ಲಿ ನಾವು ದೇವಸ್ಥಾನಗಳಿಗೆ ದುಡ್ಡು ಕೊಟ್ಟಿರುತ್ತೇವೆ ಆ ಒಂದು ಸ್ಕೀಂನಲ್ಲಿ ದೇವಸ್ಥಾನ ಕಟ್ಟುವುದಕ್ಕೆ ಮರಳು ಫ್ರೀ ಕೊಡಬೇಕು. ಹಿಟಾಚಿ ಮತ್ತು ಜೆ.ಸಿ.ಬಿ.ಯಲ್ಲಿ ಇವತ್ತಿಗೂ ಮರಳು ಹೊಡೆಯುತ್ತಾರೆ. ರಾತ್ರಿಯ ಹೊಡೆಯುವ ಆ ಲಾಬಿಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ. 50, 25 ರೂ.ಗಳನ್ನು police constable ಗೆ ಕೊಡುತ್ತಿದ್ದರು, ಇವತ್ತು ಅದು ಇವತ್ತು 25 ರಿಂದ 50 ಸಾವಿರ ರೂ.ಗಳಿಗೆ ಹೋಗಿದೆ. ದಿವಸಕ್ಕೆ ಲಕ್ಷಾಂತರ ರೂ.ಗಳ ಭ್ರಷ್ಟಾಚಾರ ನಡೆಯುತ್ತಿದೆ. ಆ ಮಧ್ಯದಲ್ಲಿ ಅಮಾಯಕರಾದ ಆಶ್ರಯ ಸ್ಕೀಂ ನವರಿಗೆ ಮತ್ತು ದೇವಸ್ಥಾನ ಕಟ್ಟುವವರಿಗೆ ಮತ್ತು ಮನೆ ಕಟ್ಟುವವರು ಲೈಸೆನ್ಸ್ ತೆಗೆದುಕೊಂಡಿರುತ್ತಾರೆ ಅವರಿಗೆ ಮರಳು ಸಿಗುವುದಿಲ್ಲ. ಅಂಗನವಾಡಿ ಕಟ್ಟಡಕ್ಕೆ

4–5 ಲಕ್ಷ ರೂ.ಗಳನ್ನು ಕೊಟ್ಟಿರುತ್ತೇವೆ. School, college building ಕಟ್ಟುವುದಕ್ಕೆ ಮರಳು ಸಿಗುವುದಿಲ್ಲ. ಸರ್ಕಾರಿ ಬಿಲ್ಡಿಂಗ್ ಕಟ್ಟಲಿಕ್ಕೆ, ಶೌಚಾಲಯ ಕಟ್ಟಲಿಕ್ಕೆ ಸರ್ಕಾರದಲ್ಲಿ ಒಂದು amendment ತರಬೇಕು. ನಮ್ಮ ಉದ್ದೇಶ ಇಷ್ಟೇ, ಸರ್ಕಾರ ಜನಗಳಿಗೆ ಏನೇನು ಸ್ಕೀಂ ಗಳನ್ನು ತಂದಿದೆ ಅದರ ಸದುಪಯೋಗವಾಗಬೇಕಾದರೆ amendment ತಂದು ಅದನ್ನು modify ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಹಾಸನದವರು ಹೇಳಲಿ ನಿಂಗಯ್ಯನವರೆ, ದಯವಿಟ್ಟು ಬೇಗ ಹೇಳಿ. ಇಲ್ಲಿ ದೊಡ್ಡ discussion ಅಲ್ಲ. ಇದು simple ಅರ್ಧಗಂಟೆಯಲ್ಲಿ ಆಗುವುದನ್ನು ಗಂಟೆಗಟ್ಟಲೆ ತೆಗೆದುಕೊಂಡರೆ ಹೇಗೆ? ಇದು general discussion.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎಲ್ಲಾ ಜೀವ ನದಿಗಳು ಹುಟ್ಟುತ್ತವೆ. ಸಮುದ್ರದ ನೆಂಟಸ್ಥಿಕೆ ಉಪ್ಪಿಗೆ ಬಡತನ ಎನ್ನುವ ಗಾದೆ ಮಾತಿನ ಹಾಗೆ, ಇವತ್ತು ಅಲ್ಲಿ ಜನತಾ ಮನೆ ಕಟ್ಟುವವರಿಗೆ ಆಗಲಿ ಬಡವರಿಗಾಗಲಿ ಯಾವುದೇ ರೀತಿಯ ಮರಳು ಸಿಗುತ್ತಿಲ್ಲ. ಸರ್ಕಾರಿ ಕೆಲಸಗಳು ನಿಂತು ಹೋಗಿವೆ. ಇಲ್ಲಿ ಮರಳು ಒಂದು ರೀತಿ sellers market ಆಗಿ ಹೋಗಿದೆ. ಸರ್ಕಾರದ ನಿಯಂತ್ರಣ ಸಂಪೂರ್ಣ ತಪ್ಪಿ ಹೋಗಿದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲಿ ಇದ್ದಾರೆ. ಎರಡು ಸಲ ನಮ್ಮ KDP meeting ನಲ್ಲಿ ದೊಡ್ಡ ಗಲಾಟೆ ಆಗಿದೆ. ಒಬ್ಬೊಬ್ಬರು 600–800 ಲೋಡ್‌ಗಳನ್ನು ಕದ್ದು ಸಾಗಿಸುವಂಥದ್ದನ್ನು ಮಾಡುತ್ತಿದ್ದಾರೆ. ಇದಕ್ಕೆ ಪ್ರತಿ ಸಲ ಅಸೆಂಬ್ಲಿಯಲ್ಲಿ ಚರ್ಚೆ ಆಗಿದೆ. ಅದಕ್ಕೆ ಹೊಸ ಮರಳು ನೀತಿಯ ಕಾರಣ ಹೇಳುವುದಕ್ಕಿಂತ ಈಗ ಜನರಿಗೆ ಮರಳು ಸಿಗಬೇಕು. ಅದಕ್ಕೆ ಸರ್ಕಾರ ತುರ್ತಾಗಿ ಅಗತ್ಯ ಇರತಕ್ಕಂಥ ಕಾನೂನು ಕ್ರಮ ಕೈಗೊಂಡು ಸರ್ಕಾರಿ ಕೆಲಸಕ್ಕೆ ಮತ್ತು ಮನೆ ಕಟ್ಟತಕ್ಕಂತಹ ಬಡವರಿಗೆ ಮರಳು ಸಿಗುವಂಥ ಕೆಲಸಗಳು ಆಗಬೇಕು. ನನ್ನ ಕ್ಷೇತ್ರದಲ್ಲಿ ಮಾನ್ಯ ರವಿಯವರು ಹೇಳಿದ ಹಾಗೆ, ಒಂದು ಲಾರಿ ಇಟ್ಟುಕೊಂಡವನು ಇವತ್ತು 20 ಲಾರಿ ಇಟ್ಟುಕೊಂಡಿದ್ದಾನೆ. ಮಾನ್ಯ

ಗೃಹ ಸಚಿವರೆ, ಒಂದು ಪರ್ಮಿಟ್‌ನಿಂದ 8–10 ಲೋಡ್ ಹೊಡೆಯುತ್ತಿದ್ದಾನೆ. Round the clock police ನವರು ಇವತ್ತು ರಸ್ತೆ ಮೇಲೆ ಇರುತ್ತಾರೆ. ಆಲ್ದೂರು ಎನ್ನುವಂಥ police station ವ್ಯಾಪ್ತಿಯಲ್ಲಿ 4 ಬಾರಿ ಮರಳು ಹೊಡೆಯುತ್ತವೆ, ಒಂದು ಲಾರಿಗೆ ಒಂದು ವಾರಕ್ಕೆ 5 ಸಾವಿರ ರೂ.ಗಳನ್ನು ಕೊಡಬೇಕು. 4 ಲಾರಿಗೆ 20 ಸಾವಿರ. 7 ಟ್ರಾಕ್ಟರ್‌ನಲ್ಲಿ ಮರಳು ಹೊಡೆಯುತ್ತಿದ್ದಾರಂತೆ, 7 ಟ್ರಾಕ್ಟರ್‌ಗೆ ಒಂದು ದಿವಸಕ್ಕೆ 21 ಸಾವಿರ ರೂ.ಗಳು. ಒಂದು ವಾರಕ್ಕೆ ಅಂದರೆ 4 ಲಾರಿ ಮತ್ತು 7 ಟ್ರಾಕ್ಟರ್‌ಗೆ ಒಂದು ತಿಂಗಳಿಗೆ ಒಂದು ಲಕ್ಷ ರೂ.ಗಳನ್ನು ಆ ದುಡ್ಡನ್ನು police station ದವರು ವಸೂಲು ಮಾಡುತ್ತಿದ್ದಾರೆ. ಇದು ನನಗೆ ಇರತಕ್ಕಂಥ ಮಾಹಿತಿ. ಹೀಗೆ ಆದರೆ ಯಾರು ಬೇಲಿ ಆಗಿ ಕಾಯಬೇಕು ಅವರೇ ಇವತ್ತು ಈ ದಂಧೆಗೆ ಪ್ರೋತ್ಸಾಹ ಕೊಟ್ಟು ಹಗಲು ರಾತ್ರಿ ದಂಧೆ ನಡೆಯುತ್ತದೆ. ಆದ್ದರಿಂದ ಮಾನ್ಯ PWD Minister, Home Minister, Revenue Minister and Mines and Geology Minister ಸಂಪೂರ್ಣ ಇವರೆಲ್ಲಾ ಹೊಣೆಗಾರರು ಆಗಿರುವುದರಿಂದ ತಕ್ಷಣ ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿಯದೇ ಹೋದರೆ ಇವತ್ತು ಮಾನ್ಯ ರವಿಯವರು ಹೇಳಿದಂತೆ, ಎಲ್ಲಾ ಹಳ್ಳಿಗಳಿಗೆ ನಾವು ಇವತ್ತು ಹೋಗುವಂತಿಲ್ಲ. ನಿಮಗೂ ಈ ಸಮಸ್ಯೆ ಗೊತ್ತಿದೆ. ತಕ್ಷಣ ಇದಕ್ಕೊಂದು ಪರಿಹಾರ ಹುಡುಕಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಪಾಪ ಅವರು ಒಂದು ಲೋಡ್ ಮರಳು ತೆಗೆದುಕೊಂಡು ಹೋಗುತ್ತಿದ್ದರೆ ಅವರ ಟ್ರಾಕ್ಟರ್ ತೆಗೆದುಕೊಂಡು ಹೋಗಿ ಒಳಗಡೆ ಹಾಕುತ್ತಾರೆ ಮತ್ತು 25 ಸಾವಿರ ರೂ.ಗಳ ದಂಡ ಹಾಕುತ್ತಾರೆ. ಹಗಲೂ ರಾತ್ರಿ ದಂಡ ವಸೂಲು ಮಾಡತಕ್ಕಂಥವರಿಗೆ ಇವತ್ತು ಹಬ್ಬವಾಗಿದೆ. ಆದ್ದರಿಂದ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೋಳ): ಮಾನ್ಯ ಅಧ್ಯಕ್ಷರೆ, ಮರಳಿನ ಬಗ್ಗೆ ಎಲ್ಲಾ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ತುಂಬಾ ಕಷ್ಟವಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮರಳು ಎತ್ತುವುದಕ್ಕೆ ಜಾಗಗಳು ಎಲ್ಲೂ ಇಲ್ಲ. ಆದರೆ ಹೊಳೆನರಸೀಪುರ ಮತ್ತು ಸಕಲೇಶಪುರ

ಹಾಗೂ ಆಲೂರು ಭಾಗದಲ್ಲಿದೆ. ಬಹುಶಃ ಒಂದು ತಿಂಗಳಿನಿಂದ ನಾನು ಒಬ್ಬ AEE ಗೆ ಲೆಟರ್ ಕೂಡ ಕೊಟ್ಟಿದ್ದೇನೆ. ಸರ್ಕಾರಿ ಕೆಲಸಗಳಿಗೆ ಮತ್ತು ಕಲ್ಯಾಣ ಮಂಟಪ ನಿರ್ಮಾಣ ಮಾಡಿದವರಿಗೆ mould ಹಾಕಲಿಕ್ಕೆ ಮರಳು ಕೊಡಿ ಎಂದು ಹೇಳಿದರೆ ಒಂದೂವರೆ ತಿಂಗಳಿನಿಂದ 5 ಲೋಡ್ ಮರಳು ಕೊಟ್ಟಿಲ್ಲ. ಆದ್ದರಿಂದ ಸಮಸ್ಯೆ ಬಿಗಡಾಯಿಸಿದೆ. ಒಂದು ಕಡೆ Supreme Court ಕಾನೂನು. ಇನ್ನೊಂದು ಕಡೆ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಬೇಕು ಎಂದು ಕೂಡ ಇಲ್ಲಿ ಚರ್ಚೆ ಕೂಡ ಆಗಿದೆ. ಅದರೂ ಕೂಡ ಅವಿರತವಾಗಿ ನಡೆಯುತ್ತಿದೆ. ಸುಲಭವಾಗಿ ಬಡವರಿಗೆ ಮತ್ತು ಸರ್ವರಿಗೂ ಮರಳು ಸಿಗುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳದೇ ಹೋದರೆ ಪೂರ್ಣ ಅಭಿವೃದ್ಧಿ ಕೂಡ ಕುಂಠಿತವಾಗುತ್ತದೆ. ಬಡವರು ಮನೆ ಕಟ್ಟಿಕೊಳ್ಳದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಿ ಅವಕಾಶ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡುತ್ತೇನೆ.

ಶ್ರೀ ಜಿ.ಹೆಚ್. ಶ್ರೀನಿವಾಸ್: ನಮ್ಮ ಭಾಗದವರಿಗೆ ಅವಕಾಶ ಕೊಟ್ಟಿಲ್ಲ. ಬರೀ ಆ ಕಡೆಯವರಿಗೆ ಕೊಟ್ಟಿರುತ್ತೀರಿ.

ಅಧ್ಯಕ್ಷರು: ಬೇಗ ಹೇಳಿ, ಇದನ್ನು ದೊಡ್ಡದಾಗಿ ಚರ್ಚೆ ಮಾಡಿಕೊಂಡು ಕುಳಿತರೆ ಹೇಗೆ?

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಸಮಸ್ಯೆ ಬಹಳ ದೊಡ್ಡದು. ಇವತ್ತು ಹೊಸ ಮರಳು ನೀತಿ ಬಂದ ಮೇಲೆ blocks ಮಾಡಬೇಕು carting yard ಮಾಡಬೇಕು ಅಲ್ಲಿಂದ ಮರಳು ತೆಗೆದುಕೊಳ್ಳಬೇಕು ಎಂದು ಇರುವುದು. ಆದರೆ ಕೊಡಗು ಜಿಲ್ಲೆಯಲ್ಲಿ ಎರಡು ವರ್ಷದಿಂದ carting yard ಇಲ್ಲ. 9 block ಗುರುತು ಮಾಡಿದ್ದರು ಅದರಲ್ಲಿ 7 ಕ್ಕೆ ಪರ್ಮಿಷನ್ ಆಗಿ ಟೆಂಡರ್ ಆಗಿಲ್ಲ. ಆದರೆ ಜಿಲ್ಲೆಯಲ್ಲಿ ನಿರಂತರವಾಗಿ ಮರಳನ್ನು ಸಾಗಿಸುತ್ತಿದ್ದಾರೆ. ಅದು ದಕ್ಷಿಣ ಕನ್ನಡ ಜಿಲ್ಲೆಯಿಂದ ಅಕ್ರಮವಾಗಿ ಬರುತ್ತಿದೆ. 'ಅಕ್ರಮವಾಗಿ ಮರಳು ದಂಧೆಗೆ ಜಿಲ್ಲಾಡಳಿತ ಶ್ರೀರಕ್ಷೆ' ಎಂದು ಪತ್ರಿಕೆಯಲ್ಲಿ ನೇರವಾಗಿ ಬಂದಿದೆ. ಒಬ್ಬ ಡ್ರೈವರ್ ಹೇಳುತ್ತಾನೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ಬೇಕಾಗಿಲ್ಲ. ನಾನು ಉತ್ತರ ಕೊಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ತಾವು ಆನಂತರ ಉತ್ತರ ಕೊಡಿ. ಇದು ಸರಿಯಲ್ಲ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, ನಾನು ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವ.

ಶ್ರೀ ಕೆ.ಜಿ. ಬೋಪಯ್ಯ: ಅದಕ್ಕೆ ನಮಗೆ ಗ್ರಹಚಾರ ಬಡಿದಿದ್ದು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಅಲ್ಲಿ ಬೋಪಯ್ಯನವರು, ಅಪ್ಪಚ್ಚುರಂಜನ್ ಎಲ್ಲಾ elected representatives KDP meeting ನಲ್ಲಿ ನನಗೆ ಏನು ಹೇಳಿದರು?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ತಾವು ಉಸ್ತುವಾರಿ ಸಚಿವರಾಗಿ ಕೆಲಸ ನಿರ್ವಹಿಸದೇ ಇರುವುದರಿಂದ ಕೊಡಗು ಜಿಲ್ಲೆಯಲ್ಲಿ ಅನಾಹುತವಾಗುತ್ತಿದೆ ಎಂದು ನೇರವಾಗಿ ಹೇಳುತ್ತೇನೆ. ನೀವು ಉಸ್ತುವಾರಿ ಸಚಿವರಾದ ಮೇಲೆಯೇ ಇವೆಲ್ಲವೂ ಆಗಿದ್ದು. ಹಿಂದೆ ಮಾನ್ಯ ಮಹದೇವಪ್ಪನವರು ಇದ್ದಾಗ ಏನೂ ನಡೆದಿರಲಿಲ್ಲ. ಎಲ್ಲವೂ ಸರಿಯಿತ್ತು. ನಿಮ್ಮ ಹಳೆ ಗುಣ ಉಂಟಲ್ಲ ಅದನ್ನು ಜಿಲ್ಲೆಯಲ್ಲಿ ಸಿದ್ಧಪಡಿಸಿದ್ದೀರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಒಂದು ನಿಮಿಷ ಕೇಳಿ ಇವರೇ ನನಗೆ ಹೇಳಿದ್ದಾರೆ, ಮಂಗಳೂರಿನಿಂದ ಮರಳು ಬರುತ್ತಿದೆ. ಅದನ್ನು ಹಿಡಿದು ಒಂದು ಲಕ್ಷ ರೂಪಾಯಿ fine ಹಾಕುತ್ತಿದ್ದಾರೆ ಎಂದು ಹೇಳಿಬಿಟ್ಟು, ಹೋಗಲಿ 25,000 ರೂಪಾಯಿ ಹಾಕಿ ಬಿಡುವಂತೆ ಹೇಳಿದವರು ಇವರೇ.

ಅಧ್ಯಕ್ಷರು: ಆಯಿತು ಬಿಡಿ. ಮಾನ್ಯ ಬೋಪಯ್ಯನವರೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಡ್ರೈವರ್ ಏನು ಹೇಳಿದ್ದಾರೆ ಎನ್ನುವುದನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಆಯಿತು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ: 'ತಮ್ಮ ಮಾಲೀಕರ ಸೂಚನೆಯನ್ವಯ ಎಸ್.ಪಿ ಬಂಗಲೆಗೆ ಸೋಮವಾರ ರಾತ್ರಿ ಮರಳು ಹಾಕಿದ್ದೇನೆ. ಮೂರು ದಿನದಿಂದ ದಕ್ಷಿಣ ಕನ್ನಡ ಜಿಲ್ಲೆಯಿಂದ ಮಡಿಕೇರಿಗೆ ಹೋಗಿದೆ.

ಅಧ್ಯಕ್ಷರು: ಆ ರೀತಿ ಹೇಳಿದವರು ಯಾರು?

ಶ್ರೀ ಕೆ.ಜಿ. ಬೋಪಯ್ಯ: ಡ್ರೈವರ್

ಅಧ್ಯಕ್ಷರು: ಯಾವ ಡ್ರೈವರ್? ಅವರ ಹೆಸರು ಏನು?

ಶ್ರೀ ಕೆ.ಜಿ. ಬೋಪಯ್ಯ: ಲಾರಿ ಡ್ರೈವರ್‌ನ ಹೆಸರು ಸತೀಶ್.

ಅಧ್ಯಕ್ಷರು: ಅವೆಲ್ಲಾ ಹೇಳಬೇಕು.

ಶ್ರೀ ಕೆ.ಜಿ. ಬೋಪಯ್ಯ: ಅದನ್ನೇ ಹೇಳುತ್ತಿದ್ದೆ. ಅಷ್ಟೊತ್ತಿಗೆ ಅವರು ಮಾತನಾಡಲು ಮಧ್ಯೆ ಎದ್ದು ನಿಂತರು.

ಅಧ್ಯಕ್ಷರು: ಹೆಸರು, ವಿಳಾಸ ಹೇಳಬೇಕು. ಏಕೆಂದರೆ ನೀವು ಈ ಸದನದ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ನೀವು ಹೆಸರು, ವಿಳಾಸ ಹೇಳಿದರೆ ಇಲ್ಲಿ ದಾಖಲೆಗೆ ಹೋಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ದಾಖಲೆಯನ್ನು ಕೊಡುತ್ತೇನೆ.

ಅಧ್ಯಕ್ಷರು: ಆ ದಾಖಲೆ ಪ್ರಕಾರ ಸಂಬಂಧಪಟ್ಟವರು ತನಿಖೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: Seize ಮಾಡಿದ ಲಾರಿ ಬಗ್ಗೆ ಎಲ್ಲಾ ಮಾಹಿತಿಯನ್ನೂ ಕೊಡುತ್ತೇನೆ. 15 ಲಾರಿಗಳನ್ನು ಏಕ ಕಾಲದಲ್ಲಿ seize ಮಾಡಿದರು. ಅವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿದ್ದವು. Seize ಮಾಡಿದ ತಕ್ಷಣ 5,000 ರೂಪಾಯಿಯಂತೆ penalty ಹಾಕಿ ಬಿಟ್ಟರು. ಹಿಂದಿನ ಎಸ್.ಪಿಯವರು ಬಂಗಲೆಯನ್ನೆಲ್ಲಾ ರಿಪೇರಿ ಮಾಡಿ ಚಂದ ಮಾಡಿ ಹೋಗಿದ್ದಾರೆ ರಿಪೇರಿ ಮಾಡಲು ಇವರು permission ತೆಗೆದುಕೊಂಡಿದ್ದಾರೋ, ತೆಗೆದುಕೊಂಡಿಲ್ಲವೋ ಗೊತ್ತಿಲ್ಲ. ಕಾನೂನು ಬಾಹಿರವಾಗಿ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಹೇಳುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಈ ರೀತಿ ಒಬ್ಬರು ಎಸ್.ಪಿ ಮೇಲೆ ದೂರು ಹೇಳಿದರೆ ಹೇಗೆ? ಇವರು ಎಸ್.ಪಿ ಮೇಲೆ ಹೇಗೆ ದೂರು ಹೇಳುತ್ತಾರೆ?

(ಗೊಂದಲ)

ಅಧ್ಯಕ್ಷರು: ಏನಾಗಿದೆ ಎನ್ನುವುದನ್ನು ಸ್ವಲ್ಪ ಕೇಳಿ. ಏನು ಅವರು ಹೇಳಬಾರದಾ? ಅವರು ಏನು ತಪ್ಪು ಹೇಳಿದ್ದಾರೆ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಈ ರೀತಿ ಒಬ್ಬರು ನಿಷ್ಠಾವಂತ ಅಧಿಕಾರಿಗಳ ಮೇಲೆ ದೂರು ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: **ಸುಮ್ಮನಿರಿ.** Please.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಅವರು ಒಳ್ಳೆಯ ಲೇಡಿ ಎಸ್.ಪಿ ಆಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ಎಸ್.ಪಿ ಬಗ್ಗೆ ಅವರು ಏನು ತಪ್ಪು ಹೇಳಿದ್ದಾರೆ ಹೇಳಿ ನೋಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಒಬ್ಬರು ಸಚಿವರಾಗಿ ಈ ರೀತಿ ನಡೆದುಕೊಳ್ಳುವುದೇ?

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ: ಎಸ್.ಪಿ ಯವರು ನಿಮ್ಮ ನೆಂಟರೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಎಸ್.ಪಿ. ಆದರೆ ಏನು ಅವರು ನಿಮ್ಮ ನೆಂಟರೇ? ಎಸ್.ಪಿ ಗೆ ಏಕೆ ಅಷ್ಟು defend ಮಾಡುತ್ತೀರಿ? ಎಸ್.ಪಿ.ಯವರನ್ನು defend ಮಾಡುತ್ತೀರಲ್ಲಾ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಸಚಿವರೆ ತಾವು ಸದಸ್ಯರನ್ನು ದಬಾಯಿಸುವುದಕ್ಕೆ ಹೋಗಬೇಡಿ. ತಾವು Home Minister ಇರಬಹುದು. ಆದರೆ ಸದಸ್ಯರನ್ನು ದಬಾಯಿಸುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಕೇಳಿ. ಏನಾದರೂ objection ಇದ್ದರೆ, raise objection.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಒಬ್ಬರು ಒಳ್ಳೆಯ ಅಧಿಕಾರಿ, ನಿಷ್ಠಾವಂತ ಅಧಿಕಾರಿಯನ್ನು ಈ ರೀತಿ ಟೀಕೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಜಾರ್ಜ್‌ರವರೆ ದಯವಿಟ್ಟು ತಮ್ಮಲ್ಲಿ ಮನವಿ ಮಾಡುತ್ತೇನೆ ನಿಮ್ಮ ಅಧಿಕಾರಿಗಳನ್ನು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಒಳ್ಳೆಯ ಅಧಿಕಾರಿಗಳನ್ನು defend ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಏಕೆ ಎನ್ನುವುದನ್ನು ಹೇಳುತ್ತೇನೆ ಕೇಳಿ. ಮೊನ್ನೆ ತಾನೆ ಕರ್ನಾಟಕ ಹೈಕೋರ್ಟ್‌ನಲ್ಲಿ ರಾಮನಗರ ಜಿಲ್ಲೆಯಲ್ಲಿ ಒಬ್ಬ RTI ಕಾರ್ಯಕರ್ತರಾದ ರವಿಕುಮಾರ್ ಎನ್ನುವವರು 1992 ರಲ್ಲಿ ಸೆಕ್ಷನ್ 324 ಅಥವಾ 304 ರಲ್ಲಿ ಒಂದು ಕೇಸ್ ಹಾಕಿದ್ದರಿಂದ ಸೋಮವಾರ ಅವನು ಕೋರ್ಟ್‌ಗೆ ಹೋಗಬೇಕಾಗಿತ್ತು. ಶನಿವಾರ ಅವನನ್ನು arrest ಮಾಡಿ ಜೈಲಿಗೆ ಕಳುಹಿಸುತ್ತಾರೆ. ಇದು ನಿಮ್ಮ ಅಧಿಕಾರಿಗಳನ್ನು ಉಪಯೋಗ ಮಾಡಿಕೊಳ್ಳುತ್ತಿರುವ ಯಾವ ವಾತಾವರಣ ರಾಜ್ಯದಲ್ಲಿದೆ ಎಂದು ನಾನು ಇಲ್ಲಿ raise ಮಾಡಲಿಲ್ಲ. ಏಕೆಂದರೆ ಬೇರೆ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಸಮಯ ಅದಕ್ಕೆ ಕೊಡಲಿಲ್ಲ. ಒಬ್ಬರು ಹೆಣ್ಣುಮಗಳು ಹೊರಗಡೆ ಬಂದು ರೆಕಾರ್ಡ್ ಕೊಟ್ಟಿದ್ದಾಳೆ. ಅವರು KEB ಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು: ಅದು ಈಗ ಬೇಡ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಮಗೂ ಕೊಟ್ಟಿದ್ದಾರೆ. Zero hour ಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಹೆಣ್ಣು ಮಗಳು ಹಿರಿಯ ಅಧಿಕಾರಿಗಳ ಮೇಲೆ complaint ಕೊಟ್ಟಿದ್ದಕ್ಕೆ harassment.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Harassment ಮಾಡಿದ್ದಾರೆ. Attempt to rape.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಒಬ್ಬಳು ಕೆಲಸ ಮಾಡುತ್ತಿರುವ educated ladyಗೆ harassment ಮಾಡುತ್ತಿದ್ದಾರೆ. ಅದಕ್ಕೆ ನಿಮ್ಮ ಅಧಿಕಾರಿಗಳನ್ನು defend ಮಾಡಿಕೊಳ್ಳಬೇಡಿ ಎಂದು ಹೇಳುತ್ತಿರುವುದು. ನಿಮ್ಮ ಅಧಿಕಾರಿಗಳನ್ನು defend ಮಾಡಿಕೊಂಡು ನೀವುಗಳು ಕೆಟ್ಟ ಹೆಸರನ್ನು ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಕುಮಾರಸ್ವಾಮಿಯವರೆ ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಟ್ಟರೆ ಅದರ ಹಿನ್ನೆಲೆಯನ್ನು ಹೇಳುತ್ತೇನೆ. ಕಸ್ತೂರಿ ರಂಗನ್ ರಿಪೋರ್ಟ್ ಕೊಡಗಿಗೆ ಬಂದಿತ್ತು. ಆವತ್ತು public grievances ಗೆ ಹೋದಾಗ ಅಲ್ಲಿ ಅಧಿಕಾರಿಗಳನ್ನು DFO ರವರನ್ನು ಹಿಡಿದು ಹೊಡೆದಿದ್ದಾರೆ. ಅದಕ್ಕೆ ರಸ್ತೆ ರೋಕೋ ಮಾಡಿ ಬಂದ್ ಮಾಡಿದಾಗ, ಎಸ್.ಪಿ ಯವರು ಕೇಸ್ ಹಾಕಿದ್ದಾರೆ. ಅವರು ಒಬ್ಬರು ಒಳ್ಳೆಯ ಲೇಡಿ ಎಸ್.ಪಿ. ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಅವರ ಮನೆ ಮೇಲೆ ಖರ್ಚು ಮಾಡಿದ್ದಾರೆ ಎಂದರೆ ಅದು ಅವರ ಸ್ವಂತ ಮನೇನಾ? ಅದು ಸರ್ಕಾರಿ ಬಂಗಲೆ. ಈ ರೀತಿ ಒಬ್ಬರು ಅಧಿಕಾರಿ ವಿಚಾರದಲ್ಲಿ ಹೇಳಿದರೆ ಹೇಗೆ? ಅವರು ನೋಟಿಸ್ ಕೊಡಲಿ ನಾನು ಉತ್ತರ ಕೊಡುತ್ತೇನೆ. ನಾನು ಆವತ್ತೇ ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು: ಅವರು ದುರುಪಯೋಗಪಡಿಸಿಕೊಂಡು ಬಂಗಲೆಯ ರಿಪೇರಿ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರಾ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಸಾರ್ ಅವರು ಅದೇ ಅರ್ಥದಲ್ಲಿ ಹೇಳಿದರು. ದುರುಪಯೋಗ ಮಾಡಿಕೊಂಡು ಮನೆಯನ್ನು ರಿಪೇರಿ ಮಾಡಿಸಿದ್ದಾರೆ ಎಂದು ಹೇಳಿದರು. ಮಾನ್ಯ ಬೋಪಯ್ಯನವರೇ ತಾವು ಅದೇ ಅರ್ಥದಲ್ಲಿ ಹೇಳಿದಿರಿ. ಆ ಎಸ್.ಪಿಯವರು ದುರುಪಯೋಗ ಮಾಡಿಕೊಂಡು ಆ ಮನೆಯನ್ನು ಐಷಾರಾಮಿ ಮಾಡಿಕೊಂಡಿದ್ದಾರೆ ಎಂದು ಹೇಳಿದಿರಿ. ಮಾನ್ಯ ಅಧ್ಯಕ್ಷರೆ, ಅವರು ಆ ರೀತಿ ಇಲ್ಲಿ ಆಪಾದನೆಗಳನ್ನು ಮಾಡುತ್ತಿದ್ದಾರೆ. ನಿರಾಧಾರವಾದ ಆಪಾದನೆಗಳು.

(ಗೊಂದಲ)

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ ಏನು ಹೇಳಿ.

(ಗೊಂದಲ)

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ನಾನು ಹೇಳಿಲ್ಲ. ಎಸ್.ಪಿಯವರ ಮನೆಗೆ ಮರಳು ಹಾಕಿದ್ದಾರೆ ಎಂದು ಹೇಳಿದ್ದೇನೆ. ಪತ್ರಿಕೆಯಲ್ಲಿ ಹೇಗೆ ಬರೆದಿದ್ದಾರೆ ಎಂದರೆ, 'ಜಿಲ್ಲಾಡಳಿತ ಶ್ರೀರಕ್ಷೆಯಲ್ಲಿ'. ಆದರೆ ವಿಪರ್ಯಾಸವೆಂದರೆ ಪೊಲೀಸ್ ವರಿಷ್ಠಾಧಿಕಾರಿ ಬಂಗಲೆ, ಅಭಿವೃದ್ಧಿ ಕಾಮಗಾರಿಗೆ ಬಳಸುತ್ತಿರುವ ಮರಳು ಅಕ್ರಮ ಸಾಗಾಣಿಕೆಯಿಂದ ಪಡೆಯಲಾಗಿದೆ. ಅಲ್ಲದೇ ಅಗತ್ಯ ಮರಳುಗಳನ್ನು ಸಾಗಣೆದಾರರು ಉಚಿತವಾಗಿ ಪೂರೈಸುತ್ತಿದ್ದಾರೆ. ಕಾರಣ ಅಕ್ರಮ ಮರಳು ಸಾಗಾಣಿಕೆಗೆ ಪೊಲೀಸರು ಅವಕಾಶ ನೀಡಿದರು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕರೆ, ನಾವೂ ಹೇಳಬಹುದು, ಇವರ ಕಾಲದಲ್ಲಿ ರಾಜ್ಯವನ್ನು ರಾಜಾರೋಷವಾಗಿ ಲೂಟಿ ಮಾಡಿದರು. ಆಗ ಇವರು ಏನು ಮಾಡಿದರು? ನಿಮ್ಮ ಕೈಯಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಜನರು ಪಾಠ ಕಲಿಸುವುದಕ್ಕಾಗಿ ಆ ಕಡೆ ಕಳುಹಿಸಿಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್. ಜಗದೀಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಸುಮ್ಮಸುಮ್ಮನೆ ಲೂಟಿ ಮಾಡಿದರು, ಲೂಟಿ ಮಾಡಿದರು ಎಂದು ಹೇಳಿರುವುದನ್ನು ಕಡತದಿಂದ ತೆಗೆದುಹಾಕಿಸಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ ಬೇಗ ಪೂರೈಸಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಇಲ್ಲಿ ಒಬ್ಬರು contractor ಏನು ಹೇಳುತ್ತಾರೆ ಎಂದರೆ, 'ಸರ್ಕಾರಿ ಅಭಿವೃದ್ಧಿ ಕಾಮಗಾರಿಗೆ ಅಗತ್ಯ ಮರಳು ರಹದಾರಿ ಇಲ್ಲದೇ ಸಾಗಾಣಿಕೆ ಮಾಡುತ್ತಿದ್ದೇನೆ. ಒಬ್ಬ ವ್ಯಕ್ತಿಗೂ ಮಾರಾಟ ಮಾಡಿಲ್ಲ. ಮರಳು ಸಾಗಾಣಿಕೆ ಮಾಡಲು ಮಾತ್ರ ಅವಕಾಶ ನೀಡುವಂತೆ ಕೋರಿ ಜಿಲ್ಲಾಧಿಕಾರಿ ಪತ್ರ ಬರೆದಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ ಅದನ್ನು ಏನು ಓದುತ್ತೀರಿ? ಅದರ ಕಾಪಿ ಇದ್ದರೆ ಅವರಿಗೆ ಕೊಡಿ. ಅವರಿಗೆ ಓದುವುದಕ್ಕೆ ಬರುತ್ತದೆ

ಅದನ್ನು ಅವರಿಗೆ ಕಳುಹಿಸಿಕೊಡಿ. ಓದುವುದಕ್ಕೆ ಅದರಲ್ಲಿ ಏನಿದೆ?

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಬೋಪಯ್ಯನವರೆ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ನಮಗೆ ಇಲ್ಲಿ ಏನು ನಡೆಯಿತು ಎನ್ನುವುದು ಗೊತ್ತಾಗುತ್ತಿಲ್ಲ. ಮಾನ್ಯ ಸದಸ್ಯರಾದ ಬೋಪಯ್ಯನವರು he appears to be making certain very serious allegations. ನಮಗೆ ಇದುವರೆಗೂ ಕೇಳಲ್ಪಟ್ಟಿದ್ದು ಏನೆಂದರೆ ಸತೀಶ್ ಎನ್ನುವ ಹೆಸರಿನ ಡ್ರೈವರ್ ಒಬ್ಬರು ಎಸ್.ಪಿಯವರ ಮನೆಯಲ್ಲಿ ಮರಳು ಹಾಕಿದ್ದೇನೆ ಎಂದು ಹೇಳಿಕೆ ಮಾಡಿದ್ದಾರೆ ಎಂದು. ಅಂದರೆ he has impleaded the name of Superintendent of Police. ಒಬ್ಬರು Superintendent of Police ಎಂದರೆ All India Services ಗೆ ಸೇರಿದವರು. He has to establish all those things by documents. ಇಲ್ಲದಿದ್ದರೆ, it becomes very very difficult. S.P. is not here. Whether he or she to defend themselves. ನಮಗೆ ಮಾನ್ಯ ಬೋಪಯ್ಯನವರು he is most welcome, he is a very responsible member, he is a practicing lawyer. ಈ ಸದನದ ಅಧ್ಯಕ್ಷರಾಗಿದ್ದವರು. ನಾನು ಏನು ಹೇಳುತ್ತೇನೆ ಎಂದರೆ, ಈ ಗದ್ದಲದಲ್ಲಿ ನಮಗೆ ಏನೂ ಗೊತ್ತಾಗಿಲ್ಲ. ದಯಮಾಡಿ ತಾವು ಏನು ಹೇಳಿದಿರಿ ಅದನ್ನು ಒಂದು ಬಾರಿ repeat ಮಾಡಿ, because it is very incriminating in nature. ಅವರು ಯಾರು ಸಂಬಂಧಪಟ್ಟಿದ್ದಾರೆ, ಯಾರು ತಪ್ಪು ಮಾಡಿದ್ದಾರೆ ಅವರು ಅನುಭವಿಸಿಕೊಳ್ಳುತ್ತಾರೆ. ಅವರು ಅವರನ್ನು defend ಮಾಡಿಕೊಳ್ಳುತ್ತಾರೆ. ಆದರೆ ಅವರೂ ಎದ್ದು, ಇವರೂ ಎದ್ದು ಗದ್ದಲದಲ್ಲಿ ಅವೆಲ್ಲಾ ರೆಕಾರ್ಡ್ ಹೋಗಿ ಏನೂ ಗೊತ್ತಾಗದೇ ಹೋದರೆ, now we are present in the House, we become answerable. Therefore, ದಯಮಾಡಿ please give us the benefit of knowing what you said.

ಒಬ್ಬ ಮಾನ್ಯ ಸದಸ್ಯರು: ನಿಮ್ಮ ಸದಸ್ಯರಿಗೆ ಸುಮ್ಮನೆ ಇರುವುದಕ್ಕೆ ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಬೋಪಯ್ಯನವರು ಮಾತನಾಡುತ್ತಿದ್ದಾರೆ. ಸಚಿವರುಗಳು ಈ ಮನೆಯ ಸದಸ್ಯರು ನಿಜ. ಸಚಿವರುಗಳಾದವರು ಸರ್ಕಾರ ಇದ್ದಾಗ ಸುಮ್ಮನೆ ಕುಳಿತುಕೊಳ್ಳಲಿ. Members ಮಾತನಾಡಲಿ. ಮಧ್ಯೆ ಮಧ್ಯೆ ಅವರು ಏಕೆ interfere ಆಗಬೇಕು?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಾವೇನು answer ಮಾಡಬಾರದೇ?

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಸದಸ್ಯರು ಮಾತನಾಡುತ್ತಿದ್ದಾರೆ. ಸರ್ಕಾರ ನಂತರ ಉತ್ತರ ಕೊಡಲಿ ಅವರಿಗೆ ಸಮಯ ಕೊಡುವುದಿಲ್ಲವೇ? ಅದು ಬಿಟ್ಟು ಎಲ್ಲರೂ ಈ ರೀತಿ ಎದ್ದು ನಿಂತರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಆಯಿತು ಬೋಪಯ್ಯನವರೆ ಮಾತನಾಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ ನಾನು ಹೇಳಿದ್ದು ಇಷ್ಟೇ. ನಮ್ಮ ಜಿಲ್ಲೆಯೊಳಗೆ ಇವತ್ತು carting yard ಆಗಿಲ್ಲ. Just block ಗುರುತು ಮಾಡಿ ಇನ್ನೂ tender process ಆಗಿಲ್ಲ. ಆದರೆ ಜಿಲ್ಲೆಯೊಳಗೆ ಮರಳು ಯಾರಿಗೆ ಬೇಕೋ ಅವರಿಗೆ ನಿರಂತರವಾಗಿ ಸಿಗುತ್ತಿದೆ. ಹೊರಗಡೆಯಿಂದ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಮರಳು ಬರುತ್ತಿದೆ. ಅದಕ್ಕೆ ಪ್ರತಿಭಟನೆಯನ್ನೂ ಅಲ್ಲಿನ ಲಾರಿ ಮಾಲೀಕರು, ಡ್ರೈವರ್ಸ್ ಎಲ್ಲಾ ಸೇರಿ ಮಾಡಿದ್ದಾರೆ. ಆಗ ಕೆಲವು ಪತ್ರಕರ್ತಕರು ಹೋಗಿ interview ಮಾಡಿದಾಗ ಇದನ್ನು ಹೇಳಿದ್ದಾರೆ ಎನ್ನುವುದಕ್ಕೆ ಒಬ್ಬರ statement ಅನ್ನು ಓದಿದ್ದೇನೆ. ಆದರೆ

ಇವತ್ತು ಏನಾಗಿದೆ ಎಂದರೆ, ಯಾರಾದರೂ ಸ್ವಂತ ಉಪಯೋಗಕ್ಕೆ, ನಮ್ಮಲ್ಲಿ stream ಅದರಿಂದ ಮರಳು ತೆಗೆದರೆ ಆ tractor, pick up ಏನಾದರೂ ತೆಗೆದರೆ 50,000 fine ಹಾಕುತ್ತಾರೆ. ಎಸ್.ಪಿಯವರು 15 ಲಾರಿಗಳನ್ನು seize ಮಾಡಿದ್ದಾರೆ. ಅದಕ್ಕೆ penalty ಎಷ್ಟೆಂದರೆ ₹ 50,000/– each. ಮತ್ತೆ ಈ ಮರಳು ಎಲ್ಲಿ ಹೋಯಿತು ಎನ್ನುವುದು ಗೊತ್ತಿಲ್ಲ. ಅದರ ಜೊತೆಗೆ ಮರಳು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದು ಕೊಡಗು ಮುಖಾಂತರ ಕೇರಳಕ್ಕೆ ಹೋಗುತ್ತದೆ. ಅಲ್ಲಿ ಎರಡು ಗೇಟ್ ಇದೆ. ಎರಡೇ ರೋಡ್ ಇರುವುದು. ಒಂದು ಮಾಕೂಟ, ಇನ್ನೊಂದು ಕುಟ್ಟ ಅಲ್ಲಿದ್ದ ಪೊಲೀಸ್‌ರನ್ನು withdraw ಮಾಡಿದ್ದಾರೆ. ಏತಕ್ಕಾಗಿ withdraw ಮಾಡಿದ್ದಾರೆಂದರೆ there is shortage of policemen ಎಂದು ಉತ್ತರ ಕೊಡುತ್ತಾರೆ. ಆ ಗೇಟ್‌ಅನ್ನು tight ಮಾಡಿ ಮರಳು ಹೊರಗಡೆ ಹೋಗಬಾರದು ಎಂದು ಎಷ್ಟೇ ವಿನಂತಿಯನ್ನು ಮಾಡಿದರೂ ಈ ಬಗ್ಗೆ KDP Meetingನಲ್ಲಿಯೂ ಪ್ರಸ್ತಾಪವಾಗಿತ್ತು. ಇವರು ಏನೂ ಮಾಡಲಿಲ್ಲ. ಅಲ್ಲಿ ಅಕ್ರಮವಾಗಿ ನಿರಂತರ ಮರಳು ಹೋಗುತ್ತಿದೆ ಇದನ್ನು ತಡೆಗಟ್ಟಬೇಕಾಗುತ್ತದೆ. ಈ ಬಗ್ಗೆ procedure follow ಮಾಡಿ ಮಾಡಬೇಕಾಗುತ್ತದೆ. ಎರಡು ತಿಂಗಳಿನಿಂದ ಮಳೆಯು ಹೊಡೆಯುತ್ತಿತ್ತು, ಈಗಲೂ ಸಹ ಮಳೆಯು ಬರುತ್ತಿದೆ. ಇನ್ನು ಮೂರು ತಿಂಗಳು ಆದರೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಇವರು ಟೆಂಡರ್ ಮತ್ತು carting yard ಮಾಡುವ ಹೊತ್ತಿಗೆ ಯಾವ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆ? ಇಲ್ಲಿ ಬೇಕಾದವರಿಗೆ ನಿರಂತರವಾಗಿ ಮರಳು ಸಿಗುತ್ತಿದೆ. ಎಲ್ಲಾ ಕಡೆಯಿಂದಲೂ ಮರಳನ್ನು ತೆಗೆಯುತ್ತಿದ್ದಾರೆ. ನಿಜವಾಗಿ ಒಬ್ಬ ರೈತನು ಮರಳನ್ನು ತೆಗೆದರೆ ಅವನಿಗೆ ದಂಡವೇ? ಇದು ಮೊದಲು Rules ನಲ್ಲಿ ಹೇಗೆ ಇತ್ತೆಂದರೆ ರೆವಿನ್ಯೂ ಇಲಾಖೆಯವರು ಮತ್ತು ಪೊಲೀಸ್ ಇಲಾಖೆಯವರು ಜಂಟಿ ಕಾರ್ಯಾಚರಣೆಯನ್ನು ಮಾಡಬೇಕೆಂದು ಇತ್ತು. ಈಗ ಜಂಟಿ ಕಾರ್ಯಾಚರಣೆಯು ನಡೆಯುತ್ತಿಲ್ಲ. ಈಗ ಪೊಲೀಸ್‌ನವರು ಅವರಿಗೆ ಇಷ್ಟಬಂದಹಾಗೆ raid ಮಾಡಿ ಎಲ್ಲವನ್ನೂ seize ಮಾಡುತ್ತಾರೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ Forest Departmentನವರು ಸಹ

independent ಆಗಿ raid ಮಾಡುತ್ತಿದ್ದಾರೆ. ಇತ್ತೀಚೆಗೆ ಒಬ್ಬ ರೈತನು ಕಾಫಿ ಬೆಳೆಯುವ ಜಾಗವನ್ನು ರಿಪೇರಿ ಮಾಡುವುದಕ್ಕೆ ಒಂದು pickupನಲ್ಲಿ ಮರಳು ತಂದ. Forest Department ACFನವರು ಅಲ್ಲಿಗೆ ಹೋಗಿ seize ಮಾಡುತ್ತಾರೆ. ಇವರು ಆ stream ನಮಗೆ ಸೇರಿದ್ದು ಎಂದು ಹೇಳುತ್ತಾರೆ. ನಮಗೆ ಗೊತ್ತಿರುವಹಾಗೆ ತೋಡು ಇದೆಯಲ್ಲಾ ಇದು Minor Irrigationಗೆ ಸೇರಿರುತ್ತದೆ. ಇವರು ಅದನ್ನು ನಮಗೆ ಸೇರಿದೆ ಎಂದು ಹೇಳುತ್ತಾರೆ. ಈ ರೀತಿಯಾಗಿ ಪೊಲೀಸ್‌ನವರ ಕಿರುಕುಳ, ಫಾರೆಸ್ಟ್ ಅಧಿಕಾರಿಗಳ ಕಿರುಕುಳ, ಇಲ್ಲಿ ರೆವಿನ್ಯೂ ಇಲಾಖೆಯವರದು ಅಂತಹದ್ದು ಏನೂ ಇಲ್ಲ. ಈ ತರಹ ಆದರೆ ಹೇಗೆ? ಆ Rules ಅನ್ನು follow ಮಾಡಿ ಮಾಡುವುದಕ್ಕೇನು? ಅವರು ಇದುವರೆಗೂ ಮಾಡಿಲ್ಲ. ಅದನ್ನು ಇವರು follow ಮಾಡಿ ಮಾಡಬೇಕಲ್ಲವೇ? ಈ ದಂಧೆಯನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕತೆಯಿಂದ ಮಾಡಿದರೆ ಮಾಡುವುದಕ್ಕೆ ಸಾಧ್ಯತೆ ಇದೆ. ಇರುವ ಕಾನೂನಿನ ವ್ಯವಸ್ಥೆಯಲ್ಲಿ ಆದಷ್ಟು ಬೇಗನೆ ಮಾಡಿ ಈ ದಂಧೆ ನಡೆಯುತ್ತಿರುವುದನ್ನು ನಿಲ್ಲಿಸದೇ ಹೋದರೆ ಒಂದು ದಿವಸ ಕಾವೇರಿ ಹೊಳೆಯು ಬತ್ತಿಹೋಗುತ್ತದೆ ಅದಕ್ಕೆ ತಾವು ದಯವಿಟ್ಟು ಅವಕಾಶವನ್ನು ಕೊಡಬೇಡಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಕೊಡಗಿನ ಉಸ್ತುವಾರಿ ಸಚಿವನಾಗಿರುವುದರಿಂದ ಅಲ್ಲಿ ಏನಾಗಿದೆ ಎಂಬುವುದನ್ನು ನಾನು ಎರಡು ನಿಮಿಷದಲ್ಲಿ ಹೇಳಿಬಿಡುತ್ತೇನೆ. ನಾನು ಉಸ್ತುವಾರಿ ಸಚಿವನಾಗಿದ್ದಾಗ ಕೊಡಗಿನಲ್ಲಿ ಮರಳು ಸಾಕಷ್ಟು ಇಲ್ಲವೆಂದು ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಜಿ.ಬೋಪಯ್ಯ ಮತ್ತು ಶ್ರೀ ಅಪ್ಪಚ್ಚು ರಂಜನ್‌ರವರು ಸಹ ಹೇಳಿದರು. ಆಗ ಅಲ್ಲಿ ಮಂಗಳೂರಿನಿಂದ ಮರಳು ಬರುತ್ತಿತ್ತು. ನಮ್ಮ officerಗಳು ಎಲ್ಲರೂ ಸೇರಿಬಿಟ್ಟು ಒಂದು ಲಕ್ಷ ರೂಪಾಯಿಗಳ fine ಹಾಕುತ್ತಿದ್ದರು. ಇವರು ಏನು ಹೇಳುತ್ತಿದ್ದಾರೆಂದರೆ, ನಮಗೆ ಲೋಕಲ್‌ನಲ್ಲಿ ಮರಳು ಇಲ್ಲ ಎಂದು ಹೇಳುವುದಕ್ಕೆ fine ಕಡಿಮೆ ಮಾಡಬಹುದು. ನಮ್ಮ ನಿಯಮ ಪ್ರಕಾರ 25,000 fine ಮಾಡುವುದಕ್ಕೆ ಅವಕಾಶ ಇದೆ. ಅದಕ್ಕಿಂತಲೂ ಕಡಿಮೆ ಮಾಡುವುದಕ್ಕೆ ಹೋದರೆ ಮರಳು

ಲೋಕಲ್‌ನವರಿಗೆ ಬೇಕಾಗುತ್ತದೆ. ಇಲ್ಲಿ medical college constructions, ಬೇರೆ ಬೇರೆ ಕೆಲಸ ನಡೆಯುತ್ತಿದೆ. ಅದಕ್ಕಾಗಿ ಕಡಿಮೆ fine ಮಾಡಿ ಎಂದು ನಾನು ನಮ್ಮ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಹೇಳಿ ಕಳುಹಿಸಿದ್ದೇನೆ. ಅದಕೋಸ್ಕರವಾಗಿ ಕಡಿಮೆ fine ಮಾಡಿಬಿಟ್ಟು ಇವತ್ತಿನದಿವಸ ಕೊಡಗಿನಲ್ಲಿ ಮರಳು ಸಿಗುವ ಹಾಗೆ ಮಾಡಿದ್ದೇನೆ. ಇವತ್ತು ಏನಾಗಿದೆ ಎಂದರೆ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ.ಬೋಪಯ್ಯನವರು ಹೇಳಿದಹಾಗೆ ಮಂಗಳೂರಿನಿಂದ ಕೊಡಗಿಗೆ ಮರಳು ಬಂದು ಕೇರಳಕ್ಕೆ ಹೋಗಬೇಕಾಗಿಲ್ಲ. ಮಂಗಳೂರಿನಿಂದ ನೇರವಾಗಿ ಕೇರಳಕ್ಕೆ ಹೋಗಬೇಕಾದರೆ ಹತ್ತಿರವಾಗುತ್ತದೆ. ಮಂಗಳೂರಿನಿಂದ ಕೊಡಗಿಗೆ ಬಂದು ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳಿಬಿಟ್ಟು ನನ್ನ ಇಲಾಖೆಯ ಎಲ್ಲಾ police officersಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆ ತರಹ ಏನಾದರೂ ಅಕ್ರಮವಾಗಿ ಮರಳು ಅಲ್ಲಿಗೆ ಹೋಗುತ್ತಿದ್ದರೆ ಅದನ್ನು ನಿಲ್ಲಿಸುತ್ತೇವೆ. ನಮ್ಮ ಕರ್ನಾಟಕದಿಂದ ಹೊರರಾಜ್ಯಕ್ಕೆ ಮರಳು ಹೋಗದಹಾಗೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಎಸ್.ಪಿ.ಯವರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಅವರು ಒಬ್ಬ ಮಹಿಳಾ ಎಸ್.ಪಿ.ಯಾಗಿದ್ದಾರೆ. ಅವರು ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಕೆಲಸದಲ್ಲಿ strict ಆಗಿದ್ದಾರೆ. ನಾನು ಗೃಹಮಂತ್ರಿಯಾದ ಮೇಲೆ ನಾನೊಬ್ಬನೇ ಬಂದಿದ್ದೇನೆ. ಅಲ್ಲಿ ಬಾಕಿ ಎಲ್ಲಾ ನಿಮ್ಮ ಕಾಲದ ಅಧಿಕಾರಿಗಳೇ ಇದ್ದಾರೆ. ನಾನು ಅಧಿಕಾರಿಗಳನ್ನು ಕರೆದುಕೊಂಡು ಬಂದು ಗೃಹಮಂತ್ರಿಯಾಗಲಿಲ್ಲ. ದಯವಿಟ್ಟು ಎಲ್ಲಾ officersಗಳ ಮೇಲೆ ಈ ತರಹ ದೋಷಾರೋಪಣೆಯನ್ನು ಮಾಡುವುದಕ್ಕೆ ಹೋಗಬೇಡಿ. ಯಾರು ತಪ್ಪು ಮಾಡಿದ್ದಾರೆ ಅವರ ಹೆಸರನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ: ನಮ್ಮ ಕಾಲದ ಒಬ್ಬ ಅಧಿಕಾರಿಯೂ ಅಲ್ಲಿ ಇಲ್ಲ. ಏತಕ್ಕಾಗಿ ಸುಮ್ಮನೆ ಸುಳ್ಳು ಹೇಳುತ್ತೀರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಒಳ್ಳೆಯ ಅಧಿಕಾರಿಗಳು ಯಾರೂ ಇಲ್ಲವೇ?

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ, ನೀವು ಹೇಳುವಾಗ ಈ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಾನು ನಿಮ್ಮ ಕಾಲದ ಕೊಡಗಿನ ಅಧಿಕಾರಿಗಳು ಇದ್ದಾರೆಂದು ಹೇಳುತ್ತಿಲ್ಲ ನಾನು ಕರ್ನಾಟಕದಲ್ಲಿರುವ ಅಧಿಕಾರಿಗಳ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ: ಇವರು ಬಂದ ಮೇಲೆ Entire office system change ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನೋಡಿ ಎಲ್ಲಾ ಚೆನ್ನಾಗಿ ಆಗುತ್ತಿದೆ. ನೀವು ಅವರಿಗೆ ತೊಂದರೆ ಕೊಡದಿದ್ದರೆ ಸಾಕು. ನಾನು ಬಂದ ಮೇಲೆ strict ಮಾಡಿದ್ದೇನೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನೀವು ಸಚಿವರಾಗಿ ಬಂದ ಮೇಲೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಡೀ ಜಿಲ್ಲೆಯನ್ನು ಹಾಳು ಮಾಡಿದ್ದೀರಿ.

ಅಧ್ಯಕ್ಷರು: ಆಯಿತು ಬಿಡಿ. ಸಾಕು ಕುಳಿತುಕೊಳ್ಳಿ, ಮಾನ್ಯ ಕುಮಾರಸ್ವಾಮಿಯವರೆ, ಮಾನ್ಯ ಮಹದೇವಪ್ಪನವರೆ ನಿಮಗೆ ಪತ್ರ ಬಂತಾ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಿಮಗಿಂತ ನನಗೆ ಮೊದಲು ಚೆನ್ನಾಗಿ ಗೊತ್ತಿದೆ. ನೀವು ಈಗ ಬಂದವರು. ನಾನು ಕೊಡಗಿನಲ್ಲಿ ಮೊದಲಿನಿಂದ ಇದ್ದವನು ನನಗೆ ಗೊತ್ತಿದೆ.

ಶ್ರೀ ಕೆ.ಜಿ. ಬೋಪಯ್ಯ: ನಿಮಗೆ ಏನು ಗೊತ್ತಿದೆ?

ಅಧ್ಯಕ್ಷರು: ಮಾನ್ಯ ಬೋಪಯ್ಯನವರೆ, ಏನ್ರಿ ಇದು. No, ಅವರು ಉತ್ತರ ಹೇಳಿ ಎಂದೆ. ಅದಕ್ಕೇ ಅವರು ಉತ್ತರ ಕೊಟ್ಟಿದ್ದಾರೆ. ನೀವು ಮಾತನಾಡುವಾಗ ಮಾತನಾಡಿದ್ದೀರಿ. ಏತಕ್ಕಾಗಿ ಹೀಗೆ ಮಾಡುತ್ತೀರಿ?

ಶ್ರೀ ಪಿ. ರಾಜೀವ್: ಮಾನ್ಯ ಅಧ್ಯಕ್ಷರೆ, ತಮ್ಮ ನಮ್ಮ ಪ್ರಶ್ನೆ ಇಷ್ಟೇ, ಸಮಸ್ಯೆ ಇದೆ ಕಳ್ಳರು ಆರೋಪಿಗಳು ಯಾರು? ಪರಿಹಾರ ಏನು ಎಂದು ತಾವು ಕೇಳುತ್ತಿದ್ದೀರಿ. ಮಾನ್ಯ ಸಚಿವರೆ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ನೀವು ಮಾತನಾಡಿ ಮುಗಿಯಿತೇ? ಮಾನ್ಯ ಸಚಿವರೆ ಉತ್ತರ ಹೇಳಿ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): ಮಾನ್ಯ ಕುಮಾರಸ್ವಾಮಿಯವರು ಪ್ರಸ್ತಾಪ ಮಾಡಿರುವ ಬಗ್ಗೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಏನೂ ಮಾಡನಾಡಲೇ ಇಲ್ಲ.

ಅಧ್ಯಕ್ಷರು: Exhaustive ಆಗಿ ಆಗಿದೆಯಲ್ಲಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಇನ್ನು ಎನನ್ನೂ ಹೇಳಲೇ ಇಲ್ಲ.

ಅಧ್ಯಕ್ಷರು: ಇದಕ್ಕೆ ಇಷ್ಟಿಷ್ಟು ಸಮಯವನ್ನು ತೆಗೆದುಕೊಂಡರೆ ಹೇಗೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನೀವು document ಕೇಳಿದ್ದೀರಿ ಅದನ್ನು ಕೊಟ್ಟೆ ತಾವು ಅಲ್ಲಿ ಕೊಟ್ಟಿದ್ದೀರಿ. ಇಲ್ಲಿ ಪ್ರಶ್ನೆ ಇರುವುದು ನನಗೆ ಯಾರ ಮೇಲೆಯೂ ಆಪಾದನೆ ಮಾಡಬೇಕೆಂದು ಇಲ್ಲ. ಇವತ್ತು ಇಡೀ ರಾಜ್ಯದಲ್ಲಿನ ಘಟನೆ ವಿಚಾರ.

ಅಧ್ಯಕ್ಷರು: ನಾನು ಒಂದು ಮಾತನ್ನು ಹೇಳುತ್ತೇನೆ. ಆಗ ಸ್ವಲ್ಪ ಹೇಳಿ ಅದನ್ನು ಬಿಟ್ಟಿರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಇನ್ನು ಮಾತನಾಡಲೇ ಇಲ್ಲ. ಅದು ಯಾವುದೋ subject ಬಂತು. ಅಧ್ಯಕ್ಷರು ಹೆಸರು ಹೇಳಿ ಹೇಳಿ ಅಂದರೂ ಆಗ ಅದು ಅಲ್ಲಿಗೆ ನಿಂತಿದೆ. ನೀವು ಹೆಸರು ಹೇಳಿ ಎಂದು ಹೇಳಿಬಿಟ್ಟಿರಿ.

ಅಧ್ಯಕ್ಷರು: ಯಾರು ಅಂತಹವರು ಇದ್ದಾರೆ ಅವರ ಹೆಸರು ಹೇಳಿ ಎಂದು ಹೇಳಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದು ಅಲ್ಲಿಗೇ ನಿಂತುಹೋಯಿತು. ಈಗ ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಾನು photoವನ್ನು ಕಳುಹಿಸಿಕೊಟ್ಟಿದ್ದೇನೆ. ಅದನ್ನು ನೋಡಿದರೆ ನಮಗೆ ಹೊಟ್ಟೆ ಉರಿದುಹೋಗುತ್ತದೆ ಸಾರ್. ಅಲ್ಲಿ ತೋಟಗಳು ಎಲ್ಲವೂ ಹಾಳಾಗಿ ಹೋಗಿದೆ. ಈ ಬಗ್ಗೆ ನಾನು ಅಧ್ಯಕ್ಷರಿಗೂ ಮೊನ್ನೆ ದಿನ ಸಹ ನೋಡಿ ನೀವು ಎಂದು ಹೇಳಿ ಕೊಟ್ಟಿದ್ದೇನೆ. ಈ ರೀತಿಯಾದರೆ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕು? ಇದು ಈಗ recent ಆಗಿ ನಡೆಯುತ್ತಿರುವುದು. ಇನ್ನೂ ಬೇರೆ ಬೇರೆ photoಗಳಿವೆ ಎಲ್ಲವನ್ನೂ ನಿಮಗೆ ಕೊಟ್ಟಿಲ್ಲ.

ಅಧ್ಯಕ್ಷರು: ತಾವು ಒಂದು ಕೆಲಸ ಮಾಡಿ. ನೀವು ಸೂಕ್ಷ್ಮವಾಗಿ ಎಲ್ಲವನ್ನೂ ಹೇಳಿದ್ದೀರಲ್ಲಾ. ಮಾನ್ಯ ಸಚಿವರಾದ ಶ್ರೀ ಮಹದೇವಪ್ಪನವರು ಉತ್ತರವನ್ನು ಕೊಡಲಿ. ಅವರು ಉತ್ತರ ಕೊಟ್ಟಿರುವುದರಲ್ಲಿ ಲೋಪ ಇದ್ದರೆ ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಯಾವ ವಿಷಯವನ್ನು ಸಹ ಇನ್ನೂ ಪ್ರಸ್ತಾಪವನ್ನೇ ಮಾಡಿಲ್ಲ.

ಅಧ್ಯಕ್ಷರು: ಈ ರೀತಿಯಾಗಿ ಅಕ್ರಮವಾಗಿ ಮರಳು ಹೋಗುತ್ತಿದೆ ಎಂದು ಇಲ್ಲಿ ಹೇಳಿರುವುದು ಸಾಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಕಳೆದ ವಿಧಾನಸಭೆಯ ಕಲಾಪದಲ್ಲಿಯೂ ಮರಳಿನ ಬಗ್ಗೆ ಚರ್ಚೆಯಾಯಿತು.

ಅಧ್ಯಕ್ಷರು: ಅದಕೋಸ್ಕರವಾಗಿಯೇ ಈಗ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ): ಇಲ್ಲಿ ಈ ಬಗ್ಗೆ solution ಸಿಗಲಿಲ್ಲ. ಒಂದು ಸಣ್ಣ ಮನೆಯನ್ನು ಕಟ್ಟುವ ನಾಗರೀಕ ಯಾವನು ಇದ್ದಾನೆ. ಇವತ್ತು ಅವನ ಮನೆ ಕಟ್ಟುವುದಕ್ಕೆ ಮರಳು ದೊರಕದೆ ಇರುವಂತಹ ಸ್ಥಿತಿಯಲ್ಲಿ Supreme Courtನ ಆದೇಶ ಏನಿದೆ ಎಂದು ಈಗ ನಮ್ಮ ಕಾನೂನು ಸಚಿವರು ಹೇಳಿದರು. ಇದು ಯಾವ Supreme Courtನ ಆದೇಶ? ಅವರನ್ನು ಕಟ್ಟಿಕೊಂಡು ನೀವು ಅಧಿಕಾರವನ್ನು ನಡೆಸುತ್ತೀರಾ? Supreme Courtನಲ್ಲಿರುವವರನ್ನು ಇಲ್ಲಿಗೆ ಕರೆದುಕೊಂಡು ಬಂದು ಇಲ್ಲಿ ಕೂರಿಸಿಬಿಡಿ. ನಾವು ಏತಕ್ಕಾಗಿ ಇಲ್ಲಿರಬೇಕು? ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವಂತಹ ರೀತಿಯಲ್ಲಿ ಇಂತಹ ಒಂದು ಕಾನೂನುಗಳನ್ನು ತರುವುದಾದರೆ ನೀವು ಪ್ರತಿನಿತ್ಯ ಒತ್ತುವರಿಯದು, ಎಲ್ಲವನ್ನೂ Revenue Ministerಗೆ Forest Ministerಗೆ ಹೇಳುತ್ತೀರಿ. ಅವರನ್ನು ಕಟ್ಟಿಕೊಂಡು ಅವರು ಕೊಟ್ಟಂತಹ ಆದೇಶವನ್ನು ಇಟ್ಟುಕೊಂಡು ಅವರ direction follow ಮಾಡಿಕೊಂಡು ಇವತ್ತು ರೈತರನ್ನು ಒಕ್ಕಲೆಬ್ಬಿಸುವಂತಹ ಕೆಲಸ ನಡೆಯುತ್ತಿದೆ. ಅದಕ್ಕೆ ನಾವು ಏತಕ್ಕಾಗಿ ಜನರ ಹತ್ತಿರ ಹೋಗಿ ಓಟು ಹಾಕಿಸಿಕೊಂಡು ಬಂದು ಇಲ್ಲಿ ಏತಕ್ಕಾಗಿ ಕೆಲಸ ಮಾಡಬೇಕು? Constitution ಅನ್ನು ಬದಲಾವಣೆ ಮಾಡಿ ಆ ಅಧಿಕಾರವನ್ನು ಅವರಿಗೆ transfer ಮಾಡಿಬಿಡೋಣ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಮಾನ್ಯ ಕುಮಾರಸ್ವಾಮಿಯವರೆ ತಾವು ಒಂದು ನಿಮಿಷ ತಾಳಿ. ನಮ್ಮ ತಾಲ್ಲೂಕಿನಲ್ಲಿ ಹೊಸನಗರ ಮತ್ತು ತೀರ್ಥಹಳ್ಳಿಯಲ್ಲಿ 192 Land Revenue Act ಪ್ರಕಾರ notice ಕೊಟ್ಟಿದ್ದಾರೆ. ಅದರಲ್ಲಿ ಅವರು ಏನು ಬರೆಯುತ್ತಾರೆಂದರೆ 192 ಪ್ರಕಾರ ತಹಶೀಲ್ದಾರ್‌ರವರಿಗೆ power ಇದೆ ಅದರ ಪ್ರಕಾರ notice ಕೊಡಬೇಕೆಂದು

ಇದೆ ಅದಕ್ಕಾಗಿ ನೋಟೀಸ್ ಕೊಟ್ಟು ಕೆಲಸ ಮಾಡಿ ಬಿಟ್ಟರು. Supreme Courtನ ಹೇಳಿಕೆ ಪ್ರಕಾರ High Courtನವರ ಹೇಳಿಕೆ ಪ್ರಕಾರ ನೀವೆಲ್ಲಾ ಸರ್ಕಾರದ ಅಧಿಕಾರಿಗಳಾ ಅಥವಾ Supreme Courtನ ಅಧಿಕಾರಿಗಳಾ? ಕಾನೂನು ಇದೆ Section ಪ್ರಕಾರ ನಿಮ್ಮ ಮೇಲೆ action ತೆಗೆದುಕೊಳ್ಳುತ್ತೇವೆಂದು ಹೇಳುವುದನ್ನು ಬಿಟ್ಟು ಅವರುಗಳು ಇನ್ನೂ ಆಡಳಿತವನ್ನು ನಡೆಸುವುದನ್ನು ಕಲಿತಿರುವುದಿಲ್ಲ. ಅಧಿಕಾರಿಗಳು ಈ levelಗೆ ಇಳಿದಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಕೆರೆಗಳ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಪರವಾಗಿಲ್ಲ ನಾನು face ಮಾಡುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಹೋದ ವಾರ ಮಾನ್ಯ ಮುಖ್ಯ ಮಂತ್ರಿಗಳ direction ಮೇಲೂ ಇಲ್ಲಿ ನೀವು ಸದನದಲ್ಲಿ ಅವಕಾಶ ಕೊಟ್ಟಿದ್ದ ಒಂದು ಹಿನ್ನೆಲೆಯೊಳಗೆ ಇವತ್ತು ಆ ಕೆರೆಗಳ ಒತ್ತುವರಿ ವಿಷಯದಲ್ಲಿ ಹೇಳಬೇಕಾಗಿದೆ. ಈಗ ಒತ್ತುವರಿಯಾಗಿರುವ ಕೆರೆಗಳ ಜಾಗವನ್ನು ತೆರವುಗೊಳಿಸುವ ಕೆಲಸ ಪ್ರಾರಂಭವಾಯಿತು. ಅಲ್ಲಿ ಚಿಕ್ಕಕಲ್ಲಸಂದ್ರ ಕೆರೆ ಇದೆ ಅಧ್ಯಕ್ಷರೆ, ಇವತ್ತು ಅದು ಅಲ್ಲಿ ಇಲ್ಲ. ಸಂಪೂರ್ಣವಾಗಿ development ಮಾಡಿಬಿಟ್ಟಿದ್ದಾರೆ. ಮೊನ್ನೆ ಅಧಿಕಾರಿಗಳು ಅಲ್ಲಿಗೆ ಹೋದರು. ಅಲ್ಲಿ ಒಂದು ತಗಡಿನ ಶೀಟ್ ಹಾಕಿಕೊಂಡು ಸಣ್ಣ ಶೆಡ್‌ಗಳನ್ನು ಹಾಕಿಕೊಂಡಿದ್ದವರನ್ನು ಮಾತ್ರ ಅಲ್ಲಿಂದ ಖಾಲಿ ಮಾಡಿಸಿದರು. ದೊಡ್ಡ ಕಟ್ಟಡಗಳಲ್ಲಿದ್ದವರನ್ನು ಅಲ್ಲೇ ಬಿಟ್ಟು ದೊಡ್ಡವರಿಗೆ, ದೊಡ್ಡ ಬಿಲ್ಡಿಂಗ್‌ನಲ್ಲಿರುವವರಿಗೆ ಮೂರ್‍ನಾಲ್ಕು ದಿವಸಗಳ ಕಾಲ ಟೈಮ್ ಕೊಟ್ಟರು. ಆಗ ಅವರು ಹೈಕೋರ್ಟ್‌ಗೆ ಹೋದರು. ಹೈಕೋರ್ಟ್‌ನಲ್ಲಿ ಪುಣ್ಯಾತ್ಮರೊಬ್ಬರು ಜಡ್ಜ್ stay ಕೊಡಬೇಕಾದರೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಈ ಕೆರೆ ಒತ್ತುವರಿ ಆಗಿರುವ ಪ್ರದೇಶದಲ್ಲಿ ಯಾವುದೇ ಗುಡಿಸಲುಗಳು ಇಲ್ಲ. ಮೂರಂತಸ್ತಿನ ಕಟ್ಟಡಗಳಿವೆ, ಅದಕ್ಕೋಸ್ಕರವಾಗಿ ಇದಕ್ಕೆ stay ಕೊಡುತ್ತೇನೆಂದು ಅವರು ಹೇಳುತ್ತಾರೆ. ಅಲ್ಲಿಗೆ ಈ ರಾಜ್ಯದಲ್ಲಿ ಗುಡಿಸಲುಗಳಲ್ಲಿ ವಾಸಿಸುವವರನ್ನು ಒಕ್ಕಲೆಬ್ಬಿಸಬಹುದು. ಅಲ್ಲಿ ಅರ್ಧ ಎಕರೆ, ಒಂದು ಎಕರೆ ಜಮೀನಿನಲ್ಲಿರುವವರಿಗೆ ನೋಟಿಸ್ ಕೊಟ್ಟು

ಒಕ್ಕಲೆಬ್ಬಿಸಲಿಕ್ಕೆ ಮಾಡುತ್ತಿದ್ದಾರೆ. ಇಲ್ಲಿ ಸಾವಿರಾರು ಕೋಟಿ, ಲಕ್ಷಾಂತರ ಕೋಟಿ ರೂಪಾಯಿಗಳನ್ನು ಲೂಟಿ ಹೊಡೆದಿರುವವರನ್ನು ಏನೂ ಮಾಡದೇನೆ ಆರಾಮವಾಗಿ ಬಿಟ್ಟಿದ್ದಾರೆ.

ಅಧ್ಯಕ್ಷರು: ಈಗ ಕಾನೂನು ಸಚಿವರಾದ ಜಯಚಂದ್ರ ಇಲ್ಲೇ ಇದ್ದಾರೆ. ಹೈಕೋರ್ಟ್‌ನ ವ್ಯವಹಾರ ಹೇಳುತ್ತೇನೆ. ಒಂದು Land tribunal caseನಲ್ಲಿ occupancy right ಕೊಟ್ಟರು. ಅದನ್ನು ಒಬ್ಬ ಹೈಕೋರ್ಟ್‌ಗೆ ಹಾಕಿದ. Appeal ಹಾಕಲಿಕ್ಕೆ time ಇಲ್ಲ. ಅದೇನಿದ್ದರೂ Writ ಮಾಡಬೇಕು, question ಮಾಡಬೇಕು. ಆ Writ Petition ನಲ್ಲಿ ಅವರು ಮಾಡಿದ್ದು ಸರಿ ಎಂದು ಹೇಳಬೇಕು. ಇಲ್ಲವಾದರೆ revert back to the tribunal ಹೋಗಬೇಕು. ಇವರು ಅದನ್ನು ಇನಾಮ್ ಲ್ಯಾಂಡ್ ಎಂದು ಹೇಳಿ Deputy Commissionerಗೆ special judge ಎಂದು ಹಾಕುವುದೇ? it was against the order of the Land tribunal, Where should it go first? ಹೇಳಿ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): That is called judicial activism. ಅದೇ ಈಗ ಆಗುತ್ತಿರುವುದು.

SRI K. SHIVAMURTHY: Decision should be reviewed.

ಶ್ರೀ ವೈ.ಎಸ್.ವಿ.ದತ್ತಾ: ಇದನ್ನೇ ನಾವು ಬೆಳಿಗ್ಗೆ ಹೇಳಿದ್ದು.

ಅಧ್ಯಕ್ಷರು: ಈ ರೀತಿ ಏಕೆ ಆಗುತ್ತಿದೆ ನಾವು ಸರ್ಕಾರವನ್ನು ನಡೆಸುವವರು ಅವರು ಹೇಳಿದ್ದೇ ಸರಿ ಎಂದು ಒಂದು judgement ಕೊಟ್ಟಿದ್ದನ್ನು Advocate General immediate ಆಗಿ write to the Deputy Commissioner if I refer back for reconsideration for the purpose of the Land tribunal ಎಂದು ಹೇಳಬೇಕೋ ಬೇಡವೋ? What is the Government Pleader doing?

ಶ್ರೀ ವೈ.ಎಸ್.ವಿ.ದತ್ತಾ: ನಮ್ಮ ಶಾಸಕಾಂಗ ಸತ್ತುಹೋದಾಗ ನಿಷ್ಕ್ರಿಯವಾದಾಗ judicial activism ಆಗುತ್ತದೆ.

ಅಧ್ಯಕ್ಷರು: ಆಯಿತು, ಹೇಳಿ.

SRI K. SHIVAMURTHY: If there is error in the judgement, then rectification and review provision is there.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ಸರ್ಕಾರಕ್ಕೆ ಹೇಳುತ್ತೇನೆ, ಇಲ್ಲಿ ಕಾನೂನು ಸಚಿವರು, ಲೋಕೋಪಯೋಗಿ ಸಚಿವರು ಇದ್ದಾರೆ. ಅವರಿಗೆ 2011–12 ರಲ್ಲಿ ಕಾನೂನು ತಂದರು. ಈಗ Task force Committee ರಚನೆ ಮಾಡಿದ್ದರಲ್ಲಾ ಅವರಿಗೆ ಕೆಲವು ಗೈಡ್‌ಲೈನ್ಸ್ ಕೊಟ್ಟರು. ಸುಮಾರು 18 guidelines ಈ ಸದನದಲ್ಲೇ ಪಾಸ್ ಮಾಡಿದ್ದೇವೆ ಅಧ್ಯಕ್ಷರೆ. ಈ 18 ಗೈಡ್‌ಲೈನ್‌ನಲ್ಲಿರುವಂತೆ ಏನು ಸೂಚನೆಗಳನ್ನು ಕೊಟ್ಟಿದ್ದೇವೆ? ಅದರಲ್ಲಿ ಎಷ್ಟು follow ಮಾಡಿದ್ದೀರಿ ಎನ್ನುವುದನ್ನಾದರೂ ಸದನದ ಮುಂದೆ ಇಟ್ಟುಬಿಡಿ. ಇದರಲ್ಲಿ ತಾವು ಹೇಳಿದಂತೆ ಆ ವಿಷಯ ಈಗ ಚರ್ಚೆ ಮಾಡುವುದಿಲ್ಲ. ನಂತರ ಬೇಕಾದರೆ ಅದರ ಬಗ್ಗೆ ಹೇಳುತ್ತೇನೆ. ನೀವು at least ಎಲ್ಲಿ ದಾರಿತಪ್ಪಿದ್ದೀರಿ ಅದಕ್ಕೆ ಈಗ solution ಬೇಕು. ಅಧ್ಯಕ್ಷರೆ, ಇಲ್ಲಿ ಆದೇಶ ಮಾಡಿದರು. ಈ ಸದನದಲ್ಲಿಯೇ ಈ ಒಂದು ವಿಧೇಯಕವನ್ನು ಮಂಡನೆ ಮಾಡಿ ಪಾಸ್ ಮಾಡಿದ್ದೇವೆ. ಅದರಲ್ಲಿ ಕೆಲವು important ವಿಷಯಗಳನ್ನು ಹೇಳಿಬಿಡುತ್ತೇನೆ. "The district sand monitoring committee shall with the assistance of its member constituent departments identify the sand deposits in the district, divide them into blocks, with an extent not exceeding 12 acres of each, assess the quantity of quarryable, recoverable sand in each block and shall notify them for the information of general public after obtaining all necessary clearances from the respective departments." ಇದರ ಬಗ್ಗೆ ಈ ರಾಜ್ಯದಲ್ಲಿ ಎಲ್ಲಾದರೂ ಆ ಬ್ಲಾಕ್‌ಗಳನ್ನು ಗುರುತಿಸಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಬೋರ್ಡ್

ಏನಾದರೂ ಹಾಕಿದ್ದಾರೆಯೇ? ಈ ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಹಾಕಿದ್ದಾರೆಯೇ? ಸರ್ಕಾರದಿಂದ ಮಾಡಿದ್ದೀರಾ? "On publication of notification in the official gazette, the Public Works Department in the district shall take over the administration and deal with the extraction, transportation and storage and disposal through mineral dispatch permit." ಇದು serious subject ಇದೆ, ಸ್ವಲ್ಪ ಸದಸ್ಯರು ಗದ್ದಲ ಮಾಡದೇ ಕೇಳಿಕೊಳ್ಳಬೇಕು. ಈಗ "Recovery of royalty and other taxes fixed by the district sand monitoring committee from time to time and apportion the proceeds in accordance with sub-rule 5. The Public Works Department shall establish a camp office with computer facilities to the satisfaction of the district sand monitoing committee and the Department of Mines and Geology for the administration of sand extraction, transportation, storage and disposal." ಈ ಕಾನೂನುಗಳನ್ನು ಸರ್ಕಾರದಲ್ಲಿ ಏನು ತರುತ್ತೀರಿ ಅದನ್ನು ನಮ್ಮ ಅಧಿಕಾರಿಗಳೇ ಕೊಡುತ್ತಾರೆ. ಎಲ್ಲಾದರೂ ಈ system ಅಳವಡಿಸಿದ್ದೀರಾ?

ಅಧ್ಯಕ್ಷರು: ಅದನ್ನೇ ಕೇಳಿ, ನಿಮಗೆ ಬಂದಿರುವ information ಪ್ರಕಾರ ಇದನ್ನು implement ಮಾಡಿರುವರೋ ಇಲ್ಲವೋ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದನ್ನು ಕೇಳಿಬಿಡುತ್ತೇನೆ. ಎಲ್ಲಿಯೂ ಈ ರೀತಿ ಮಾಡಿಲ್ಲ ಅಧ್ಯಕ್ಷರೆ, ಅದಕ್ಕೆ ಈ ರೀತಿ ಮಾಫಿಯಾಗಳು, ಈ ರೀತಿ ಕೆಲಸಗಳು ನಡೆಯುತ್ತಿರುವುದು.

ಅಧ್ಯಕ್ಷರು: ಅದಕ್ಕೆ failure of the Government ಎಂದು ನೀವು ಹೇಳಿ.

SRI H.D. KUMARASWAMY: Yes Sir. "The Public Works Department shall establish check posts wherever necessary to regulate transportation of sand" ಎಷ್ಟು ಚೆಕ್‌ಪೋಸ್ಟ್‌ಗಳನ್ನು ಎಲ್ಲಿ ತಡೆದಿದ್ದೀರಿ?

ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಆ ಫಿಲ್ಟರ್ ಮರಳು, ತೋಟಗಳೆಲ್ಲಾ ನಿರ್ನಾಮವಾಗುತ್ತಿದೆ. ಹೀಗಾದರೆ ಬೋರ್‌ವೆಲ್‌ಗಳಲ್ಲಿ ಕುಡಿಯುವ ನೀರು ಎಲ್ಲಿ ಸಿಗುತ್ತದೆ? ಇವತ್ತು ಕೇವಲ ತೋಟಗಳು ಹಾಳಾಗುವುದಿಲ್ಲ. ಇಂಥ activities ನಡೆಯುತ್ತಿರುವುದರಿಂದ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿರುವುದು.

ಅಧ್ಯಕ್ಷರು: ನಿಮ್ಮ ಗಮನಕ್ಕೆ ಒಂದು ಜಿಲ್ಲೆಯಾಗಬಹುದು, ಒಂದು ತಾಲ್ಲೂಕಾಗಬಹುದು, ಎರಡು ಜಿಲ್ಲೆಗಳಾಗಬಹುದು. ಎಲ್ಲಿ ಚೆಕ್‌ಪೋಸ್ಟ್ ಹಾಕುವಂಥ ಅವಶ್ಯಕತೆ ಇದೆ, ಅಂಥ ಕಡೆ ನೀವು ಏಕೆ ಹಾಕಿಲ್ಲ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈಗ men ಇಲ್ಲವೆಂದು ಇದ್ದ ಚೆಕ್‌ಪೋಸ್ಟ್‌ಗಳನ್ನೇ ತೆಗೆದುಹಾಕಿದ್ದಾರೆ.

ಅಧ್ಯಕ್ಷರು: ಇಲ್ಲದಿದ್ದರೆ ಅವರು ಎಲ್ಲಾ ಹಾಕಿದ್ದೇವೆಂದು ಹೇಳಿಬಿಡುತ್ತಾರೆ.

SRI H.D. KUMARASWAMY: "Suitable arrangements be made for patrolling to monitor illegal transportation." ಇದೆಲ್ಲಾ ಇಲ್ಲಿ ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಈ ಬಿಲ್‌ಗಳನ್ನು ಪಾಸ್ ಮಾಡುವುದರಲ್ಲಿ ಅರ್ಥವಿಲ್ಲ ಎನ್ನಿಸುತ್ತದೆ. ಇಲ್ಲೇನು ಹೇಳುತ್ತಾರೆ, "Sand mining in Patta land is totally prohibited. Manufacturing filter sand in any category land including Patta land is prohibited." ರಾಜಾರೋಷವಾಗಿ ನಡೆಯುತ್ತಿರುವುದನ್ನು ನಾನು ತೋರಿಸಿದೆ ಅಧ್ಯಕ್ಷರೆ. ಏನು action ತೆಗೆದುಕೊಂಡಿದ್ದೀರಿ? ನಿಮ್ಮ ಜಿಲ್ಲಾಧಿಕಾರಿಗಳು ಇರಲಿ, ನಿಮ್ಮ ಎಸ್.ಪಿ. ಇರಲಿ, ಪೊಲೀಸ್ ಅಧಿಕಾರಿಗಳು ಇರಲಿ ರಾಜಾರೋಷವಾಗಿ ಆಗುತ್ತಿದೆ. ನಾನು ಫೋಟೋ ಸಮೇತ ಕೊಟ್ಟಿದ್ದೇನೆ. ಒಂದೊಂದು ಊರಿನಲ್ಲಿ 15-20 JCB vehicleಗಳನ್ನು ಇಟ್ಟುಕೊಂಡಿದ್ದಾರೆ. ಇವತ್ತು ಇಲ್ಲಿ ಈ ವಿಷಯಗಳನ್ನು ಏನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ನಮ್ಮ ಊರಿನಲ್ಲಿ ಓಟು ಹಾಕಿಸಿಕೊಳ್ಳುವುದು ಕಷ್ಟವಾಗಿದೆ. ಅವರೆಲ್ಲಾ ನನ್ನನ್ನು ವಿರೋಧ ಮಾಡುತ್ತಾರೆ.

ನನ್ನ ಪಕ್ಷದಲ್ಲಿ ಕೆಲವರು ಇದ್ದರು. ಅವರಿಗೆಲ್ಲಾ ನಾನು ಒಂದೇ ಮಾತು ಹೇಳಿದೆ, ಏನೆಂದರೆ ನಾನು ಯಾವುದೇ ಕಾರಣಕ್ಕೂ ಇದಕ್ಕೆ ಬೆಂಬಲ ಕೊಡುವುದಿಲ್ಲ. ನೀವು ಗೌರವಯುತವಾಗಿ ನಿಮ್ಮ ಲಾರಿಗಳನ್ನು, JCBಗಳನ್ನು ಮಾರಾಟ ಮಾಡಿ ಬೇರೆ ಉದ್ಯೋಗ ಮಾಡಿ ಎಂದು strict ಆಗಿ ಹೇಳಿದ್ದೇನೆ. ಅದಕ್ಕೆ ಅವಕಾಶ ಕೊಟ್ಟಿಲ್ಲ. ಇವತ್ತು ರಾಜಾರೋಷವಾಗಿ ನಡೆಯುವಂಥ ಪರಿಸ್ಥಿತಿ ಇದೆ. ಈ ಫಿಲ್ಟರ್ ಮರಳಿನ ದಂಧೆ ನಡೆಯುತ್ತಿದೆ. ಯಾರು ಇದರ ಬಗ್ಗೆ action ತೆಗೆದುಕೊಳ್ಳುವವರು? ಇಲ್ಲಿ ಯಾರ ಮುಂದೆ ಹೇಳಿಕೊಳ್ಳಬೇಕು? ಸರ್ಕಾರ ಎಷ್ಟರ ಮಟ್ಟಿಗೆ ನಿಮ್ಮ ಅಧಿಕಾರಿಗಳಿಗೆ freedom ಕೊಟ್ಟಿದ್ದೀರಿ? ಅವರು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ?

ಅಧ್ಯಕ್ಷರು: ಯಾರೂ freedom ಕೊಟ್ಟಿಲ್ಲ. ಎಂಥದ್ದೂ ಇಲ್ಲ. ಕಾನೂನು ಸಚಿವರು ಇಲ್ಲೇ ಇದ್ದಾರೆ. ನಿಮಗೆ ಸ್ವಲ್ಪ ಅನುಭವವಿದೆ. ನಮ್ಮ ಸ್ಥಳೀಯ ಅಧಿಕಾರಿಗಳಿದ್ದಾರಲ್ಲಾ ಅವರಿಗೆ ಒಂದು ಕಾನೂನಿನ ಬಗ್ಗೆ ಪ್ರಜ್ಞೆ, concern ಇಲ್ಲ. ನಾನು ಅನೇಕ ಕಡೆ ಹೇಳಿದೆ. ರಸ್ತೆ ಮೇಲೆ ಹೋಗುತ್ತಿರುತ್ತಾರೆ. ಹಳ್ಳಿಗಳಲ್ಲಿ ಯಾರೋ ಒಬ್ಬರು ಮರ ಕಡಿದಿರುತ್ತಾರೆ immediate ಆಗಿ notice ಮಾಡಿ ಅವರ ಮೇಲೆ action ತೆಗೆದುಕೊಳ್ಳುವುದಿಲ್ಲ. ಯಾರೋ ಹೇಳಬೇಕು, ಯಾರೋ ಇವರಿಗೆ ಬರೆಯಬೇಕು, ಆಗ ಇವರು ಹೋಗುವುದು. ಇದು ಎಲ್ಲಾ ಕಡೆ ನಡೆಯುತ್ತಿದೆ. ಅದಕ್ಕಾಗಿಯೇ ನಾನು ವಿಶೇಷವಾಗಿ ಹೇಳುವುದೇನೆಂದರೆ ಇದರ ಬಗ್ಗೆ ಸ್ವಲ್ಪ alert ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ pass ಮಾಡಿರತಕ್ಕಂಥದ್ದರಲ್ಲಿ

"No transport of sand under these rules shall be made across the border to other states" ಎಂದು ಇದೆ. ಇಲ್ಲಿ ನಾನು ಬೇರೆ ಕೆಲವು ವಿಷಯಗಳನ್ನು ಚರ್ಚೆ ಮಾಡುವುದಿಲ್ಲ. ನನಗೆ ಬೇಕಾಗಿರುವುದು ಇಲ್ಲಿ ಕೇರಳ ರಾಜ್ಯಕ್ಕೆ ನಿರಂತರವಾಗಿ ಮರಳು ಹೋಗುತ್ತಿದೆ. ಕರ್ನಾಟಕದ ನಮ್ಮ ಗುಂಡ್ಲುಪೇಟೆಗೆ ಸಂಬಂಧಿಸಿದಂತೆ ಸುಲ್ತಾನ್‌ಪೇಟೆ ಚೆಕ್‌ಪೋಸ್ಟ್ ಬರುತ್ತದೆ.

ಅಧ್ಯಕ್ಷರು: ಮಂತ್ರಿಗಳಿಗೆ ಕೊಡ್ರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಈ ವಿಷಯದಲ್ಲಿ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿ ಕೇರಳ ಚೆಕ್‌ಪೋಸ್ಟ್‌ನಲ್ಲಿ ಈ vehicle numbers ಏನಿವೆ, ನಮ್ಮ ಚೆಕ್‌ಪೋಸ್ಟ್‌ನಲ್ಲಿ ಚೆಕ್ ಮಾಡಿದರೆ ಈ vehicle numbers ಒಂದೂ ಇಲ್ಲ. ನಮ್ಮ ಸರ್ಕಾರದ ಖಜಾನೆಗೆ ನಷ್ಟ.

ಅಧ್ಯಕ್ಷರು: ನಮ್ಮ state vehicles ಇವೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮ್ಮ ರಾಜ್ಯದ ಚೆಕ್‌ಪೋಸ್ಟ್‌ಗಳಲ್ಲಿ ಈ vehicles entry ಒಂದೂ ಇಲ್ಲ.

ಅಧ್ಯಕ್ಷರು: Entry ಎಂದರೆ, ನಮ್ಮ ರಾಜ್ಯದಿಂದ ಹೋಗಿದೆ, ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮ್ಮ ರಾಜ್ಯದ ಚೆಕ್‌ಪೋಸ್ಟ್‌ಅನ್ನು ಬಿಟ್ಟು ಮುಂದೆ ಹೋಗುವ ಚೆಕ್ ಪೋಸ್ಟ್ ಇರುತ್ತದೆಯೆಲ್ಲಾ, ನಮ್ಮ ರಸ್ತೆಯಲ್ಲಿ ಕೇರಳ ಬಾರ್ಡರ್‌ಗೆ enter ಆಗುತ್ತಾರಲ್ಲಾ

ಶ್ರೀ ಸಿ.ಟಿ. ರವಿ: ರೋಡ್‌ನಲ್ಲಿ ಹೋಗಬೇಕಲ್ಲಾ, ಈ ಚೆಕ್ ಪೋಸ್ಟ್ ದಾಟಿಯೇ ಹೋಗಬೇಕಲ್ಲವೇ?

ಅಧ್ಯಕ್ಷರು: ಗೊತ್ತಾಯಿತು. Enquiry ಆಗಲಿ ನೋಡೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಮ್ಮ ಚೆಕ್ ಪೋಸ್ಟ್‌ನಿಂದ ಹೋಗುವಂತಹದ್ದು ಏನಿದೆ, next ಕೇರಳ ಬಾರ್ಡರ್ ಚೆಕ್‌ಪೋಸ್ಟ್ ಬರುತ್ತದೆ. ಅಲ್ಲಿ ಇದ್ದದ್ದು ಅದು. ಲಾರಿಗಳು ಆಕಾಶದ ಮೇಲೆ ಹೋಗುವುದಕ್ಕಾಗುವುದಿಲ್ಲವಲ್ಲಾ? ನಮ್ಮ ರಸ್ತೆಯಲ್ಲಿಯೇ ಹೋಗಿರಬೇಕು ಅಲ್ಲವೇ?

ಅಧ್ಯಕ್ಷರು: ನೋಡಿ COD ಗೆ ಹಾಕಿ immediate ಆಗಿ ಮಾಡ್ರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ inter-state activities ಇರುವುದರಿಂದ ಇದಕ್ಕೆ ಬಹುಶಃ CBI ಗೆ ಕೊಡಬೇಕು. ಇದಕ್ಕೆ ನಿಮ್ಮ COD ಯಿಂದ enquiry ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ದಯವಿಟ್ಟು

ಇದನ್ನು ಬಹಳ serious ಆಗಿ ತೆಗೆದುಕೊಳ್ಳಬೇಕು. ಇದು ಬಹಳ serious subject ಇದೆ. ಇಲ್ಲಿ ಕೇರಳದಲ್ಲಿ ಯಾವುದೇ ಒಂದು vehicle ಗೆ tax ಕಟ್ಟಿದ್ದಾರೆ, ಅದರ material ಏನು ಎಂದು ಅದರಲ್ಲಿ river sand ಅನ್ನು ಹಾಕುತ್ತಾರೆ. ಅದರ value fix ಮಾಡುತ್ತಾರೆ. ಅದಕ್ಕೆ 3,600 ರೂಪಾಯಿಗಳು, 4,000 ರೂಪಾಯಿಗಳ tax ಅನ್ನು ಕೇರಳ ಬಾರ್ಡರ್‌ನಲ್ಲಿ ಕಟ್ಟುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, 1994ರಲ್ಲಿ ಗ್ರಾನೈಟ್ ಹೀಗೆಯೇ ಮಂಗಳೂರಿಗೆ ಹೋಗುತ್ತದೆ ಎಂದು ಆಗ ಏನು ಮಾಡಿದೆವು ಎಂದರೆ ಎರಡೂ ಸದನಗಳ ಒಂದು Joint House Committee ಮಾಡಿದೆವು. Last ಗೆ ನಮ್ಮ members ಎಷ್ಟು ಕೆಲಸ ಮಾಡಿದರು ಎಂದರೆ officerಗಳನ್ನು ನಂಬದೇ ತಾವೇ vehicles ತೆಗೆದುಕೊಂಡು ಹೋಗುತ್ತಿರುವ ಲಾರಿಗಳ ಹಿಂದೆ-ಮುಂದೆ ಹೋಗಿ ನಮ್ಮ members carಗಳನ್ನು ನಿಲ್ಲಿಸಿ they gave the report. ನಾನು ಹೇಳುವುದು ಏನೆಂದರೆ, CBI ಅವರು ಇವರು ಅಂತಹ ದೊಡ್ಡ ನಂಬಿಕಸ್ಥರೇನೂ ಅಲ್ಲ. ಅವರು ಯಾರಾದರೂ ಅನುಕೂಲ ಇದ್ದರೆ ಹಾಗೆ ಮಾಡುತ್ತಾರೆ. House Committee ಮಾಡಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ತಾವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಇಲ್ಲಿ ಪ್ರಶ್ನೆ ಏನಾಗಿದೆ ಎಂದರೆ, ಇವತ್ತು House Committee ಬಗ್ಗೆ ಇಲ್ಲಿಯೇ ಸದನದಲ್ಲಿ ನಾನು ಚರ್ಚೆ ಮಾಡಿದೆ. ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟಂತಹ ವಿಷಯವನ್ನು ಅಂದರೆ ಪವರ್ ಖರೀದಿ ವಿಷಯದಲ್ಲಿ ಐದು ಗಂಟೆಗಳ ಕಾಲ ಚರ್ಚೆ ಮಾಡಿದೆ. ಈಗ ನೀವು ಅಲ್ಲಿ ಇಲ್ಲ. ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅಲ್ಲಿ ಏನು ಕೆಲಸ ಮಾಡುತ್ತಿದ್ದೇವೆ? ಈಗಾಗಲೇ ಆ ಸದನ ಸಮಿತಿಯಲ್ಲಿ ನಾಲ್ಕು ಸಭೆಗಳು ಆಯಿತು. ಇಲ್ಲಿ ಸದಸ್ಯರುಗಳು ಕುಳಿತಿದ್ದಾರೆ. ಇಲ್ಲಿಯವರೆಗೆ ನಮಗೆ ನಾವು ಕೇಳಿದ ಯಾವ documents ಅನ್ನು ಕೊಟ್ಟಿದ್ದಾರೆ? ಇವತ್ತು ಅಂತಹ ಅಧ್ಯಕ್ಷರನ್ನು ಸಮಿತಿಗೆ ಮಾಡಿಬಿಟ್ಟಿದ್ದೀರಿ. ಯಾವ ನ್ಯಾಯ ತರಲಿ? ಮಾನ್ಯ ಅಧ್ಯಕ್ಷರೆ, ಇವತ್ತು ಸತ್ಯ ಎಲ್ಲಿಂದ ಹೊರಗಡೆಗೆ ಬರಬೇಕು?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಕುಮಾರಸ್ವಾಮಿಗಳೇ? ಬೆಳಗ್ಗೆಯಿಂದ ಕೋರ್ಟ್ ವಿಚಾರವನ್ನು ತಾವು ಎರಡು ಸಲ ಹೇಳಿದ್ದೀರಿ. It is a very serious observation. ಕೋರ್ಟ್‌ಗಳು ಏನು ಮಾಡುತ್ತವೆ? ನಾವು ಏನು ಮಾಡಿರುತ್ತೇವೆ, ಅದು if it is not in conformity with the provisions of this Constitution, strike down ಮಾಡುತ್ತಾರೆ. ನಾವು ಏನನ್ನು ಮಾಡಬೇಕೆಂದು ಇರುತ್ತೇವೆ ನಮಗೆ ಅದರ ಬಗ್ಗೆ ಬದ್ಧತೆ ಇದ್ದರೆ ಸಂವಿಧಾನದ ಚೌಕಟ್ಟಿನೊಳಗೆ ನಾವು ಅದನ್ನು ಇಡಬೇಕಾಗುತ್ತದೆ. Some times, Supreme Court lays down the law. That is true. ನಮ್ಮಲ್ಲಿ ಅನೇಕ ಸಲ ಸುಪ್ರೀಂಕೋರ್ಟ್, ಹೈಕೋರ್ಟ್ ಎನ್ನುತ್ತಾರೆ. Isssue ಏನು judgment ಏನಾಗಿರುತ್ತದೆ ಎಂಬುದು ನಮಗೆ ಗೊತ್ತೇ ಇರುವುದಿಲ್ಲ. Citations ಮಾಡಿಕೊಂಡು ಹೊರಟು ಹೋಗುತ್ತಾರೆ. ತಮಗೆ power purchase ವಿಚಾರದಲ್ಲಿ ಆಗಿರುವ Committee ಯಲ್ಲಿ ನಿಮ್ಮ experience ಏನೇ ಇರಬಹುದು, ನಿಮಗೆ ಏನು request ಮಾಡುತ್ತೇನೆ ನಾನು ಎಂದರೆ ಮಾನ್ಯ ಅಧ್ಯಕ್ಷರು ಇದ್ದಾರೆ. ದಯಮಾಡಿ ಒಂದೇ ನಿಮಿಷವಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, Power Committeeಯಲ್ಲಿ ತಮಗೆ ಹೆಸರು ಇದೆ. ಅದು ಏತಕ್ಕೆ ನೀವು ಸಮಿತಿಗೆ ಬರುತ್ತಿಲ್ಲವೆಂಬುದು ನನಗೆ ಗೊತ್ತಿಲ್ಲ. ಏತಕ್ಕೆ ಬರುತ್ತಿಲ್ಲವೆಂದು ನನಗೆ ಗೊತ್ತಾಗುತ್ತಿಲ್ಲ. ಅವರ ಹೆಸರೂ ಇದೆ. ರಮೇಶ್ ಕುಮಾರ್‌ರವರು ಏತಕ್ಕೋ ಬರುವುದು ಬಿಟ್ಟರು.

ಶ್ರೀ ಕೆ.ಆರ್. ರಮೇಶ್ ಕುಮಾರ್: ನನಗೆ power ಎಂದರೆ ಸ್ವಲ್ಪ ಅಲರ್ಜಿ. ಹಾಗಾಗಿ ನಾನು ಬರುತ್ತಿಲ್ಲ. ನಾನು ತಮಗೆ ಏನು ಹೇಳುತ್ತೇನೆ ಎಂದರೆ, CBI ಆಗಲಿ, COD ಆಗಲಿ, they are ultimately investigating agencies. ಅವರಿಗೆ ಅವರದ್ದೇ ಆದಂತಹ limitations ಇರುತ್ತದೆ. ಈ ಸದನ ಮತ್ತು ಮೇಲ್ಮನೆ ಎರಡನ್ನೂ ಸೇರಿಸಿ ಒಂದು joint committee ಮಾಡಿ. ಈ ಸದನದ ಸಮಿತಿಯ ಸದಸ್ಯರುಗಳಾದರೆ ಸತ್ಯಶೋಧನೆ ಮಾಡುವುದಕ್ಕೆ

ಸುಲಭವಾಗುತ್ತದೆ. ನನಗೆ ಏನೂ CBI ಗೆ aversion ಇಲ್ಲ. ಹಿಂದೆ ಅದನ್ನು ನಾವು ಮಾಡಿದ್ದೇವೆ. Housing Board ಗೆ ಸಂಬಂಧಿಸಿದಂತೆ ಒಂದು scam ಬಂದಾಗ ಸಹ ಮಾಡಿದ್ದೇವೆ, ಆ ಸಮಯದಲ್ಲಿ ನಾನೇ Speaker ಆಗಿದ್ದೆ. ಮಾನ್ಯ ಅಧ್ಯಕ್ಷರು ನಿಮ್ಮ ಬೆಂಬಲಕ್ಕೆ ಇದ್ದಾರೆ. He will put a good person as the Chairman. ಏಕೆಂದರೆ, ಬೇಗ results ಬರಬೇಕಲ್ಲವೇ? CBI ಎಂದು ಮಾಡಿ ಅವರು 2-3 ವರ್ಷಗಳ ಸಮಯ ತೆಗೆದುಕೊಂಡರೆ ಆಮೇಲೆ ಯಾರ್ಯಾರು ಏನೇನು ಆಗಿರುತ್ತಾರೋ ಗೊತ್ತಾಗುವುದಿಲ್ಲ. So, please see whether you can amend your request as per a House Committee.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, power ವಿಷಯ ಎಂದು ಮಾನ್ಯ ಕುಮಾರಸ್ವಾಮಿಯವರು ಹೇಳಿದರು. ನಾನೇ ಅದನ್ನು ಬರೆದುಕೊಟ್ಟವನು. ಪವರ್‌ಗೆ ಸಂಬಂಧಿಸಿದಂತೆ ನನ್ನ ಕಾಲದ ವಿಷಯವನ್ನೂ ಸೇರಿಸಿ ನೀವು ದಯಮಾಡಿ ನ್ಯಾಯ ಹೇಳುತ್ತೀರಿ ಎಂದು ನಿಮ್ಮ ಬಗ್ಗೆ ನಮಗೆ ಸ್ವಲ್ಪ ನಂಬಿಕೆಯಿದೆ. ಆದರೆ, ನಾನು ಕಳ್ಳತನ ಮಾಡಿದ್ದೇನೆ ಎಂದು ನನ್ನ ಮೇಲೆ ಇದಾಯಿತು. ಆಗ ನಾನೇ ನಿಮಗೆ ಬರೆದುಕೊಟ್ಟೆ. ಸ್ವಾಮಿ ಇದನ್ನು ಸದನ ಸಮಿತಿ ಮಾಡಿ ಎಂದು ನಾನು ಬರೆದುಕೊಟ್ಟೆ. ನೀವು ಅವರದ್ದೂ ಸೇರಿಸಿ ಮಾಡಿದ್ದೀರಿ, ಇವತ್ತಿನವರೆಗೆ ಎಂದು ಸದನದಲ್ಲಿ ತೀರ್ಮಾನವಾಯಿತು. ನೀವು ಅವರದ್ದೂ ಇದ್ದಾಗ ಅದಕ್ಕೆ ಅಧ್ಯಕ್ಷರನ್ನು ಮಾಡುವುದು ಒಳ್ಳೆಯವದು ಅಲ್ಲವೇ? ನೀವು ನ್ಯಾಯ ಹೇಳಿ. ನೀವು ನ್ಯಾಯ ಹೇಳಬೇಕಾದರೆ, ನೀವು ಕೇಳಿದರೆ ಏನು ಹೇಳುತ್ತೀರಿ? "ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರೆ, ನೀವು (xxxxxxx) ಎಂದು ಹೇಳಿದ್ದೀರಾ"? ದಯಮಾಡಿ ಜಗದೀಶ್ ಶೆಟ್ಟರ್ ಸಾಹೇಬರೆ ಹೇಳ್ರಿ.

ಅಧ್ಯಕ್ಷರು: ಇಲ್ಲ ತಗೊಳ್ರಿ, ನಾನೇ ಮಾಡಿದ್ದು ತಗೋಳ್ರಿ.

(xxxxxx ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.)

ಶ್ರೀ ಹೆಚ್.ಡಿ. ರೇವಣ್ಣ: ಯಾರನ್ನೂ ಬೇಡ Impartial ಆಗಿ ಮಾನ್ಯ ರಮೇಶ್ ಕುಮಾರ್‌ರವರನ್ನೇ ಮಾಡಿ. ಅವರು ನ್ಯಾಯ ಒದಗಿಸಿಕೊಡ್ತಾರಂತೆ.

ಅಧ್ಯಕ್ಷರು: (xxxxxxx) ಎಂದು ಹೇಳಿದ್ದನ್ನು ತೆಗೆದುಹಾಕ್ರಿ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ಅಷ್ಟೇ, ನಮ್ಮ ಗತಿ ಎಲ್ಲಿಗೆ ಬಂತು ನೋಡಿ. ರೀ ರೇವಣ್ಣನವರೆ, ಕುಮಾರಸ್ವಾಮಿಯವರೆ, ಎರಡೇ ದಿವಸಗಳಲ್ಲಿ ನನ್ನ ಗತಿ ಎಲ್ಲಿಗೆ ಬಂತು ನೋಡಿ. ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ ಆಯಿತು. ಈಗ House Committee Chairman.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕರೆ, ಅವರನ್ನು ಮಂತ್ರಿ ಮಾಡಿಲ್ಲ. ಸದನ ಸಮಿತಿ ಅಧ್ಯಕ್ಷರನ್ನಾಗಿ ಮಾಡಿ ಅವರಿಗೆ ಒಂದು ಕಾರ್ ಕೊಡಿಸಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನನ್ನ ಪ್ರೊಮೋಷನ್ ಎಲ್ಲಿಗೆ ಬಂತು ನೋಡ್ರಿ.

ಅಧ್ಯಕ್ಷರು: ಬಿಡ್ರಿ. ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ರಮೇಶ್ ಕುಮಾರ್‌ರವರ ಸಲಹೆಯನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ನಮ್ಮ ಕಾಲದಲ್ಲಿಯೂ ಒಂದು ಸದನ ಸಮಿತಿ ಮಾಡಿದೆವು, ಆ ಸಮಯದಲ್ಲಿ ಎ.ಟಿ.ರಾಮಸ್ವಾಮಿಯವರು ಸದಸ್ಯರಿದ್ದರು, ಅದನ್ನು ಮಾಡಿದೆವು. ಆವತ್ತಿನ ಸದನ ಸಮಿತಿ ಕೊಟ್ಟಂತಹ ವರದಿ ಬಹುಶಃ ಈ ರಾಜ್ಯದ ಜನ ಚರ್ಚೆ ಮಾಡತಕ್ಕಂತಹದ್ದು ಇರಬಹುದು, ಹಲವಾರು ಹಿರಿಯರು ಅದರ ಬಗ್ಗೆ ಆಗಿರತಕ್ಕಂತಹ ಘಟನೆಗಳ ಬಗ್ಗೆ ಹೋರಾಟ ಪ್ರಾರಂಭ ಮಾಡಿದ್ದಾರೆ. ಆ ರೀತಿಯ ಸದನ ಸಮಿತಿಯ ಕೆಲಸ ಇವತ್ತು ಆಗಬೇಕು. ಇದರಲ್ಲಿ ನನಗೆ ಯಾರ ಮೇಲೂ ದೋಷ ಹಾಕಬೇಕು ಎನ್ನುವುದಲ್ಲ. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಈ ಸರ್ಕಾರದಲ್ಲಿ ಇದು ಪ್ರಾರಂಭವಾಯಿತು

ಎಂದು ನಾನು ಹೇಳುವುದಿಲ್ಲ. ಅಂತಿಮವಾಗಿ ಇದಕ್ಕೆ ಒಂದು full stop ಆದರೂ ಹಾಕಬೇಕಲ್ಲವೇ?

ಅಧ್ಯಕ್ಷರು: ಕಮಿಟಿ ಮಾಡಬೇಕೋ ಬೇಡವೋ ಎಂದು ಹೇಳ್ರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ನನಗೆ enquiry serious ಆಗಿ ಆಗಬೇಕು ಎನ್ನುವುದು ಇದೆ. ಕಮಿಟಿ ಮಾಡುವುದಕ್ಕೆ ನನ್ನದು ಏನೂ objection ಇಲ್ಲ. ಆದರೆ, ಆ ಕಮಿಟಿ ಒಂದು ಉತ್ತಮವಾದಂತಹ ರೀತಿಯಲ್ಲಿ ವರದಿ ಕೊಡಬೇಕು. ಆವತ್ತು ಎ.ಟಿ.ರಾಮಸ್ವಾಮಿ ಸದನ ಸಮಿತಿಯ ನಮ್ಮ ಸದಸ್ಯರುಗಳು ಏನು ಉತ್ತರ ಕೊಟ್ಟರಲ್ಲಾ ಆ ರೀತಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಈಗ ನಾವು ಆ ಸಮಿತಿ ಸಭೆಗೆ ಹೋಗುವುದು ಕಾಫಿ ಕುಡಿಯುವುದು, ಉಪ್ಪಿಟ್ಟು, ಕೇಸರಿ ಬಾತ್ ಕೊಡುತ್ತಾರೆ. ಹಸಿವು ಇದ್ದರೆ ತಿನ್ನುವುದು, ಇಲ್ಲದೇ ಇದ್ದರೆ ಅದು ಬೇಡಪ್ಪ ಎಂದು ಬರೀ ಕಾಫಿ ಕುಡಿದು ಬರುವುದು ಆಗಿದೆ. ಇದು ಆಗಬಾರದು ಎನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ, ಇವತ್ತು ನಾನು ಕಾನೂನು ಸಚಿವರಿಗೆ ಹೇಳುತ್ತೇನೆ. ನೀವು ಕೋರ್ಟ್‌ಗಳು ಹಾಗೂ ಮತ್ತೊಂದು ಎಂದು ಕಾರಣಗಳನ್ನು ಕೊಟ್ಟುಕೊಂಡು ನೀವು ರಚನೆ ಮಾಡತಕ್ಕಂತಹ ಕಾನೂನು ಇದೆ. ಅದನ್ನು ಹೇಳಿದೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಕಮಿಟಿ ಮಾಡುವುದಾದರೆ ಮಾಡಲಿ. ನೀವು ಈಗ document ಕೊಟ್ಟಿದ್ದೀರಿ. ಒಬ್ಬರು ಒಳ್ಳೆಯ ಆಫೀಸರ್‌ಅನ್ನು ಇಟ್ಟುಕೊಂಡು immediate ಆಗಿ enquiry ಮಾಡಿಸಿ ಒಂದು ತಿಂಗಳೊಳಗೆ ನಾನು ಇದರ ರಿಪೋರ್ಟ್‌ಅನ್ನು ತರಿಸಿಬಿಡುತ್ತೇನೆ. ಯಾರು ತಪ್ಪಿತಸ್ಥರೋ ಅವರ ಮೇಲೆ action ತೆಗೆದುಕೊಳ್ಳುತ್ತೇವೆ. ಕಮಿಟಿ ಮಾಡುವುದು ಅಧ್ಯಕ್ಷರಿಗೆ ಬಿಟ್ಟ ವಿಷಯ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತಹ ರೀತಿಯಲ್ಲಿ ಏನೆಂದರೆ, ನಾನು ಸರ್ಕಾರಕ್ಕೆ ಮನವಿ ಮಾಡುವುದು ಏನೆಂದರೆ, ಮತ್ತೆ "ಕುರಿ ಕಾಯುವುದಕ್ಕೆ ತೋಳ

ನೇಮಕವಾದ" ರೀತಿಯಲ್ಲಿ ಆಗಬಾರದು. ನಾನು ಕಾನೂನು ಸಚಿವರಿಗೆ ಹಾಗೂ PWD ಮಂತ್ರಿಗಳಿಗೆ ಹೇಳುವುದು ಏನೆಂದರೆ, ಇವತ್ತು ಈ sand ಪರಿಸ್ಥಿತಿ ಅತ್ಯಂತ ಕೆಟ್ಟ ಪರಿಸ್ಥಿತಿಯಾಗಿದೆ. ಸರ್ಕಾರದಲ್ಲಿ ನಿಮ್ಮ ಕೆಲಸಗಳು ಆಗುತ್ತಿಲ್ಲ. ನೀವು ಬರೀ ಗುದ್ದಲಿ ಪೂಜೆ ಮಾಡಿ ಬರುತ್ತಿದ್ದೀರಿ. Sand ಇಲ್ಲದೇ ಇವತ್ತು ನಿಮ್ಮ ಕೆಲಸಗಳು ಆಗುತ್ತಿಲ್ಲ. ಇವತ್ತು ಒಂದು ಆಶ್ರಯ ಮನೆ ಕಟ್ಟುವುದಕ್ಕೆ ಆಗುತ್ತಿಲ್ಲ.

ಶ್ರೀ ಶಿವಾನಂದ್ ಎಸ್. ಪಾಟೀಲ್: ಮಾನ್ಯ ಕುಮಾರಸ್ವಾಮಿಯವರೆ, ಒಂದು ನಿಮಿಷ. ನೀವು yield ಆಗಿದ್ದೀರಿ. ಸರ್ ನಮ್ಮಲ್ಲಿ master plan impose ಮಾಡಿದ್ದಾರೆ. Building ಕೆಡವಿದ್ದಾರೆ, sand ಸಿಗುತ್ತಿಲ್ಲ. ಇಡೀ ಊರಿನಲ್ಲಿ main road ನಲ್ಲಿ 3,600 building ಕೆಡವಿದ್ದಾರೆ. ಈ cutting across the party lane ನಾನು ಹೇಳಬಾರದು. ಮಾನ್ಯ ಕಾರಜೋಳ್‌ರವರು ಏನೋ ಹೇಳಿದ್ದೀರಿ ಮತ್ತೆ ಅವರು back out ಆದರು. ಸ್ವಲ್ಪ ಅವರಿಗೆ ಮತ್ತು ಬಂತು.

ಅಧ್ಯಕ್ಷರು: ಏಕೆ ಅದು?

ಶ್ರೀ ಶಿವಾನಂದ್ ಎಸ್. ಪಾಟೀಲ್: ಅವರು ಏಕೆ back out ಆದರು ಎಂಬುದು ಅವರಿಗೇ ಗೊತ್ತು. ಗನ್ನು, ಡಬಲ್ ಬಾರ್ ಗನ್ನು, ಯಾರು, ಯಾರ ಕೆಳಗೆ ನಡೆದಿದೆ ಎಂಬುದೆಲ್ಲಾ ಅವರಿಗೆ ಗೊತ್ತಿದೆ. ಆದರೂ ಮತ್ತೆ back out ಆದರು.

ಒಬ್ಬ ಮಾನ್ಯ ಸದಸ್ಯರು: ಅವರಿಗೆ ಯಾವುದೋ ಫೋನ ಬಂದಿರಬೇಕು.

ಶ್ರೀ ಗೋವಿಂದ ಎಂ. ಕಾರಜೋಳ: ನಾವು back out ಆಗಲಿಲ್ಲ.

ಶ್ರೀ ಶಿವಾನಂದ್ ಎಸ್. ಪಾಟೀಲ್: ನಾವು ಏಕೆ ಅವರಿಗೆ ಕೇಳಬೇಕು? ಅವರಿಗೇ ಗೊತ್ತಿದೆ. ಯಾರ್‍ಯಾರು ಮಾಡಿದ್ದಾರೆ ಅದು ಅವರವರಿಗೇ ಗೊತ್ತಿದೆ. ಸರ್ ಇನ್ನೊಂದು ಹೇಳಿಬಿಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಜೆ.ಸಿ.ಬಿ. ಇಟ್ಟುಕೊಂಡಿರುವವರು ಅವರ ಹೆಸರಿನಲ್ಲಿ ಇಟ್ಟುಕೊಂಡಿಲ್ಲ. ಬೋಟು ಹಾಕಿ ಉಸುಕು ತೆಗೆಯುತ್ತಾರೆ ಅವರು ಅವರ ಹೆಸರಿನಲ್ಲಿ ಇಟ್ಟುಕೊಂಡಿಲ್ಲ. ಮತ್ತೆ ಅವರ ಹೆಸರು ಹೇಳಿ ಎಂದರೆ ನಾನು ಏನು ಹೇಳಲಿ?

ಶ್ರೀ ಶಿವಾನಂದ್ ಎಸ್. ಪಾಟೀಲ್: ಇಲ್ಲಿ ನೋಡಿ ಸರ್. PSI ಗಳು ಕುಳಿತೇ sand block ಮಾಡುತ್ತಾರೆ. ನಾನೇ ಅದನ್ನು ಬೇಕಾದರೆ Home Minister ಗೆ authenticated ಆಗಿ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಇಷ್ಟು ಹೊತ್ತಿನವರೆಗೆ ಚರ್ಚೆ ಬಹಳ ಗುಣಾತ್ಮಕವಾಗಿತ್ತು. ಈಗ ಸಮಿತಿ ರಚನೆ ಮಾಡಿ ವರದಿ ಕೊಡುವುದು ಆಮೇಲೆ ಇರಲಿ. ಸರ್ಕಾರದ ಎಲ್ಲಾ ಕಾಮಗಾರಿಗಳು ನಡೆಯುವುದಕ್ಕೆ ತಕ್ಷಣದಲ್ಲಿ ಸರ್ಕಾರ ಏನು ಮಾಡಬೇಕು ಎಂದು ತಾವು ದಯಮಾಡಿ ಹೇಳಬೇಕು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನಮ್ಮ ರಾಜಕೀಯ ವಿರೋಧಿಗಳು ಹೋಗಿ ಎಲ್ಲಾ ಎಂ.ಎಲ್.ಎ ಗಳು ಒಂದಾಗಿ ಬಿಟ್ಟಿದ್ದೇವೆಂದು press statement ಕೊಡುತ್ತಾರೆ. ಆದರೆ ನಾನು ಎಸ್.ಪಿ ಮತ್ತು ಡಿ.ಸಿಯವರಿಗೆ ಸ್ವತಃ ಪತ್ರ ಬರೆದಿದ್ದೇನೆ.

ಅಧ್ಯಕ್ಷರು: ಈಗ ಏನಾಗಬೇಕೆಂದು ಹೇಳಿ?

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನಾನು ಗೃಹ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ನಾನು ಸುಮ್ಮನೇ ಕುಳಿತಿದ್ದೆ. ಶಿವಾನಂದ ಪಾಟೀಲ್ ರವರು ಹೇಳುತ್ತಿದ್ದಾರೆ. ಮೂಲತಃ ಎಲ್ಲಿ ಬೇರಿದೆಯೆಂದರೆ, ವಾಸ್ತವಿಕ ಸತ್ಯವನ್ನು ಹೇಳಬೇಕೆಂದರೆ ಅಧಿಕಾರಗಳೇ ಇದರಲ್ಲಿ ಶಾಮಿಲಾಗಿದ್ದಾರೆ. Specially Police Department ನವರೇ ನಿಂತು ಲಾರಿಗಳನ್ನು ಬಿಡಿಸುತ್ತಾರೆ. ನಾನು ಸ್ವತಃ ಟ್ರ್ಯಾಕ್ಟರ್‌ಗಳನ್ನು ಹಿಡಿದಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದು ಟ್ರ್ಯಾಕ್ಟರ್

ಹಿಡಿದುಕೊಟ್ಟಿದ್ದಕ್ಕೆ ಅಲ್ಲಿನ ಅಧಿಕಾರಿಗಳು ನನಗೆ ದಮ್‌ಕಿ ಹಾಕುತ್ತಾರೆ. ನೀವ್ಯಾರು ಹೇಳುವುದಕ್ಕೆ ಎಂದು ಹೇಳುತ್ತಾರೆ. This is the fact. ಪೊಲೀಸ್ ಇಲಾಖೆಯ ಅಧಿಕಾರಿಗಳೇ ಇದರಲ್ಲಿ ಶಾಮೀಲಾಗುತ್ತಿದ್ದಾರೆ. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಡಿ.ಸಿಯವರಿಗೆ ಸ್ವತಃ ಪತ್ರ ಬರೆದಿದ್ದೇನೆ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್: ಸತ್ಯವನ್ನೇ ಹೇಳುತ್ತೇನೆ. Cutting across the party lane ಹೇಳು ಎಂದರೂ ಹೇಳುತ್ತೇನೆ. ಇದರಲ್ಲಿ ಪೊಲೀಸ್ ಇಲಾಖೆಯು involve ಆಗಿದೆ.

(ಗೊಂದಲ)

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ: ಮಾನ್ಯ ಅಧ್ಯಕ್ಷರೆ ಒಂದು ಯಕ್ಷ ಪ್ರಶ್ನೆಯೇನೆಂದರೆ ಮಾನ್ಯ ಕಾನೂನು ಸಚಿವರು, ಲೋಕೋಪಯೋಗಿ ಸಚಿವರು ಹಾಗೂ ಗೃಹ ಸಚಿವರು ಇಲ್ಲಿದ್ದಾರೆ. ಇವತ್ತು ಅಕ್ರಮವಾಗಿ ಸಾಗಿಸುತ್ತಿರುವ ಮರಳಿಗೆ ಟ್ರಕ್ ಇದ್ದರೆ, ಅದಕ್ಕೆ 25,000 ರೂ.ಗಳು ಟ್ರ್ಯಾಕ್ಟರ್ ಇದ್ದರೆ 5,000–10,000 ರೂಪಾಯಿಗಳು ಮನಬಂದಂತೆ ದಂಡ ಹಾಕಿ ಲೋಕೋಪಯೋಗಿ ಇಲಾಖೆಯ ಹಿಡಿತದಲ್ಲಿ ಅದನ್ನು unload ಮಾಡಿಸಿಕೊಳ್ಳುತ್ತಾರೆ. ರಾಜ್ಯದಲ್ಲಿ ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯವರು ಹಿಡಿದು ದಂಡ ಹಾಕಿರುವಂತಹ ಮರಳು ಎಷ್ಟು? ಅಂತಹ ಮರಳಿನಿಂದ ಬಂದಿರುವ ದಂಡ ಎಷ್ಟು? ಆ ಮರಳನ್ನು ಮಾರಾಟ ಮಾಡಿ ಸರ್ಕಾರಕ್ಕೆ ಬಂದಂತಹ ಆದಾಯ ಎಷ್ಟು ಎಂಬ ಬಗ್ಗೆ ಸರ್ಕಾರ ಇವತ್ತು ಶ್ವೇತಪತ್ರವನ್ನು ಹೊರಡಿಸಬೇಕು.

ಶ್ರೀ ಪಿ. ರಾಜೀವ್ (ಕುಡಚಿ) : ರಾಘವೇಂದ್ರ ರವರೆ ಆರೋಪಿಗಳು ಯಾರು ಸ್ಪಷ್ಟವಾಗಿ ಹೇಳಿ ಎಂದು ಆಗಲೇ ನೇರವಾಗಿ ಕೇಳಿದ್ದೀರಿ. ಯಾದಗಿರಿ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಯಾರು ಇವರ ಮೇಲೆ ಇರುವ ಆರೋಪಗಳೇನು ಎಂಬ ಬಗ್ಗೆ ಸರ್ಕಾರ ಈ

ರೀತಿ ಉತ್ತರ ಕೊಟ್ಟಿದೆ. ಲೋಕಾಯುಕ್ತರ FIR.No.07/14 ರಂತೆ ಯಾದಗಿರಿ ಜಿಲ್ಲೆಯ ಎಲ್ಲಾ ತಹಸೀಲ್ದಾರರುಗಳು, ಯಾದಗಿರಿ ಜಿಲ್ಲೆಯ ಠಾಣಾ ಪ್ರಭಾರದಲ್ಲಿರುವ ಜಿಲ್ಲಾ ಪೋಲಿಸ್ ಇನ್ಸಪೆಕ್ಟರ್ಸ್, ಎಲ್ಲಾ ಆರಕ್ಷಕ ವೃತ್ತ ನಿರೀಕ್ಷಕರು, ಯಾದಗಿರಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಂದಾಯ ನಿರೀಕ್ಷಕರು, ಯಾದಗಿರಿ ಜಿಲ್ಲೆಯ ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ ಹಾಗೂ ಯಾದಗಿರಿ ಜಿಲ್ಲೆಯ ಎಲ್ಲಾ ವಲಯ ಅರಣ್ಯಾಧಿಕಾರಿಗಳು ಆರೋಪಿಯಾಗಿರುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಸಹಿ ಮಾಡಿ ಕೊಟ್ಟಿರುತ್ತಾರೆ. ನಾನು ಹೇಳುವುದೇನೆಂದರೆ ಅಕ್ರಮ ಮರಳು ಗಣಿಗಾರಿಕೆ ಎಲ್ಲೆಲ್ಲೆ ನಡೆಯುತ್ತಿದೆ ಅಲ್ಲಿನ ಎಲ್ಲಾ ಅಧಿಕಾರಿಗಳು ಆರೋಪಿಗಳಾಗಿದ್ದಾರೆಂದು ಹೇಳಿದ್ದಾರೆ ಹಾಗಾದರೆ ಉಳಿದವರು ಯಾರು? ಈ ವಿಷಯವನ್ನು ಸರ್ಕಾರ ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ವಿ. ಸುನೀಲ್ ಕುಮಾರ್: ಅಷ್ಟೂ ಜನರನ್ನು suspend ಮಾಡಿ. ಇದು ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಜಾರೋಷವಾಗಿ ನಡೆಯುತ್ತಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಇದುವರೆಗೆ ಯಾರೂ ಕೂಡ suspend ಆಗಿಲ್ಲ. ಬೇಲಿಯೇ ಎದ್ದು ಹೊಲ ಮೇಯುತ್ತಿದೆಯೆಂದು ಇದಕ್ಕೆ ಹೇಳುವುದು. ತಕ್ಷಣ ಕ್ರಮ ಕೈಗೊಳ್ಳಬೇಕು. ಅವರು ಯಾರನ್ನಾದರೂ suspend ಮಾಡಿದ್ದಾರೆಯೇ ಕೇಳಿ. ಇಡೀ ಜಿಲ್ಲೆಯಲ್ಲಿನ ಅಧಿಕಾರಿಗಳನ್ನು suspend ಮಾಡಿ.

(ಗೊಂದಲ)

ಅಧ್ಯಕ್ಷರು: ರಾಜೀವ್ ಆ ಕಾಪಿಯನ್ನು ಮಂತ್ರಿಗಳಿಗೆ ಕಳುಹಿಸಿ. ಉತ್ತರ ಹೇಳುತ್ತಾರೆ ಕೇಳೋಣ ಇರಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ ರಾಜೀವ್‌ರವರು ಸರಿಯಾಗಿ ಓದಿದ್ದಾರೆ. ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿ,

ಇದರಲ್ಲಿ ನೋಡುವುದು ಏನಿದೆ? ಸರ್ಕಾರ clarification ಕೊಡಬೇಕು. ಈ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಉತ್ತರ ಕೊಡಬೇಕು. ಇದು ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಉತ್ತರ.

(ಗೊಂದಲ)

ಶ್ರೀ ಎಂ. ಕೃಷ್ಣಾರೆಡ್ಡಿ: ಸ್ಪಷ್ಟವಾಗಿ ಅವರೇ ಉತ್ತರ ಕೊಟ್ಟಿದ್ದಾರೆ. ಒಂದು ಜಿಲ್ಲೆಗೆ ಪಾಠ ಕಲಿಸಿ ಎಲ್ಲಾ ಸರಿಯಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಖಂಡಿತ ಆಯಿತು. ಬೇಗ ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಅಧಿಕಾರಿಗಳದ್ದು ಇದೇ ಹಣೆಬರಹವಾಗಿದೆ.

(ಗೊಂದಲ)

ಶ್ರೀ ಆರ್. ಜಗದೀಶ್ ಕುಮಾರ್: ಮಾನ್ಯ ಅಧ್ಯಕ್ಷರೆ ಒಂದೇ ಒಂದು ನಿಮಿಷ ಮಾತನಾಡುತ್ತೇನೆ ಮಾನ್ಯ ಕಾನೂನು ಮಂತ್ರಿಗಳು ಈಗಾಗಲೇ ಸುಪ್ರೀಂಕೋರ್ಟ್ ಒಂದು direction ನಲ್ಲಿ ಈ ನಿಯಮ ಮಾಡಿದೆಯೆಂದು ಹೇಳಿದ್ದೀರಲ್ಲ ಅದಕ್ಕೆ ನನ್ನದು ಒಂದೇ ಒಂದು ಪ್ರಶ್ನೆಯೇನೆಂದರೆ,

(ಗೊಂದಲ)

ಅಧ್ಯಕ್ಷರು: ಆ ವಿಷಯ ಬೇಡ. ಅದನ್ನು ಸುಪ್ರೀಂಕೋರ್ಟ್ ಮಾಡಿಲ್ಲ ಇಲ್ಲೇ ಮಾಡಿರುವುದು ಬಿಡಿ.

(ಗೊಂದಲ)

(ಈ ಹಂತದಲ್ಲಿ ರಾಜೀವ್ ರವರು ಓದಿದ ಪ್ರತಿಯನ್ನು ಮಾನ್ಯ ಅಧ್ಯಕ್ಷರಿಗೆ ತಂದು ಕೊಟ್ಟರು)

ಶ್ರೀ ಆರ್. ಜಗದೀಶ್ ಕುಮಾರ್: ಸುಪ್ರೀಂಕೋರ್ಟ್ ನಿಯಮದಲ್ಲಿ ಮಾಮೂಲನ್ನು ಯಾವ ರೀತಿ fix ಮಾಡಬೇಕೆಂದು ಏನಾದರೂ ಹೇಳಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು: ಅದನ್ನು ಮಾಡಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿಯವರೆಗೆ ನಡೆಯಬೇಕಾದ ಘಟನೆಗಳು ನಡೆದು ಹೋಗಿವೆ. ಆದರೆ atleast ಸರ್ಕಾರ ಈಗಲಾದರೂ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ಜನರಿಗೆ ಇವತ್ತು sand ಸಿಗಬೇಕು.

ಅಧ್ಯಕ್ಷರು: ಕುಮಾರಸ್ವಾಮಿಯವರೆ ಈ ಪ್ರಶ್ನೆಗೆ ಸರ್ಕಾರದ ಉತ್ತರ ಹೇಗಿದೆಯೆಂದರೆ ಈ ರೀತಿ ಇದೆ ನೋಡಿ. ಯಾದಗಿರಿ ತಾಲ್ಲೂಕಿನ FIR.No.07/204 ರಂತೆ ಯಾದಗಿರಿ ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರರುಗಳು, ಯಾದಗಿರಿ ಜಿಲ್ಲೆಯ ಠಾಣಾ ಪ್ರಭಾರದಲ್ಲಿರುವ ಎಲ್ಲಾ ಪೋಲಿಸ್ ಇನ್ಸಪೆಕ್ಟರ್ಸ್, ಎಲ್ಲಾ ಆರಕ್ಷಕ ವೃತ್ತ ನಿರೀಕ್ಷಕರು, ಯಾದಗಿರಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಂದಾಯ ನಿರೀಕ್ಷಕರು, ಯಾದಗಿರಿ ಜಿಲ್ಲೆಯ ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ ಹಾಗೂ ಯಾದಗಿರಿ ಜಿಲ್ಲೆಯ ಎಲ್ಲಾ ವಲಯ ಅರಣ್ಯಾಧಿಕಾರಿಗಳು ಆರೋಪಿಯಾಗಿರುತ್ತಾರೆ. FIR ಪ್ರಕಾರ ಸದರಿ ಅಧಿಕಾರಿಗಳ ವಿರುದ್ಧ ಅಕ್ರಮ ಮರಳು ಗಣಿಗಾರಿಕೆ ಆರೋಪ ಹೊರಿಸಲಾಗಿದ್ದು ಅಧಿಕಾರಿಗಳ ಪದನಾಮದ ಮೇರೆಗೆ ದೂರು ದಾಖಲಿಸಲಾಗಿದೆ. ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಯಾವ ಪ್ರಮಾಣದಲ್ಲಿ ನಡೆಯುತ್ತಿದೆಯೆಂದು ನೋಡಿ. ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆಂದು ಕೇಳಿ?

(ಗೊಂದಲ)

ಅಧ್ಯಕ್ಷರು: ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಹಾಗಾದರೆ ಎಲ್ಲಾ ಅಧಿಕಾರಿಗಳು ಆರೋಪಿಗಳೆಂದು ಆಯಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ಎಲ್ಲಾ ಜಿಲ್ಲೆಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದೆ. ಇಲ್ಲಿ ಎಲ್ಲೋ ಒಂದು ಕಡೆ FIR file ಆಗಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾನೂನು ಸಚಿವರೇ ಏನಿದು?

(ಗೊಂದಲ)

ಶ್ರೀ ಸಿ.ಟಿ. ರವಿ: ಇದನ್ನು ತನಿಖೆ ಮಾಡುವವರು ಯಾರು? ಇದಕ್ಕೆ ಸಹಕಾರಿಗಳು ಯಾರು? ಹಣ ಪಡೆಯುವವರು ಯಾರು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಕೆಲವು ಅಧಿಕಾರಿಗಳ ವಿರುದ್ಧ FIR file ಆಗಿದೆ. ಇದು ಎಲ್ಲಾ ಜಿಲ್ಲೆಯಲ್ಲಿ ರಾಜಾರೋಷವಾಗಿ ನಡೆಯುತ್ತಿದೆ. ಪೋಲಿಸ್ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಎಲ್ಲಾ ಕಡೆ ಇದೇ ರೀತಿ ಮಾಡುತ್ತಿದ್ದಾರೆ. Open ಆಗಿ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾನೂನು ಸಚಿವರೆ, FIR ದಾಖಲು ಮಾಡಬೇಕಾದರೆ prima-facie ಅದು offence ಅಲ್ಲವೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತೇನೆ ನಾನು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ಇದನ್ನು ಇನ್ನೂ ಎಷ್ಟು ಹೊತ್ತು ಚರ್ಚೆ ಮಾಡಬೇಕೆಂದು ಹೇಳಿ. ಕೇವಲ ಚರ್ಚೆ ಆಗಬೇಕೋ ಅಥವಾ ಈ ವಿಷಯದಲ್ಲಿ ಏನಾದರೂ ಅಂತಿಮವಾದ ತೀರ್ಮಾನಕ್ಕೆ ಬರಬೇಕೋ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದರಲ್ಲಿ ಎಲ್ಲಾ ಅಧಿಕಾರಿಗಳು involve ಆಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಸಹಿ ಹಾಕಿ ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಾನು ಹೇಳುತ್ತೇನೆ. I am prepared. ನಾನು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಸಾಕು, ಕುಮಾರಸ್ವಾಮಿಯವರೆ ಮಾತನಾಡಿ. Effective ಆಗಿ implement ಆಗಿಲ್ಲವೆನ್ನುವುದು ಈ ಚರ್ಚೆಯಿಂದ ಅರ್ಥವಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನನಗೆ ಮಾತನಾಡಬೇಕಾದ ವಿಷಯ ಬಹಳ ಇದೆ. ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾದಗಿರಿಯ ಬಗ್ಗೆ ನಮ್ಮ ರಾಜೀವ್‌ರವರು ಹೇಳಿದರು. ಸರ್ಕಾರದವರು ಉತ್ತರವನ್ನು ಕೊಡುತ್ತಾರೆ. ಉತ್ತರ ಕೊಡದೇ ಎಲ್ಲೂ ಹೋಗುವುದಿಲ್ಲ. ಆದರೆ ಆ ಉತ್ತರಗಳ ಮಹತ್ವ ಏನಿದೆ ಎಂಬುದು ಹಲವಾರು ಉತ್ತರಗಳನ್ನು ಗಮನಿಸಿದಾಗ ತಿಳಿಯುತ್ತದೆ. ಎಲ್ಲೋ ಒಂದು ಕಡೆ ಸಾರ್ವಜನಿಕ ಮುಜುಗರಕ್ಕೆ

ಒಳಗಾಗುವಂತಹ ವಾತಾವರಣವನ್ನು ಸರ್ಕಾರವೇ ಮಾಡಿಕೊಳ್ಳುತ್ತಿದೆ. ಈ ಸದನ ಪ್ರಾರಂಭವಾದ ದಿವಸದಿಂದ ಸರ್ಕಾರಕ್ಕೆ, ಸರ್ಕಾರದ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರು ಹಲವಾರು ಬಾರಿ ತಪ್ಪನ್ನು ಸರಿಪಡಿಸಿಕೊಳ್ಳಿಯೆಂದು ಹೇಳಿದ್ದಾರೆ. ಇಂತಹ ಮುಜುಗರಕ್ಕೆ ಪದೇ ಪದೇ ಒಳಗಾಗುವುದು ಏನಿದೆ? ಸರಿಪಡಿಸಿಕೊಳ್ಳಿ. ಉತ್ತರವನ್ನು ನೀವು ಕೊಡುತ್ತೀರಿ, ಆದರೆ ಇವತ್ತು ಮರಳಿನ ವಿಷಯದಲ್ಲಿ ಇಲ್ಲಿಯವರೆಗೆ ನಡೆದಿರುವಂತಹ ಸ್ವೇಚ್ಚಾಚಾರದ ಘಟನೆಗಳೇನಿವೆ ಅದನ್ನು ಈಗಲಾದರೂ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಪಡಿ. ಇಲ್ಲಿಯವರೆಗೆ ನಡೆದಿರುವುದು ಸಾಕು.

ಅಧ್ಯಕ್ಷರು: ನಿಮ್ಮ ಪ್ರಕಾರ ನಿಯಮ ರೂಪಿಸಿದ್ದಾರಲ್ಲ ಅದು ಸರಿಯಾಗಿದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಿಯಮವನ್ನು ರೂಪಿಸಿಕೊಂಡರು ಆದರೆ ಈ ನಿಯಮ ಯಾವುದೂ ಕೂಡ ಜಾರಿಯಾಗಿಲ್ಲ. ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಪ್ರಶ್ನೆ ಏನೆಂದರೆ ಇವರು ಮಾಡಬೇಕಾಗಿರುವ ಕೆಲಸದ ಬಗ್ಗೆ ನಿಯಮದಲ್ಲಿ ಅವರೇ ಹೇಳಿರುತ್ತಾರೆ. 12 ಎಕರೆ ಜಾಗವನ್ನು ಎಲ್ಲಿ ಗುರುತಿಸುತ್ತೇವೆ, block ಗಳನ್ನು ಮಾಡುತ್ತೇವೆ, ಎಷ್ಟು ಮರಳು ಸಿಗುತ್ತದೆ ಎನ್ನುವ ಬಗ್ಗೆ identify ಮಾಡಬೇಕೆಂದು ಹೇಳಿದ್ದಾರೆ. ಇವತ್ತಿನವರೆಗೂ ಈ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇಟ್ಟುಕೊಂಡಿದ್ದಾರೆಯೇ?

ಅಧ್ಯಕ್ಷರು: ನಿಮ್ಮ ಅನುಭವ ಮತ್ತು ಚರ್ಚೆಯ ಪ್ರಕಾರ, ನಿಯಮಾವಳಿಗಳನ್ನು ಏನು ರೂಪಿಸಿರುತ್ತಾರೆ, ಅದರಲ್ಲಿ ಬದಲಾವಣೆ ಆಗುವಂತಹ ಅವಶ್ಯಕತೆಯಿದೆಯೇ ಎನ್ನುವುದನ್ನು suggest ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅವಶ್ಯಕತೆ ಇದೆ ಮಾನ್ಯ ಅಧ್ಯಕ್ಷರೆ, ಸಮ್ಮಿಶ್ರ ಕಾಲದಲ್ಲಿ ನಾನು ಮುಖ್ಯಮಂತ್ರಿಯಾಗಿರುವಂತಹ ಸಂದರ್ಭದಲ್ಲಿ ನಾವುಗಳು ಯಾವುದಕ್ಕೂ involve ಆಗಿರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆ ಸಮಯದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ಘಟನೆ ನಡೆದರೂ ರಾಜ್ಯದಲ್ಲಿ ಮರಳಿನ ಕೊರತೆ ಇರಲಿಲ್ಲ. ನಮ್ಮ ಕಾಲದಲ್ಲಿ ಮರಳಿನ

ಕೊರತೆ ಎಂದೂ ಇರಲಿಲ್ಲ. ನಾವು ಮಾಡಿರುವಂತಹ ಕೆಲಸಗಳೆಲ್ಲವೂ ಯಾವುದೇ ಕೊರತೆಯಿಲ್ಲದೆ ಮಾಡಿದ್ದೇವೆ. ಇಂದು 70,000 ಅಥವಾ 80,000 ರೂ.ಗಳಿಗೆ ಮರಳು ಖರೀದಿ ಮಾಡುವುದಕ್ಕೆ ಆಗುತ್ತದೆಯೇ? ಮೊದಲನೆಯದಾಗಿ ಆಗಿರುವಂತಹ ತಪ್ಪುಗಳನ್ನು ಸರ್ಕಾರವು ಸರಿಪಡಿಸಿಕೊಳ್ಳಬೇಕಾಗಿದೆ. ಸದನ ಸಮಿತಿ ರಚನೆ ಮಾಡಿರುತ್ತೀರಿ. ಸರ್ಕಾರಕ್ಕೂ ನಾನು ಮನವಿ ಮಾಡುವುದೇನೆಂದರೆ, ಸ್ವಲ್ಪ ಪ್ರಾಮಾಣಿಕವಾಗಿ solution ಕಂಡು ಹಿಡಿಯುವುದು ಒಂದು ಭಾಗ. ತಪ್ಪೇನಿದೆ ಅದರ ಬಗ್ಗೆ ತಕ್ಷಣ ಸರ್ಕಾರದಲ್ಲಿ ಕ್ರಮ ತೆಗೆದುಕೊಳ್ಳಿ. ಅಧಿಕಾರಿಗಳ ವಿಷಯದಲ್ಲಿ ಹೇಳುವುದಾದರೆ ಕೆಲವರು ಒಳ್ಳೆಯವರಿದ್ದಾರೆ. ಎಲ್ಲಾ ಅಧಿಕಾರಿಗಳನ್ನು ಸಾರಾಸಗಾಟವಾಗಿ ಅಪ್ರಾಮಾಣಿಕರು, ಕಳ್ಳರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅಧಿಕಾರಿಗಳನ್ನು ಅಪ್ರಾಮಾಣಿಕವಾಗಿ ಮಾಡುವ ವಾತಾವರಣವನ್ನು ಜನಪ್ರತಿನಿಧಿಗಳಾದ ನಾವೇ ಮಾಡುತ್ತೇವೆ. ಏಕೆಂದರೆ ನಮ್ಮ ಹಿಂದೆ-ಮುಂದೆ ಇರತಕ್ಕಂತಹ ಕಾರ್ಯಕರ್ತರು ಬಂದು ನಮ್ಮ ಮೇಲೆ ಒತ್ತಡ ಹೇರಿದಾಗ ಅವರನ್ನು ರಕ್ಷಣೆ ಕೊಡುವುದಕ್ಕಾಗಿ, ನಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವ ಮುಖಾಂತರ ಅಧಿಕಾರಿಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತೇವೆ. ಆದ್ದರಿಂದ ಇದೆಲ್ಲವನ್ನೂ ನಿಲ್ಲಿಸುವುದಕ್ಕೆ ಮತ್ತು ಈಗ ಆಗಿರುವಂತಹ ತಪ್ಪುಗಳನ್ನು ಸರಿಪಡಿಸುವುದಕ್ಕೆ ನಿಮ್ಮ ಒಂದು ಇಚ್ಛಾಶಕ್ತಿ, ಬದ್ಧತೆ ಪ್ರದರ್ಶನ ಮಾಡಬೇಕು. ಕೃಷಿ ಭೂಮಿಯಲ್ಲಿ crushing sand ಮಾಡುವುದಕ್ಕೆ ನೀವೇ ಕೆಲವು ನಿಯಮಗಳನ್ನು ಜಾರಿಗೆ ತಂದಿರಿ. ಇದೇ ರೀತಿ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ನೀವು identification ಮಾಡುವುದಾರೆ, filter ಮರಳು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಬಾಗಲಕೋಟೆ, ಬಾದಾಮಿಯಲ್ಲಿ sand ಮಿಶ್ರಿತವಾಗಿರುವ ಕಲ್ಲು ಇದೆ ಎಂದು ಹೇಳುತ್ತಾರೆ. ಅದಕ್ಕೆ ನಾನೂ suggestion ಕೂಡ ನೀಡಿದೆ. ಇದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ನೋಡಿ, ಜೊತೆಗೆ ಸಾರ್ವಜನಿಕರಿಗೆ ತೊಂದರೆಯಾಗದಂತಹ ರೀತಿಯಲ್ಲಿ ಈಗ ಆಗಿರುವಂತಹ ತಪ್ಪನ್ನು ಸರ್ಕಾರ ಸರಿಪಡಿಸಿಕೊಳ್ಳಬೇಕು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಂತಹ

ಸಂದರ್ಭದಲ್ಲಿ ಆಡಳಿತ ಈ ಮಟ್ಟಕ್ಕೆ ಬಿಗಿ ತಪ್ಪುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ನೀವೆಲ್ಲರೂ ನಮಗಿಂತ ಬಹಳ ಹಿರಿಯರಿದ್ದೀರಿ. ಅಲ್ಲದೆ ಅಲ್ಲಿ ಬಹಳ ಜನ ಹಿರಿಯರಿದ್ದಾರೆ. ನಾವೆಲ್ಲರೂ ರಾಜಕಾರಣಕ್ಕೆ ಬಾರದೇ ಇದ್ದಂತಹ ಸಂದರ್ಭದಲ್ಲಿ ನೀವೆಲ್ಲರೂ ರಾಜಕಾರಣ ಮಾಡಿದ್ದವರು. ನಿಮಗೆಲ್ಲಾ ಬಹಳಷ್ಟು ಅನುಭವವಿದೆ. ದಯಮಾಡಿ ಇಂತಹ ಮುಜುಗರವಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಡಿ. ಅದನ್ನು ಸರಿಪಡಿಸಿಕೊಳ್ಳಬೇಕೆಂದು ಸದನದ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ: ಹೊರ ರಾಜ್ಯಕ್ಕೆ ಮರಳು ಹೋಗುವುದನ್ನು ಸಂಪೂರ್ಣವಾಗಿ ಬಂದ್ ಮಾಡಿ.

(ಗೊಂದಲ)

ಅಧ್ಯಕ್ಷರು: ಬೇಡ, ಬೇಡ, ಸಾಕು. ಈಗ ಉತ್ತರ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ನಾನು sign ಹಾಕಿದ್ದೇನೆ. ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಸಾಕು. ಸಾಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾಫಿಯಾ ಅಲ್ಲ, ನನ್ನ ಕ್ಷೇತ್ರದಲ್ಲಿ ಲೋಕಲ್ ಮರಳನ್ನೂ ಸಹ ತರುವುದಕ್ಕೆ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೆ ಬೇಜಾರು ಮಾಡಿಕೊಳ್ಳಬೇಡಿ. ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಲೋಕಲ್ ಮರಳೆಂದರೆ ಕೆರೆ, ಕಟ್ಟೆಯಲ್ಲಿ ಸಿಗುವಂತಹ ಮರಳಿನಿಂದ ಜನತಾ ಮನೆಗಳನ್ನು, ಶೌಚಾಲಯಗಳನ್ನು ಕಟ್ಟುವುದಕ್ಕೆ ತರುವ ಮರಳಿಗೆ ಪೊಲೀಸರು ಹಿಡಿದು 5 ರಿಂದ 10 ಸಾವಿರ ರೂ.ಗಳ penalty ಹಾಕುತ್ತಿದ್ದಾರೆ. ರಾತ್ರಿಯಲ್ಲಿ load ತುಂಬಿರುವ ಲಾರಿಗಳು ಬಂದು unload ಮಾಡಿ ಹೋಗುತ್ತವೆ. ಆ ಲಾರಿಗಳನ್ನು ಬಿಡುತ್ತಾರೆ. ಆದರೆ ಲೋಕಲ್‌ರವರನ್ನು

ಹಿಡಿದು ಕೇಸ್ ಹಾಕುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಕೆ.ಡಿ.ಪಿ. ಸಭೆಯಲ್ಲಿ ಲೋಕಲ್ ಮರಳಿಗೆ ಕೈಹಾಕಬಾರದೆಂದು ಹೇಳಿರುತ್ತಾರೆ. ಕಲ್ಲು ಕುಟುಕರು ಮತ್ತು ಸೈಜ್‌ಗಲ್ಲನ್ನು ಒಡೆದು ಕೊಡುವವರನ್ನು ನಕ್ಸ್‌ಲೈಟ್ಸ್ ಮಾಡುತ್ತಿದ್ದಾರೆ. ಆ ಬೋವಿ ಜನಾಂಗದವರು ಕಸುಬನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಿದ್ದಾರೆ. ಪ್ರತಿದಿನ ಕುಡಿದುಕೊಂಡು ಹೊಡೆದಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಕಲ್ಲುಗಳು, ಸೈಜ್‌ಗಲ್ಲಗಳು, ಕಟ್ಟಡದ ಕಲ್ಲುಗಳು, ಲೋಕಲ್ ಮರಳು ಅಂದರೆ ಈಗ ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ಆದರೂ 3–4 ಅಡಿ ಆಳ ಬಗೆದು ಕೆಳಗಡೆ ಇರುವುದನ್ನು ತೆಗೆದುಕೊಳ್ಳುತ್ತಾರೆ. ಈ ಮರಳಿಗೆ ದಯಮಾಡಿ ಪೊಲೀಸರು ಕೇಸ್ ಹಾಕದಂತೆ ನಿಲ್ಲಿಸಬೇಕು. ಈ ತೊಂದರೆ ಬೇರೆ ಮತ ಕ್ಷೇತ್ರದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಮತಕ್ಷೇತ್ರದಲ್ಲಿ ಮಾತ್ರ ಬಹಳ ಹೆಚ್ಚಾಗಿ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಕೆ.ಡಿ.ಪಿ. ಸಭೆಯಲ್ಲಿ ಲೋಕಲ್ ಮರಳಿಗೆ, ಕಲ್ಲು ಕಟ್ಟಡಕ್ಕೆ ಯಾವುದೇ ಕಾರಣಗಳಿಂದ ಅಡಚಣೆ ಮಾಡಬಾರದೆಂದು ಹೇಳಿದ್ದರು. ರಾತ್ರಿ ಸಮಯದಲ್ಲಿ ಅರಸೀಕೆರೆಗೆ ಸುಮಾರು 10 ಲೋಡ್ ಮರಳು ಲಾರಿಗಳು ಬರುತ್ತವೆ. ಆ ಮರಳಿಗೆ ಇಷ್ಟು ಮೊತ್ತವೆಂದು fix ಮಾಡಿ ತೆಗೆದುಕೊಳ್ಳುತ್ತಾರೆ. ಕೇಸ್ ತೋರಿಸುವ ಸಲುವಾಗಿ ಪಾಪಿ ಟ್ರ್ಯಾಕ್ಟರ್‌ಗಳವರನ್ನು ಹಿಡಿದುಕೊಂಡು ಬಂದು ಅರಸೀಕೆರೆಯ ಬಿ.ಹೆಚ್. ರಸ್ತೆಯ ಪೋಲೀಸ ಸ್ಟೇಷನ ಹತ್ತಿರ ಸಾಲಾಗಿ ನಿಲ್ಲಿಸುತ್ತಾರೆ. ದಯವಿಟ್ಟು ಅವರಿಗೆ ರಿಯಾಯಿತಿ ಕೊಡಿ. ಇಲ್ಲದಿದ್ದರೆ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ಖಾಯಂ.

ಶ್ರೀ ಮಂಕಾಳ ಸುಬ್ಬ ವೈದ್ಯ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೂ ಇದೇ ರೀತಿಯ ತೊಂದರೆಯಾಗಿದೆ.

ಅಧ್ಯಕ್ಷರು: ವೈದ್ಯರೇ ನಿಮಗೆ ಬರುವುದಿಲ್ಲ. ನೀವು ನೋಟೀಸ್‌ಗೆ sign ಹಾಕಿರುವುದಿಲ್ಲ.

ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ): ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯಕ್ಕೆ ಉಸುಕು ಕೊಡುವಂತಹ ಕ್ಷೇತ್ರವಾಗಿರುವದರಿಂದ ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ನೀವು ರುಜು ಹಾಕಿರುವುದಿಲ್ಲ ಮಹಾರಾಯರೇ, ಉತ್ತರ ಹೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿನ ವಿಚಾರ. ಒಂದೇ ನಿಮಿಷ . . .

ಅಧ್ಯಕ್ಷರು: ನೀವು ನೋಟೀಸ್‌ನಲ್ಲಿ ಸಹಿ ಹಾಕಿರುವುದಿಲ್ಲ. Wrong ಆಗುತ್ತದೆ, ಬರುವುದಿಲ್ಲ, ನೋಟೀಸ್ ಕೊಟ್ಟಿದ್ದೀರಾ? ಇಲ್ಲ. ಸುಮ್ಮನಿರಿ. ಇದು general discussion ಅಲ್ಲ. ಯಾರು ನೋಟೀಸ್ ಕೊಟ್ಟಿದ್ದಾರೋ ಅವರಿಗೆ ಮಾತ್ರ ಅವಕಾಶವಿರುತ್ತದೆ. ಆಯಿತು ಹೇಳಿ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ): ಮಾನ್ಯ ಅಧ್ಯಕ್ಷರೆ, check post ಹಾಕಿಕೊಡಿ ಎಂದು ಕೇಳಿದ್ದೇವೆ. ಒಂದು ಎಸ್.ಟಿ. ಹುಡುಗಿಯ ಹೆಣವನ್ನು ಮರಳಿನಲ್ಲಿ ಹಾಕಿ ಹೂತಿಟ್ಟಿದ್ದಾಗ, ತಕ್ಷಣವೇ ಆ ಹೆಣವನ್ನು ಹೊರಕ್ಕೆ ತೆಗೆದು ಮರಳನ್ನು ತೆಗೆದುಕೊಂಡಿರುತ್ತಾರೆ. ಆ ಬಗ್ಗೆ ಪೊಲೀಸಿನವರಿಗೆ complaint ಕೊಟ್ಟಿರುತ್ತೇನೆ. ಈ ರೀತಿಯ ಮರಳು ದಂಧೆ ನಡೆಯುತ್ತಿದೆ. ಹೆಣವನ್ನೇ ಹೊರಕ್ಕೆ ತೆಗೆದು ಹಾಕಿ ಮರಳನ್ನೇ ತೆಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಬಿ.ವೈ. ರಾಘವೇಂದ್ರ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸಲಹೆ.

(ಗೊಂದಲ)

ಅಧ್ಯಕ್ಷರು: ಬೇಡ, ನೀವು ರುಜು ಹಾಕಿರುವುದಿಲ್ಲ. ಉತ್ತರ ಹೇಳಿ. 5 ಗಂಟೆ ಆಗುತ್ತಿದೆ. ಉತ್ತರ ಹೇಳಿ.

ಶ್ರೀ ಬಿ.ವೈ. ರಾಘವೇಂದ್ರ: ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷ, ಒಂದೇ ಒಂದು ಸಲಹೆ.

ಅಧ್ಯಕ್ಷರು: ಬೇಡ ಸುಮ್ಮನಿರಿ, ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡೋಣ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮರಳಿನ ಬಗ್ಗೆ ವ್ಯಾಪಕವಾದಂತಹ ಚರ್ಚೆ ಬಹಳ ಗಂಭೀರವಾದಂತಹ ರೀತಿಯಲ್ಲಿ ನಡೆದಿದೆ. ಚರ್ಚೆಯಾಗುವ ಸಂದರ್ಭದಲ್ಲಿ ಅನೇಕ ರೀತಿಯ ಟೀಕೆ ಟಿಪ್ಪಣಿಗಳು ಬಂದಿದ್ದು, ಅದೆಲ್ಲವುಗಳನ್ನು ಕೂಡ ನಾವು ಗಮನಿಸಿದ್ದೇವೆ. ಮರಳಿನ ತೊಂದರೆ ಏಕೆಯಾಯಿತು? ಯಾರಿಂದ ಆಯಿತು? ಯಾರಿಗೆ ತೊಂದರೆಯಾಗುತ್ತಿದೆ? ಅಕ್ರಮವಾಗಿ ಮರಳಿನ ಗಣಿಗಾರಿಕೆ ನಡೆಯುತ್ತಿದೆ, ಅಕ್ರಮವಾಗಿ ಬೇರೆ ಬೇರೆ ರಾಜ್ಯಗಳಿಗೆ ಮರಳು ಹೋಗುತ್ತಿದೆಯೆನ್ನುವ ಎಲ್ಲಾ ವಿಚಾರಗಳನ್ನು ಕೇಳಿದ್ದೇನೆ. ಆದರೆ ಎಲ್ಲೋ ಒಂದು ಕಡೆ ಇಷ್ಟು ವ್ಯಾಪಕವಾಗಿ ಚರ್ಚೆಯಾಗುವ ಸಂದರ್ಭದಲ್ಲಿ ಎಲ್ಲಾ ಸದಸ್ಯರು ಭಾಗವಹಿಸುತ್ತಿರುವುದಕ್ಕೆ ಕಾರಣಗಳು ಇರಬೇಕಾಗುತ್ತದೆ. ಇದಕ್ಕೆ ಕಾರಣಗಳೇನು? ಮೂಲವೇನು ಎಂಬುದನ್ನು ಅರ್ಥಮಾಡಿಕೊಂಡು, ಇದಕ್ಕೆ ಯಾವ ರೀತಿಯಲ್ಲಿ ಪರಿಹಾರ ಕಾಣಬೇಕೆಂಬ ದಿಸೆಯಲ್ಲಿ ಹೋಗಬೇಕಾಗುತ್ತದೆ. ಒಂದು ಕಡೆ ಸಮಸ್ಯೆಯಿದ್ದು, ಅದಕ್ಕೆ ಪರಿಹಾರವೇನು? ಇದಕ್ಕೆ ಪರಿಹಾರವೆಂದರೆ ಒಂದು ಸರ್ಕಾರವಾಗಿ ಅದರ ಜವಾಬ್ದಾರಿಕೆಯನ್ನು ಯಾವ ರೀತಿ ಮಾಡಬೇಕಾಗುತ್ತದೆಂಬ ಬಗ್ಗೆ ಸಾಕಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಮರಳು ಗಣಿಗಾರಿಕೆಯ ವಿಚಾರದಲ್ಲಿ ಕೊಟ್ಟಿರತಕ್ಕಂತಹ ಸಲಹೆ ಸೂಚನೆಗಳನ್ನು ಸ್ವಾಗತ ಮಾಡುತ್ತಾ, ಈ ಸಮಸ್ಯೆ ಏಕೆ ಉದ್ಭವಿಸಿತು ಎಂಬುದೇ ಬಹಳ ಮುಖ್ಯವಾಗಿರುವ ಸಮಸ್ಯೆಯಾಗಿದೆ. 2011 ರಲ್ಲಿ ಮಾನ್ಯ ಜಗದೀಶ್‌ಶೆಟ್ಟರ್ ಅವರ ಸರ್ಕಾರ ಇಲ್ಲಿರುವಂತಹ ಸಂದರ್ಭದಲ್ಲಿ ಶ್ರೀ ಸುರೇಶ್ ಕುಮಾರ್ ಅವರಿಗೆ ಆ ವಿಚಾರ ಗೊತ್ತಿದೆ. ಮರಳು ನೀತಿಯೊಂದನ್ನು ಜಾರಿಗೆ ತಂದರು.

ಅಕ್ರಮವಾಗಿ, ಅವ್ಯಾಹಿತವಾಗಿ ನಡೆಯುತ್ತಿರುವ ಮರಳನ್ನು ತಡೆಗಟ್ಟುವುದಕ್ಕೋಸ್ಕರ ನಮ್ಮ ಅಧಿಕಾರಿಗಳೆಲ್ಲರೂ ತಮಿಳುನಾಡಿಗೆ ಹೋಗಿ ಅಲ್ಲಿ ನೋಡಿಕೊಂಡು ಬಂದು ಒಂದು rules ಅನ್ನು 2011 ರಲ್ಲಿ ಜಾರಿಗೆ ತಂದರು. 2011 ರಲ್ಲಿ rules ಮಾಡಿದಾಗ ಯಾವುದೇ ರೀತಿಯಲ್ಲೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಾಹಾಕಾರ ಕಾಣುತ್ತಿರಲಿಲ್ಲ. ಕಾಣದೇ ಇರುವುದಕ್ಕೆ ಕಾರಣವೇನು ಎಂಬುದು ಬಹಳ ಮುಖ್ಯ. 2012 ರ ಫೆಬ್ರವರಿ 27 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪನ್ನು ಕೊಡುತ್ತದೆ. Deepak Kumar Vs. State of Haryana ಎನ್ನುವುದರಲ್ಲಿ ಒಂದು judgment ನೀಡುತ್ತಾರೆ. ಅದನ್ನು ಸದನದಲ್ಲಿ ಓದುತ್ತೇನೆ. ಏಕೆಂದರೆ ನಮಗೆ ಒಂದು ಕಾನೂನು ಮಾಡುವುದಕ್ಕೆ ಎಷ್ಟು ಅಧಿಕಾರವಿದೆಯೋ, ಅಷ್ಟೇ ಅಧಿಕಾರವೂ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಇದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೊಡುವಂತಹ ತೀರ್ಪೂ ಸಹ ಈ ದೇಶದ, ಈ ನೆಲದ ಒಂದು ಕಾನೂನಾಗುತ್ತದೆ. ಅವರು ಕೊಡುವಂತಹ ಆದೇಶಗಳು ಯಾವ ರೀತಿಯಾಗಿದೆ ಎನ್ನುವುದಕ್ಕೆ ಒಟ್ಟಾರೆ ಪ್ಯಾರಾಗಳಲ್ಲಿ, ಕೆಲವೊಂದು selective para lines ಮಾತ್ರ ಓದುತ್ತೇನೆ. 'We are of the considered view that it is highly necessary to have an effective frame work of mining plan which will take care of all environmental issues and evolve a long term rational sustainable use of natural resoures base and also bio-assessment protocol. Sand mining it may be noted may have an adverse effect on bio-diversity. As a loss of habitat caused by sand mining will affect various species flora and fauna and it may also destabilize the soil structure of their river banks and often leaves isolated lands.' We find that taking note of this technical, scientific and environmental matters Ministry of Environment and Forest i.e., MOEF, Government of India issued 26 recommendations in March 2010 followed by model rules of 2010 framed by the Ministry of

Mines which has given effect inculcatıng the spirit of Article 48A, Article 51A read wıth Article 21 of the Constitution. We therefore direct all the States, Union Territories, MOEF and the Ministry of Mines to give effect to the recommendations made by the MOEF in respect of their report of 2010 and the model guidelines framed by the Ministry of Mines within a period of six months from today and submit their compliance reports. The State Governments should take immediate steps to frame rules under Section 27 and Setion 15 of the Mınes and Minerals (Development & Regulation) Act, 1957 taking into consideratıon the recommendation of the MOEF in its report dated 20th March 2010 a model guidelines framed by the Ministry of Mines under Government of India. We ın the meanwhile order that the lease of minor minerals including their renewals for an area of less than five hectares to be granted by States only after getting environmental clearances. ಈ ಸುಪ್ರೀಕೋರ್ಟಿನ ತೀರ್ಪು ಬಂದ ಮೇಲೆ ಇದರ ಮೇಲೆ ಇದು ನಡೆಯುತ್ತಿಲ್ಲವೆಂದು ಬಹಳಷ್ಟು ಜನ contempt ಕೂಡ ಹೋದರು. Contempt ಹೋದಾಗ 2013 ರಲ್ಲಿ ನಾವು Minor Mineral Concession Rules, 2013 ತಂದೆವು. ಮಾನ್ಯ ಕುಮಾರಸ್ವಾಮಿಯವರು ಮಾತನಾಡುವಾಗ ರೂಲ್ಸ್ ಬಗ್ಗೆ refer ಮಾಡಿದರು. I appreciate his line of argument ಆ ರೂಲ್ಸ್ ನಿಯಮದಂತೆ ಪಾಲನೆಯಾಗುತ್ತಿದೆಯೇ ಅಥವಾ ಇಲ್ಲವೇ? ಆಗದೇ ಇರುವುದಕ್ಕೆ ಕಾರಣಗಳೇನು? ಅದನ್ನು ಹೇಳಿ ಎಂದು ತಾವು ಒಂದು ಮಾತನ್ನು ಕೇಳಿದಿರಿ. ನಮ್ಮೆಲ್ಲರ ಚರ್ಚೆ ಯಾವ ರೀತಿ ಇರಬೇಕೆಂದರೆ, ಇವತ್ತಿನ ಈ ಕಾನೂನು ಏನಿದೆ ಆ ಕಾನೂನು ಪರಿಪಾಲನೆಯಾಗುತ್ತಿದೆಯೇ, ಇಲ್ಲವೇ? ಜನರ ಸಮಸ್ಯೆ ಏನಿದೆ, ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು? ಎನ್ನುವುದು ಮುಖ್ಯವಾದಂಥ ವಿಚಾರಗಳಾಗಿವೆ. ಆ ಹಿನ್ನೆಲೆಯಲ್ಲಿ ಒಂದು Model Guidelines for

Environmental Management of Mining of Minor Minerals ಎಂಬ ದೊಡ್ಡ guidelines ಮಾಡಿದರು. 27 recommendations were given by the Government of India. ಅದನ್ನು ಅನುಸರಿಸಿ 2013 ರಲ್ಲಿ ನಾವು ನಿಯಮಗಳನ್ನು ರಚಿಸಿದ್ದೇವೆ. ಆ ನಿಯಮಗಳನ್ನು ರಚಿಸಬೇಕಾದಾಗ ಕಾನೂನು ಇಲಾಖೆ ಅತ್ಯಂತ ಜವಾಬ್ದಾರಿಕೆಯನ್ನು ಸರ್ವೋಚ್ಚ ನ್ಯಾಯಾಲಯ ಕೊಟ್ಟಿರತಕ್ಕಂಥ judgmentನ spirit ಅನ್ನು ನಾನು ಓದಬೇಕಾದರೆ as far as environmental issues are concerned it is one of the landmark judgment in this country. ಪರಿಸರ ಹಾನಿ ಯಾವ ರೀತಿ ಆಗುತ್ತಿದೆ ಎನ್ನುವುದನ್ನು ಮರಳನ್ನು ಉದ್ದೇಶವಾಗಿ ಇಟ್ಟುಕೊಂಡು ಇವತ್ತು ಕೊಡತಕ್ಕಂಥ judgment ನಲ್ಲಿ ಪರಿಸರದ ಬಗ್ಗೆ ಬಹಳ ಕಾಳಜಿ ಇದೆ. ಈಗ ನಾವು ಏನು ಮಾಡುವುದು? ಸುಪ್ರೀಂಕೋರ್ಟ್‌ನಲ್ಲಿ ಒಂದು ಹಸಿರು ಪೀಠವೆಂದು ಮಾಡಿದ್ದಾರೆ. ಎಲ್ಲಾ ಕೇಸ್‌ಗಳನ್ನು Chief Justice of India himself will hear the cases and give direction in the interest of the environment. Environment protection is the bounden duty of the State and it is embarked in the Constitution also. ನಾವು ಅದರಿಂದ ವಾಪಸ್ಸು ಹೋಗುವುದಕ್ಕೆ ಆಗುತ್ತಿಲ್ಲ. ಅದರ ಜೊತೆಗೆ, National Green Tribunal ಎಂದು ಚೆನ್ನೈಯಲ್ಲಿ ಒಂದು ಮತ್ತು ದೆಹಲಿಯಲ್ಲಿ ಒಂದು ಹೀಗೆ ಎರಡು Green Tribunal ಇದೆ. ನಾವು ಇಲ್ಲಿ ಮಾಡತಕ್ಕಂಥ ಒಂದೊಂದು ಆದೇಶವೂ ಕೂಡ ಅಲ್ಲಿ ಪ್ರಶ್ನೆಯಾಗುತ್ತಿದೆ. ನಾನು ಒಬ್ಬ Special Counsel ಅನ್ನು ಇಟ್ಟಿದ್ದೇನೆ. ಬಂದಂಥ ಕೇಸುಗಳಿಗೆ ನೋಟಿಸ್ ತೆಗೆದುಕೊಳ್ಳುವುದು, caveat ಹಾಕುವುದು ಇದೇ ಕೆಲಸ ಆಗಿದೆ. ಈ ಮರಳಿನ ನೀತಿಯಲ್ಲಿ ಬಹಳ ಸೂಕ್ಷ್ಮವಾಗಿ ಹೇಳಬೇಕೆಂದರೆ, ನಮಗೆ Government of India guidelines ಕೊಡುತ್ತದೆ. The recommendations are minimum size of mine lease should be 5 hectares. 5 ಹೆಕ್ಟೇರ್ ಕೆಳಗಡೆ ಕೊಡುವ ಹಾಗಿಲ್ಲ.

ಅಧ್ಯಕ್ಷರು: ಹಿಂದೆ ಕೊಟ್ಟಿರುವವು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಹಿಂದೆ ಕೊಟ್ಟಿರುವವುಗಳನ್ನು ಸಹ ವಜಾ ಮಾಡಬೇಕು.

ಅಧ್ಯಕ್ಷರು: ಬೇಗ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅದನ್ನು Minimum period of mine lease should be five years. Cluster approach to mines should be taken in case of smaller mines, leases operating currently. Cluster approach ಅಂದರೆ ಒಂದೊಂದು ಎಕರೆ, ಎರೆಡರಡು ಎಕರೆ ಇದ್ದರೆ ಅವುಗಳನ್ನೆಲ್ಲ ಸೇರಿಸಿಕೊಂಡು ಕನಿಷ್ಠ 5 ಎಕರೆ ಮಾಡಿ. Mines plan should be made mandatory for all Minor Minerals.

ಅಧ್ಯಕ್ಷರು: ಇದು ಯಾವಾಗ ಬಂತು?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, 2012ರಲ್ಲಿ ಬಂದಿದೆ. Mines plan should be made mandatory for all minerals as well. A sparate corpus should be created for reclamation, rehabilitation of mined out areas. Hydro-Geological report should be prepared for mining proposed below ground water table. For River bed mining ವಿಚಾರ. ಇಡೀ ರಾಜ್ಯಕ್ಕೆ ಕೊಡುವಷ್ಟು ಮರಳು ನನ್ನ ಹತ್ತಿರ ಇದೆ ಎಂದು ಮಾನ್ಯ ಮಂಕಾಳ ವೈದ್ಯರು ಹೇಳುತ್ತಿದ್ದರು. ನಾವು ಏತಕ್ಕೆ ಮಾಡುವುದಕ್ಕೆ ಆಗುತ್ತಿಲ್ಲವೆನ್ನುವುದಕ್ಕೆ for river bed mining leases should be granted stretch wise, depth may be restricted to 3 meters, water level whichever is less and safety zones should be worked out. The present classification of minerals into major and minor categories should be reexamined by the Ministry of Mines and Minerals in consultation with the states. ಈ ತರಹ direction ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು: ಇದು implement ಆಗಿದೆಯೇ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅದನ್ನೇ ನಾನು ಹೇಳುತ್ತಿದ್ದೇನೆ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ಮರಳಿನ ಸಮಸ್ಯೆಯು ಅವರು ಇದ್ದಾಗಲೂ ಇತ್ತು. ಆದರೆ ಕೇಸ್ ಆಗುತ್ತಿರಲಿಲ್ಲ. ಹೇಗೋ ನಡೆಯುತ್ತಿತ್ತು. ನೀವು ಬಂದ ಮೇಲೆ ಮರಳು ಸಿಗುತ್ತಿಲ್ಲ, ತೊಂದರೆಯಾಗುತ್ತಿದೆ, ಕೇಸ್ ಹಾಕುತ್ತಿದ್ದಾರೆ, ಸಾವಿರಾರು ಲಾರಿಗಳು ದಾರಿಯಲ್ಲಿ ನಿಂತಿರುತ್ತವೆ, ಭ್ರಷ್ಟಾಚಾರ ನಡೆಯುತ್ತಿದೆ ಇವೆಲ್ಲಾ ಮಾತುಗಳನ್ನು ನಾವು ಕೇಳಿದ್ದೇವೆ. ಒಂದು ಅಂಕಿ-ಅಂಶಗಳನ್ನು ತಮ್ಮ ಮುಂದೆ ಇಡಬೇಕಾಗುತ್ತದೆ. 2008-09 ಮತ್ತು 2009-10 ರಲ್ಲಿ ಪರವಾನಗಿ ನೀಡಿರತಕ್ಕಂಥದ್ದು ಎಷ್ಟು ದಶಲಕ್ಷ ಮೆಟ್ರಿಕ್ ಟನ್‌ನಲ್ಲಿ ಕೊಟ್ಟಿದ್ದಾರೆಂದರೆ, 1.39. ರಾಜಧನ ಬಂದಿರುವುದು 4 ಕೋಟಿ 17 ಲಕ್ಷ. ದಂಡದಿಂದ ಬಂದಿರುವುದು 3.52 ಲಕ್ಷ. ದಾಖಲಿಸಿದ FIR ಗಳ ಸಂಖ್ಯೆ 261. ಅಲ್ಲಿಂದ ಪ್ರಾರಂಭವಾಗಿ ನಾವು ಅಧಿಕಾರಕ್ಕೆ ಬಂದ ಮೇಲೆ 2013-14 ರಲ್ಲಿ 8.35 ದಶಲಕ್ಷ ಮೆಟ್ರಿಕ್ ಟನ್‌ಗಳು ನೀಡಿರತಕ್ಕಂಥ permits. Can you imagine, 2008-09 ರಲ್ಲಿ ಏನಿತ್ತು 2013-14 ರಲ್ಲಿ ಎಷ್ಟಾಯಿತು? ಎಲ್ಲ ವರ್ಷಗಳ ಅಂಕಿ-ಅಂಶಗಳಿವೆ. ಅವುಗಳಿಗೆ ಹೇಳಲು ಹೋದರೆ ಬಹಳ ಸಮಯ ಬೇಕಾಗುತ್ತದೆ. ನಮಗೆ ರಾಜಧನ 25.7 ಲಕ್ಷ. ದಂಡ 12.66 ಲಕ್ಷ. FIR ಹಾಕಿದ್ದು 638. 638 ಕೇಸ್‌ಗಳನ್ನು ಹಾಕಿದ್ದೇವೆ. ಈ ವರ್ಷ ಸೆಪ್ಟೆಂಬರ್‌ವರೆಗೂ 2.9 ಅಂದರೆ ಹೆಚ್ಚು ಕಡಿಮೆ 3 ದಶಲಕ್ಷ ಮೆಟ್ರಿಕ್ ಟನ್. ಇಲ್ಲಿಯವರೆಗೂ ರಾಜಧನ 8.53 ಲಕ್ಷ, ದಂಡದಿಂದ ಬಂದಿರತಕ್ಕಂಥದ್ದು 11 ಕೋಟಿ. 717 ಕೇಸ್‌ಗಳನ್ನು ಹಾಕಲಾಗಿದೆ. ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೇ? 2012-13ರಲ್ಲಿ ದಂಡದ ಬಗ್ಗೆ ಬೇಡ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಪುಟ್ಟಣ್ಣಯ್ಯ ರವರೆ, ತಾವು ಮಾತನಾಡುತ್ತಿದ್ದಾಗ ನಾನು ಎಲ್ಲವನ್ನೂ ಕೇಳಿದ್ದೇನೆ. ದಯಮಾಡಿ, ತಾವು ಆಮೇಲೆ ಕೇಳಿ. ಏಕೆಂದರೆ, ನಾನು ಏನು ಹೇಳಬೇಕು ಎಂದು

ಅಂದುಕೊಂಡಿದ್ದೇನೆ ಅದು ಮರೆತುಹೋಗುತ್ತದೆ. ಕಳೆದ 2 ವರ್ಷಗಳಲ್ಲಿ ಅಕ್ರಮ ಮರಳು ಚಟುವಟಿಕೆ ವಿರುದ್ಧ ಮೊಕದಮ್ಮೆಗಳು ಹೂಡಿದಂಥ ವಿವರಣೆಗಳನ್ನು ನಾನು ಕೊಡುತ್ತೇನೆ. ವಾಹನಗಳಿಗೆ ವಿಧಿಸಿದ ದಂಡ 7.48 ಲಕ್ಷ ರೂ.ಗಳು. ದಾಖಲಿಸಿದ FIR 139. ವಾಹನಗಳಿಗೆ ಹಾಕಿದಂಥ ದಂಡದಲ್ಲಿ ಬಂದಿದ್ದು 10.48 ಲಕ್ಷ. ಕೇಸ್ ಹಾಕಿದ್ದು 365. ಅಕ್ರಮ ಮರಳು ದಾಸ್ತಾನಾಗಿದ್ದಕ್ಕೆ ನಮಗೆ ಬಂದಂಥ ದಂಡ ಎಷ್ಟೆಂದರೆ 81 ಲಕ್ಷ ರೂಪಾಯಿ, FIR 78 ಎಂದರೆ ಅಕ್ರಮವಾಗಿ ಸಂಗ್ರಹಣೆ ಮಾಡಿರುವುದರ ಮೇಲೆ, ದಾಸ್ತಾನು ಮಾಡಿರುವುದರ ಮೇಲೆ ನಮಗೆ ಬಂದಿದ್ದು 1 ಕೋಟಿ 41 ಲಕ್ಷ ರೂಪಾಯಿ ಮತ್ತು FIR ಹಾಕಿದ್ದು 33, ಫಿಲ್ಟರ್ ಮರಳು 54.19 ದಂಡ ಹಾಕಲಾಗಿದ್ದು, FIR 28, ವಿಧಿಸಿದ ದಂಡ 78 ಲಕ್ಷ, 240 ಕೇಸ್‌ಗಳನ್ನು ಹಾಕಲಾಗಿದೆ. ಈ ರೀತಿಯಾಗಿ ಅಕ್ರಮವಾಗಿ ನಡೆಯುತ್ತಿರುವುದರ ಮೇಲೆ ಎಲ್ಲಾ ರೀತಿಯಲ್ಲಿಯೂ ಕ್ರಮ ತೆಗೆದುಕೊಂಡಿದ್ದೇವೆ. ಸಾಗಾಣಿಕೆ ದಂಡ ವಿಧಿಸಿದ ವಾಹನಗಳ ಸಂಖ್ಯೆ ಎಷ್ಟೆಂದರೆ 5,193 ಲಾರಿಗಳ ಮೇಲೆ ಕೇಸ್ ಹಾಕಿದ್ದೇವೆ. ವಿಧಿಸಿದ ದಂಡ 9 ಕೋಟಿ 49 ಲಕ್ಷ ರೂಪಾಯಿಗಳು, FIR ಹಾಕಿದ್ದು 586, ಅನಧಿಕೃತ ಮರಳು ದಾಸ್ತಾನು ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ 235, ವಿಧಿಸಿದ ದಂಡ 96.16 ಲಕ್ಷ, ದಾಖಲಿಸಿದ FIRಗಳು 34, ಪತ್ತೆ ಹಚ್ಚಿದ ಫಿಲ್ಟರ್ ಮರಳಿನ ಸಂಖ್ಯೆ 162, ವಿಧಿಸಿದ ದಂಡ 2.25, FIR ದಾಖಲಿಸಿದ್ದು 97, ಅಂದರೆ ನಾವು ಯಾವುದೇ ರೀತಿಯಲ್ಲಿಯೂ ಸಹ ನಿಯಮದಲ್ಲಿ ಜಿಲ್ಲಾವಾರು ಎಲ್ಲಿ ಎಷ್ಟೆಷ್ಟು ಕೇಸ್ ಆಗಿದೆ ಎನ್ನುವ ಅಂಕಿ-ಅಂಶಗಳು ಸಹ ಇದೆ. ಇದರಲ್ಲಿ ಒಂದು ಹೇಳಬೇಕೆಂದರೆ highest number of cases filed in my district. I took personal care, 1067 ಕೇಸ್‌ಗಳನ್ನು ಹಾಕುತ್ತೇನೆ. ಚಿಕ್ಕಬಳ್ಳಾಪುರದಲ್ಲಿ 638, ಮೈಸೂರಿನಲ್ಲಿ 620, ದಕ್ಷಿಣ ಕನ್ನಡದಲ್ಲಿ 260 ಈ ರೀತಿಯಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಕ್ರಮ ತೆಗೆದುಕೊಂಡಿದ್ದೇವೆ. ನಾವು ನಿಯಮಗಳನ್ನು ಮಾಡಬೇಕಾದಾಗ ತಾಲ್ಲೂಕಿನಲ್ಲಿ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು? ಇದನ್ನು ನಮ್ಮ ನಿಯಮಗಳಲ್ಲಿ ಕೊಟ್ಟಿರುವುದು ಸುಪ್ರೀಂ ಕೋರ್ಟಿನ ಮತ್ತು Ministry of Environment & Forest (MOEF)

ಕೊಟ್ಟಿರುವ ಗೈಡ್‌ಲೈನ್ಸ್ ಅನ್ವಯ ನಾವು ಕಾನೂನನ್ನು ಮಾಡಿ Taluk level Committee, District level committee, State level committee, ಈ ರೀತಿಯಾಗಿ ಕಮಿಟಿಗಳನ್ನು ಮಾಡಿದ್ದೇವೆ. ತಾಲ್ಲೂಕು ಲೆವೆಲ್‌ನಲ್ಲಿರುವಂಥದ್ದು ತಹಸೀಲ್ದಾರ್ ಅಧಿಕಾರಿಗಳ ಜೊತೆಯಲ್ಲಿರುವಂಥ ಎಲ್ಲಾ ತಾಲ್ಲೂಕು ಅಧಿಕಾರಿಗಳು, ಮರಳು ಸಿಕ್ಕಿದಂಥ ಸಂದರ್ಭದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್‌ಗೂ ಸಹ ಕೇಸ್ ಹಾಕುವಂಥ ಅಧಿಕಾರವನ್ನು ಕೊಡುತ್ತೇವೆ. Districtನಲ್ಲಿ Deputy Commissioner is the Sand Committee Chairman, ಆಮೇಲೆ ಎಲ್ಲಾ district ಅಧಿಕಾರಿಗಳು, DFO ಇರುತ್ತಾರೆ, Mines & Geology ಯವರು ಇರುತ್ತಾರೆ. ಎಲ್ಲಾ ಅಧಿಕಾರಿಗಳು ಸಹ ಇರುತ್ತಾರೆ. ಇವರ ಪಾತ್ರವೇನೆಂದು ಹೇಳಿದರೆ ಇಲ್ಲಿ ನಮಗೆ what is mandatory is environmental clearance Environmental clearance ಆಗದೆ ನಾವು ಏನೇನನ್ನೂ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿಯೇ sand committeeಯಲ್ಲಿ ಇದುವರೆಗಾಗಿ 740 ಬ್ಲಾಕ್ಸ್‌ನ್ನು identify ಮಾಡುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: 640 blocks identify ಮಾಡಿರುವುದು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅಂಕಿ ಸಂಖ್ಯೆಯಲ್ಲಿ ಒಂದೆರಡು ಹೆಚ್ಚು ಕಡಿಮೆಯಿರುತ್ತದೆ. 640 blocksನ್ನು identify ಮಾಡುತ್ತಾರೆ. Environmental clearances ಆಗಬೇಕು, ಇದಕ್ಕೊಂದು ದೊಡ್ಡ procedure ಇದೆ. ಆ environmental clearances ಆದ ಮೇಲೆ ನಾವು next ಬರುವಂಥದ್ದು, PWDನಲ್ಲಿ ಟೆಂಡರ್ ಹಾಕಬೇಕು. ಟೆಂಡರ್ ಹಾಕಿ ಟೆಂಡರ್ ಮುಖೇನ filter sandನ್ನು mining ಮಾಡುವಂಥ ಅಧಿಕಾರವನ್ನು ಕೊಡುವುದು ಮತ್ತು ಪರ್ಮಿಟ್ ಕೊಡುವುದು PWD ವ್ಯಾಪ್ತಿಗೆ ಬರುತ್ತದೆ. ಹೀಗಾಗಿ 640 ಬ್ಲಾಕ್‌ಗಳನ್ನು ಗುರುತಿಸಿದ್ದೇವೆ. Environmental clearance ಆಗಿರುವುದು 374, ಅನುಮೋದನೆಯಾಗಿರುವಂಥ ಬ್ಲಾಕ್‌ಗಳು 215. ನಾನು ಇಷ್ಟು ಮಾತನ್ನು ಹೇಳಬೇಕಾದಾಗ ಎಷ್ಟು ಲಭ್ಯವಿದೆ, ಎಷ್ಟಾಗುತ್ತದೆ

ಎನ್ನುವುದರ ಒಂದು ಕೊರತೆ ಎಷ್ಟರಮಟ್ಟಿಗೆ ಇದೆ ಎನ್ನುವುದು, ಈಗ ನಮಗೆ ಒಂದು ವರ್ಷಕ್ಕೆ 23 ದಶಲಕ್ಷ ಮೆಟ್ರಿಕ್ ಟನ್ ಬೇಡಿಕೆ ಇದೆ, ಬರುತ್ತಿರುವಂಥದ್ದು 8.50 ಲಕ್ಷ ಮೆಟ್ರಿಕ್ ಟನ್, ಅದರಲ್ಲಿ ನಮಗೆ ಎಲ್ಲಾ ರೀತಿಯಿಂದಲೂ ಮರಳಿನಿಂದ ಸಿಗುತ್ತಿರುವುದು ಬಹಳಷ್ಟು ಕಡಿಮೆ. ಕಾರಣವೇನೆಂದರೆ 6–7 ಜಿಲ್ಲೆಗಳಲ್ಲಿ ಮರಳೇ ಇಲ್ಲ. ಅದು ನಿರಂತರವಾಗಿ 5–6 ವರ್ಷಗಳಲ್ಲಿ ಲೂಟಿಯಾಗಿ ಹೋಯಿತು. ಆಗ ಮರಳಿಗೆ ತೊಂದರೆಯಿರಲಿಲ್ಲ. ಈಗ ನಿಯಮಗಳು ಬಂದವು, ಪೊಲೀಸ್‌ನವರು ಬಂದರು, ಲೋಕಾಯುಕ್ತದವರು ಬಂದರು. ದಯವಿಟ್ಟು ನೀವು ಏನೇ ಹೇಳುವುದಿದ್ದರೂ ಆಮೇಲೆ ಹೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನೀವು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. 640 ಬಿಟ್ಟು ಬೇರೆ ಕಡೆ ಮೈನಿಂಗ್ ಆಗುತ್ತಿಲ್ಲವೇ? ಬೇರೆ ಕಡೆ ಮೈನಿಂಗ್ ಆಗುತ್ತಿರುವುದೇ ಇಲ್ಲಿ ಸಮಸ್ಯೆಯಿರುವುದು. ಅದನ್ನು ಬಿಟ್ಟು ನೀವು ಚೌಕಟ್ಟಿನಲ್ಲಿ ಮಾತನಾಡಿದರೆ . . .

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಕೊರತೆಯಿರುವುದು 17 ಲಕ್ಷದಿಂದ 18 ಲಕ್ಷ ಮೆಟ್ರಿಕ್ ಟನ್.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಬೇರೆ ಕಡೆ ಮೈನಿಂಗ್ ಆಗುತ್ತಿಲ್ಲವೇ?

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ: ಅಕ್ರಮವಾಗಿ ಹೋಗುತ್ತಿರುವ ಮರಳಿನ ಬಗ್ಗೆ ಮತ್ತು ಯಾದಗಿರಿ ಬಗ್ಗೆ ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಅವರು ಇನ್ನೂ yield ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ನಮಗೆ 2013–14ರಲ್ಲಿ, ದಯಮಾಡಿ ನಾನು ಹೇಳುವುದನ್ನು ಕೇಳಿ ನಂತರ ನೀವು ಮಾತನಾಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಡೈಲಿ ಪೇಪರ್‌ಗಳಲ್ಲಿ ಬರುತ್ತಿದೆ, ಡಿಸಿಯವರು, ತಹಸೀಲ್ದಾರ್‌ರವರು ಮರಳು ದಂಧೆಯನ್ನು ಹಿಡಿದರು ಎಂದು, ಹಾಗಾದರೆ ಇದು illegal mining ಅಲ್ಲವೇ, legal mining ಆಗಿದ್ದರೆ ಏಕೆ ಹಿಡಿಯುತ್ತಿದ್ದರು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಅವರು ಇಷ್ಟು ಹೊತ್ತು ಮಾತನಾಡಿದ್ದನ್ನು ಕೇಳಿಸಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೆ ನನಗೆ ನೀವು ಉತ್ತರ ಕೊಡುವುದಕ್ಕೆ ಹೇಳಿದ್ದೀರಿ, ನಾನು ಉತ್ತರ ಕೊಡುತ್ತಿದ್ದೇನೆ. ಅವರು clarification ಕೇಳಲಿ. ಹೋದವರ್ಷ 12 ದಶಲಕ್ಷ ಮೆಟ್ರಿಕ್ ಟನ್‌ನಷ್ಟು ಕೊರತೆಯಿದೆ. ನಾನು ಕೊರತೆಯಿಲ್ಲ ಎನ್ನುವಂಥ ಮಾತನ್ನು ಹೇಳುತ್ತಿಲ್ಲ. ಕೊರತೆಯಿದೆ. ಅದಕ್ಕೆ ಪರಿಹಾರವೇನು?

ಶ್ರೀ ಎಂ. ಸತೀಶ್ ರೆಡ್ಡಿ: ಮಾನ್ಯ ಅಧ್ಯಕ್ಷರೆ, illegal mining ನಡೆಯುತ್ತಿದೆಯೇ ಇಲ್ಲವೇ ಎಂದು ಹೇಳಲಿ. ಮತ್ತೆ ಏಕೆ ಅಷ್ಟೊಂದು ರೇಟ್ ಜಾಸ್ತಿಯಾಗಿದೆ ಎನ್ನುವುದಕ್ಕೆ ಉತ್ತರ ಹೇಳಲಿ.

ಅಧ್ಯಕ್ಷರು: ನಿಮಗೆ reply ಕೇಳಿಸಿಕೊಳ್ಳಬೇಕೇ ಅಥವಾ ಬೇಡವೇ?

ಶ್ರೀ ಟಿ.ಬಿ. ಜಯಚಂದ್ರ: ನಮಗೆ CREZ problem, Government of India ನೇರವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲಿ CRE zone ಎಂದು ಫಿಕ್ಸ್ ಮಾಡಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ದುಡ್ಡು ಕೊಟ್ಟರೆ ಕೊರತೆಯಿಲ್ಲ, ಅಂದರೆ ಇದರ ಅರ್ಥವೇನು? ಅಧಿಕ ಹಣ ಕೊಟ್ಟರೆ ಕೊರತೆಯಿಲ್ಲ. ಹೆಚ್ಚಿಗೆ ಹಣ ಕೊಟ್ಟರೆ ಕೊರತೆಯಿಲ್ಲ, ಮರಳು ಸಿಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಅಲ್ಲಿ ನಾವು ಮರಳನ್ನು ಎತ್ತುವುದಕ್ಕೆ ಬರುವುದಿಲ್ಲ. ಅದನ್ನು ಮರಳಿನ ದಿಬ್ಬ ಎಂದು ಹೇಳುತ್ತಾರೆ.

ಅಧ್ಯಕ್ಷರು: ಬೊಮ್ಮಾಯಿಯವರೆ, ಸ್ವಲ್ಪ ತಾಳ್ಮೆ ವಹಿಸಿ. ಅವರು ಉತ್ತರ ಹೇಳುವುದಕ್ಕೆ ಬಿಡಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್: ಅವರು ಉತ್ತರ ಹೇಳುತ್ತಿರುವುದೇ ಸರಿ ಇಲ್ಲ. ಇದರಲ್ಲಿ ಸತ್ಯವೇ ಇಲ್ಲ. ಹಣ ಕೊಟ್ಟರೆ ಮಾತ್ರ ಮರಳು ಸಿಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಹೇಳುವವರೆಗೆ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಹರಿಹರದಲ್ಲಿ 30,000 ರೂಪಾಯಿ ಇರುವುದು, ಅದೇ ಬೆಂಗಳೂರಿನಲ್ಲಿ 1 ಲಕ್ಷ ಏಕೆ ಆಗುತ್ತದೆ? ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ರೀತಿ interference ಆದರೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಆಯಿತು, ನೀವು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಕೊರತೆ ಇಲ್ಲ ಎನ್ನುವಂಥ ಪ್ರಶ್ನೆ ಅಲ್ಲ. ಬಹಳಷ್ಟು ಜಿಲ್ಲೆಗಳಲ್ಲಿ ಮರಳು ಸಿಗುತ್ತಿಲ್ಲ. ಆ ಜಿಲ್ಲೆಗಳಲ್ಲಿ ಬೇರೆ ಜಿಲ್ಲೆಗಳಲ್ಲಿ ಮರಳು ಸಿಕ್ಕಿದರೆ ಬರುವಂಥದ್ದು environmental issues ದೊಡ್ಡ problem ಆಗುತ್ತಿದೆ. ಇದಕ್ಕೆ ನಾವೇನು ಮಾಡಿದ್ದೇವೆಂದು ಹೇಳಿದರೆ manufactured sand ಎಂದು, M-sand ಎನ್ನುವ technologyಯನ್ನು, ಕಳೆದ ಒಂದೂವರೆ ವರ್ಷದಿಂದ ನಾವೇನು ಸುಮ್ಮನೆ ಕುಳಿತಿಲ್ಲ. ನಾವು ಎಲ್ಲಾ Indian Institute of Scienceನ ಸಹಾಯವನ್ನು ತೆಗೆದುಕೊಂಡು ಅವರ ಮುಖೇನ M-sand

ನಿಜವಾಗಿಯೂ ಕೂಡ ಒಳ್ಳೆಯದಾಗುತ್ತದೆಯೇ ಎನ್ನುವುದನ್ನು ಅರ್ಥ ಮಾಡಿಕೊಂಡು ಈಗಾಗಲೇ ನಮ್ಮ ರೂಲ್ಸ್‌ನ್ನು relax ಮಾಡಿ ನಿರಂತರ 50 ಎಕರೆವರೆಗೂ ಸಹ leases ಕೊಡುತ್ತಿದ್ದೇವೆ. ಇದರಿಂದ M-sandನ ಯೂನಿಟ್ಸ್‌ಗಳು ಇವತ್ತು ಸಾಕಷ್ಟು ಬರುತ್ತಿದೆ. ನಮಗೆ 3 ಲಕ್ಷ, ಈ ವರ್ಷ 2014–15 6 ತಿಂಗಳಿಗೇ 3 ದಶಲಕ್ಷ ಮೆಟ್ರಿಕ್ ಟನ್‌ನಷ್ಟು M-sand ಈ ವರ್ಷ supply ಆಗುತ್ತಿದೆ. ಎಲ್ಲಾ ಜಿಲ್ಲೆಯಲ್ಲಿಯೂ ಇದಕ್ಕೆ ಆಸಕ್ತಿ ವಹಿಸಿ M sandಗೋಸ್ಕರ ಬರುತ್ತಿದ್ದಾರೆ. ನಾವು ಇದಕ್ಕೆ ಉತ್ತೇಜನ ಕೊಡುವುದಕ್ಕೋಸ್ಕರ PWDನಲ್ಲಿ ಯಾವುದೇ ಕಾಮಗಾರಿಗಳಾದರೂ ಸಹ 10 ಕೋಟಿಗಿಂತ ಜಾಸ್ತಿ ಇರುವಂಥ ಎಲ್ಲಾ ಟೆಂಡರ್ ವರ್ಕ್‌ಗೂ M-sandನ್ನು ಉಪಯೋಗಿಸಬೇಕೆನ್ನುವ ರೀತಿಯಲ್ಲಿ Indian Institute of Scienceರವರು ಕೊಟ್ಟಂಥ ಸಲಹೆಯ ಆಧಾರದ ಮೇಲೆ ಈಗಾಗಲೇ ಟೆಂಡರ್‌ಗಳಲ್ಲಿ ಕೊಟ್ಟಿದ್ದೇವೆ, ಉಪಯೋಗ ಮಾಡಲು ಪ್ರಾರಂಭ ಮಾಡಿದ್ದಾರೆ. ಹೆಚ್ಚು ಹೆಚ್ಚು ಯೂನಿಟ್‌ಗಳು ಬರಬೇಕು ಎನ್ನುವುದಕ್ಕೆ ಸಹ ಕ್ರಮ ತೆಗೆದುಕೊಂಡಿದ್ದೇವೆ. ಈಗ M-sand ಎಲ್ಲಾ ಜಿಲ್ಲೆಯಲ್ಲಿಯೂ ಸಹ ಬಳಕೆಯಾಗುತ್ತಿದೆ. ಕುಮಾರಸ್ವಾಮಿಯವರು ಈಗ white quartz ಬಗ್ಗೆ ಹೇಳಿದರು. ಹೌದು, ಅದನ್ನು ಸಹ ಮರಳನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ಏಕೆ ಮರಳನ್ನಾಗಿ ಮಾಡಬಾರದು ಎನ್ನುವ ಕುರಿತು ನಿನ್ನೆ ಒಂದು ದೊಡ್ಡ ಟೀಂ ಬಂದಿದ್ದರು. ಅದಕ್ಕೂ ಸಹ ಅವಕಾಶ ಮಾಡಿದ್ದೇವೆ. ಇವತ್ತು ಮರಳು ಸಿಗದೇ demand ಜಾಸ್ತಿಯಾಗಿರುವುದರಿಂದ ನಮಗೆ supply ಮಾಡುವುದಕ್ಕೆ ಆಗುತ್ತಿಲ್ಲ. ಮರಳನ್ನು ನಿರಾಂತಕವಾಗಿ ಬಿಡಿ ಎಂದು ಹೇಳಿದರೆ ನಮಗೆ ಬರುತ್ತಿರುವ environmental issues, Supreme Court orders ಮಾಡಿರುವುದು.

ಶ್ರೀ ಎಂ. ಸತೀಶ್ ರೆಡ್ಡಿ: ಕೇರಳಾ ಹೋಗುತ್ತಿರುವುದರ ಬಗ್ಗೆ ಹೇಳಿ ಸರ್.

ಶ್ರೀ ಟಿ.ಬಿ. ಜಯಚಂದ್ರ: ನಾವು ನಿಯಮ ಮಾಡಿದ್ದೇವೆ. ನಿಯಮ ಸಡಿಲಗೊಳಿಸಲು ಹೋದರೆ ಲೋಕಯುಕ್ತದವರು ಪ್ರತಿಯೊಂದಕ್ಕೂ ಕೇಸ್ ಹಾಕುತ್ತಿದ್ದಾರೆ. ಲೋಕಾಯುಕ್ತದವರು ಕೇಸು ಹಾಕುವಾಗ ಏನು ಮಾಡುತ್ತಾರೆ, ಒಂದು FIR ನೋಡಿದರಿ. ಅದರಲ್ಲಿ ಲೋಕಾಯುಕ್ತದವರು ಯಾರ ಮೇಲೆ ಕೇಸು ಹಾಕಬೇಕು?

ಅಧ್ಯಕ್ಷರು: ಅಲ್ಲ, ನೀವೂ ಲಾಯರ್ ಇದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ: Sir, I know this problem. I have discussed with the lokayukta also. ದಯಮಾಡಿ ತಮಗೆ ಹೇಳುತ್ತೇನೆ. ಈ ವಿಚಾರವನ್ನೆಲ್ಲಾ ಅರಿತೇ ಹೇಳುತ್ತಿದ್ದೇನೆ. ಯಾವುದೇ ಕಾರಣಕ್ಕೂ ನನಗೆ ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಏನು ಮಾಡಬೇಕೆಂಬುದು ಬಹಳ ಮುಖ್ಯ. ಅದಕ್ಕೆ ಇಡೀ ಸದನದ ಸಹಕಾರ ಮುಖ್ಯವಾಗುತ್ತದೆ. ಏಕೆ ಮರಳಿನ ದರ 75,000/– 80,000/– ಆಗುತ್ತಿದೆ ಎಂದರೆ, ಈ ಕಾರಣಕ್ಕೋಸ್ಕರ. ನಾವು ಇನ್ನೂ ಕೂಡಾ ಎರಡು ಗಂಟೆಯಿಂದ ನಾಲ್ಕು ಗಂಟೆಯವರೆಗೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ಸಭೆಗೆ ಕರೆದಿದ್ದೆವು. ಆದರೆ ಇಂದಿನ ಸದನದಲ್ಲಿ ಭಾಗವಹಿಸಬೇಕಾದ್ದರಿಂದ ನಾವು ಅಲ್ಲಿ ಹೋಗಲು ಆಗಲಿಲ್ಲ. ನಾಳೆ ಸಭೆ ಮಾಡಿ ಆ ಸಮಸ್ಯೆಯನ್ನು ಬಗೆಹರಿಸುವ ಕೆಲಸವನ್ನು ನಾವು ಮಾಡೇ ಮಾಡುತ್ತೇವೆ, ಮಾಡಲೇ ಬೇಕಾಗುತ್ತದೆ. ಆ demand and supply ಅನ್ನು balance ಮಾಡಬೇಕಾದರೆ production of M-sand is the only way. ಅದಕ್ಕೆ ಪರ್ಯಾಯವಾಗಿ ಇನ್ನು ಯಾವುದೂ ಇಲ್ಲ.

ಶ್ರೀ ಅರವಿಂದ ಲಿಂಬಾವಳಿ: ಅದಕ್ಕೆ raw material ಬೇಕಲ್ಲ. ಅದಕ್ಕೆ permission ಇಲ್ಲವಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಜಲ್ಲಿ ಇದೆಯಲ್ಲ . .

ಶ್ರೀ ಚಂದ್ರಕಾಂತ್ ಅರವಿಂದ ಬೆಲ್ಲದ್: ಜಲ್ಲಿ ಕ್ರಷರ್ ಮಾಡಲು ಬಿಡುತ್ತಿಲ್ಲ, ಎಲ್ಲವೂ ಬಂದ್ ಆಗಿದೆ.

ಅಧ್ಯಕ್ಷರು: ನೀವು ಇದರ ಹಿನ್ನೆಲೆ ಮತ್ತು ಇವತ್ತಿನ ಆಡಳಿತ ಇವೆಲ್ಲವನ್ನೂ ಸೂಕ್ಷ್ಮವಾಗಿ, ಸ್ಪಷ್ಟವಾಗಿ ಹೇಳಿದ್ದೀರಿ, ಒಳ್ಳೆಯದು. ಇಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ನಿಮ್ಮ ನಿಯಮಾವಳಿ ಪ್ರಕಾರ ಪ್ರತಿ ಜಿಲ್ಲೆಯಲ್ಲಿ ಏನು ರಚನೆ ಮಾಡಬೇಕು ಅದನ್ನು ಮಾಡಿಲ್ಲ. ಎಲ್ಲಿ ಗೇಟ್ ಹಾಕಬೇಕು, ಅಲ್ಲಿ ಗೇಟ್ ಹಾಕಿಲ್ಲ.

(ಗೊಂದಲ)

ಶ್ರೀ ಎಂ. ಸತೀಶ್ ರೆಡ್ಡಿ: ಕೇರಳಕ್ಕೆ ಹೋಗುತ್ತಿದೆ.

ಅಧ್ಯಕ್ಷರು: ನಾನು ಮಾತನಾಡಿದ ನಂತರ ಏನಾದರೂ ಬಿಟ್ಟು ಹೋಗಿದ್ದರೆ ಹೇಳಿ. ಸಣ್ಣ ಊರಿನಲ್ಲಿ ಮನೆಗಳನ್ನು, ಶಾಲೆಗಳನ್ನು ಕಟ್ಟಲು ತೊಂದರೆ ಇದೆ. ಶಿವಲಿಂಗೇಗೌಡರು ಹೇಳಿದಂತೆ ಕೆರೆ ತೆಗೆಯುವುದಕ್ಕೆ ನಮಗೆ ತೊಂದರೆ ಕೊಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಎಲ್ಲವು ನಮ್ಮ ಗಮನದಲ್ಲಿದೆ. ಟ್ರಾಕ್ಟರ್‌ಗಳಲ್ಲಿ ಮರಳು ತೆಗದುಕೊಂಡು ಹೋಗಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಾವು ಯಾವುದೇ ರೀತಿಯ ತೊಂದರೆ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ಸೂಚನೆ ಕೊಟ್ಟಾಗಲೂ ಕೂಡಾ

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಹಾಗೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಹೊರಡಿಸಿ.

ಅಧ್ಯಕ್ಷರು: ಒಂದು ನಿಮಿಷ ತಡೆಯಿರಿ. ಎಲ್ಲಾ ಶಾಸಕರುಗಳ concern ಅರ್ಥ ಮಾಡಿಕೊಂಡು ಹಳ್ಳಿ ಜನರಿಗೆ, ಸಣ್ಣ-ಪುಟ್ಟ ಜನರಿಗೆ ಮನೆ

ಕಟ್ಟಿಕೊಳ್ಳುವುದಕ್ಕೆ, ಶಾಲೆಗಳನ್ನು ಕಟ್ಟಿಕೊಳ್ಳುವುದಕ್ಕೆ ಯಾವುದೇ ತೊಂದರೆ ಆಗದಂತೆ ಹೊಸ guidelines ಮಾಡಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಸಚಿವರೆ, ದಯಮಾಡಿ ಹಾಗೆಂದು ತಾವು ಜಿಲ್ಲಾಧಿಕಾರಗಳಿಗೆ ಒಂದು ಆದೇಶ ಕಳುಹಿಸಿಕೊಡಿ. ಅವರು ಅಲ್ಲಿ ಒಪ್ಪುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದರಿಂದ developmental works ಗೆ ಎಷ್ಟು ತೊಂದರೆಯಾಗಿದೆ ಎಂದರೆ, ನಮ್ಮ ಎಲ್ಲಾ ಟೆಂಡರ್‌ಗಳಲ್ಲಿ ಎಸ್.ಆರ್ ಗಿಂತ 20%, 22% ಜಾಸ್ತಿಯಾಗುತ್ತಿದೆ. ಕಾರಣ ಏನೆಂದರೆ, ನಮಗೆ ಒಂದು ಕಡೆ ಮರಳು ಸಿಗುತ್ತಿಲ್ಲ, ಇನ್ನೊಂದು ಕಡೆ ಜಲ್ಲಿ ಸಿಗುತ್ತಿಲ್ಲ. ಇವತ್ತು ಮರಳು, ಜಲ್ಲಿ ಸಿಗದೆ ಇರುವುದಕ್ಕ ಈ ರೀತಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮರಳು ಸಿಗುವುದಿಲ್ಲ. ಜಲ್ಲಿ ಸಿಗುವುದಿಲ್ಲ ಎಂದು ಹೇಳುವವರ್‍ಯಾರು? ನೀವು ಸರ್ಕಾರದವರೇ ಹೀಗೆ ಹೇಳಿದರೆ scarcity ಇನ್ನೂ ಜಾಸ್ತಿಯಾಗುತ್ತದೆ, ಬೆಲೆ ಜಾಸ್ತಿಯಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸರ್ಕಾರ ತನ್ನ ಜವಾಬ್ದಾರಿ ಏನೆಂದು ಅರ್ಥ ಮಾಡಿಕೊಂಡಿದೆ. ಉತ್ತರ ಕೊಡುವುದಕ್ಕೂ ಶಕ್ತಿ ಇದೆ. ನಿಯಂತ್ರಣ ಮಾಡುವುದಕ್ಕೂ ಶಕ್ತಿ ಇದೆ. ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಅರವಿಂದ ಲಿಂಬಾವಳಿ: ಎಲ್ಲಿ ನಿಯಂತ್ರಣ ಮಾಡಿದ್ದೀರಿ ಸರ್?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾರಣ ಹೇಳಿಕೊಂಡು ಕುಳಿತುಕೊಂಡರೆ, ಹಳೆ ಸರ್ಕಾರ ಎಂದು ಹೇಳಿಕೊಂಡು ಐದು ವರ್ಷದಿಂದಲೂ ಹಾಗೆ ಹೇಳಿಕೊಂಡು ಕುಳಿತರೆ?

ಶ್ರೀ ಜಗದೀಶ ಶೆಟ್ಟರ್: ಬೇಕಾದರೆ ಹಿಂದಿನ ರೆಕಾರ್ಡ್ ತೆಗೆದು ನೋಡಿ ನೀವು. ಕಳೆದ ಬಾರಿಯೂ ಇದನ್ನೇ ಹೇಳಿದರು.

(ಗೊಂದಲ)

ಅಧ್ಯಕ್ಷರು: ಉತ್ತರ ಹೇಳಿದ ನಂತರ ಕಡೆಗೆ ಕೇಳಿ.

ಶ್ರೀ ಎಂ. ಸತೀಶ್ ರೆಡ್ಡಿ: ಕೇರಳಕ್ಕೆ ಹೋಗುತ್ತಿರುವ ಮರಳಿನ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ರೀತಿಯಾದರೆ ನನಗೆ ಉತ್ತರ ಕೊಡಲು ಕಷ್ಟವಾಗುತ್ತದೆ. ನಾವು ಸಣ್ಣ–ಪುಟ್ಟವರಿಗೆ ತೊಂದರೆ ಕೊಡಬೇಕೆಂಬ ಪ್ರಶ್ನೆಯಲ್ಲ. ಆದರೆ, ಪರೋಕ್ಷವಾಗಿ ಅದನ್ನು ಒಂದು ಸಾಧನವನ್ನಾಗಿ ಅಕ್ರಮ ಗಣಿಗಾರಿಕೆಗೆ ಉಪಯೋಗ ಮಾಡುತ್ತಿದ್ದಾರೆಂಬ ಹಿನ್ನೆಲೆಯಲ್ಲಿ ಕೆಲವು ಕಡೆ ತೊಂದರೆಯಾಗುತ್ತಿರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಅದನ್ನು ಬಗೆಹರಿಸಬೇಕಾದಾಗ ಪರ್ಯಾಯವಾಗಿ ನಮ್ಮ ಮುಂದೆ ಇರುವುದು ಎಂದರೆ ನಾವು ನಿಯಮಗಳನ್ನು ಪಾಲಿಸಲೇ ಬೇಕು. ಯಾವ ರೀತಿ ಎಂದರೆ, ಕೆರೆಗಳು ಖಾಲಿಯಾಗಿವೆ, ಕೆರೆಗಳಲ್ಲಿ ನೀರು ಬತ್ತಿ ಹೋಗಿದೆ, ನಿಜ. ಅದಕ್ಕೆ ನನ್ನ ಜಿಲ್ಲೆ, ನನ್ನ ಕ್ಷೇತ್ರವೂ ಕೂಡಾ ತುತ್ತಾಗಿದೆ. ಇಡೀ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಅವ್ಯಾಹತವಾಗಿ ಮರಳು ನಿರಂತರವಾಗಿ ಲೂಟಿಯಾಗಿರುವುದೇ ಇದಕ್ಕೆ ಕಾರಣವಾಗಿದೆ. ಮರಳಿನಲ್ಲಿ ಒಂದು ರೀತಿಯ sponge action ಇರುತ್ತದೆ. ನೀರನ್ನು ಹಿಡಿದು ಇಡುತ್ತದೆ. ಆದರೆ, ಇಂದು ಕೆರೆಗಳಲ್ಲಿ ಮರಳು ಇಲ್ಲದೆ ಇರುವುದರಿಂದ ನೀರಿಲ್ಲ, ಹೀಗಾಗಿ ತೋಟಗಳೆಲ್ಲಾ ಒಣಗಿ ಹೋಗಿವೆ. ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ. ಇವತ್ತು ನೂರಾರು ಹಳ್ಳಿಗಳಿಗೆ ನಾವು ಟ್ಯಾಂಕರ್ ಮೂಲಕ ಕುಡಿಯುವ ನೀರು ಕೊಡುತ್ತಿರುವ ಪರಿಸ್ಥಿತಿ ನೋಡುತ್ತಿದ್ದೇವೆ. ಆ ಕಾರಣಕ್ಕೋಸ್ಕರ ಚೆಕ್ ಪೋಸ್ಟ್ ಹಾಕಿ day and night

ಮಾಡಿ, ಒಂದೇ ಒಂದು ಮರಳಿನ ಕಾಳು ಆಚೆ ಹೋಗಬಾರದೆಂದು ನಿಯಂತ್ರಣ ಮಾಡಿದ್ದೇವೆ.

ಶ್ರೀ ಎಂ. ಸತೀಶ್ ರೆಡ್ಡಿ: Sir, ಕೇರಳಕ್ಕೆ ಹೋಗುತ್ತಿರುವುದು entry ನೇ ಆಗುತ್ತಿಲ್ಲವಲ್ಲ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕಳ್ಳದಾರಿಗಳು ಬೇಕಾದಷ್ಟಿವೆ. ರಾಮನ ದಾರಿ ಬಹಳ ಕಡಿಮೆ. ಎಲ್ಲಾ ಕಡೆಯೂ ಚೆಕ್‌ಪೋಸ್ಟ್ ಹಾಕಬೇಕೆಂಬ ರೀತಿಯಲ್ಲಿ forest check post, mining check post ಎಲ್ಲವೂ ಸೇರಿ ಒಂದೇ check post ಹಾಕಬೇಕೆಂದು cabinetನಲ್ಲಿ ತೀರ್ಮಾನ ತೆಗೆದುಕೊಂಡು ಈಗಾಗಲೇ ಚೆಕ್ ಪೋಸ್ಟ್ ಮಾಡಿದ್ದೇವೆ. ನಾನು ಮೊನ್ನೆ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಚೆಕ್ ಪೋಸ್ಟ್ ಅನ್ನು ಕೂಡಾ ಉದ್ಘಾಟನೆ ಮಾಡಿ ಬಂದಿದ್ದೇನೆ. ನಿಯಮದ ಪ್ರಕಾರ ಯಾವುದೇ ರೀತಿಯಲ್ಲಿಯೂ compromise ಇಲ್ಲದಂತೆ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತಿದ್ದೇವೆ. ಆದರೆ ಎಲ್ಲೋ ಒಂದು ಕಡೆ demand and supply ಯನ್ನು match ಮಾಡುವುದಕ್ಕೆ ಆಗದಂತಹ ಪರಿಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಇದ್ದೇ ಇರುತ್ತದೆ. ಇದಕ್ಕೆ ಒಂದು ಸಭೆ ಇವತ್ತು ಕರೆದಿದ್ದೇವೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲಿ ನದಿ ತೀರದಲ್ಲಿ ಬೇಕಾದಷ್ಟು ಮರಳಿದೆ. ಆದರೆ ನಮಗೆ ಬಂದಿರುವುದು ಏನೆಂದರೆ, machinery use ಮಾಡಬೇಡಿ ಎಂದು Supreme Court ನವರು ಹೇಳುತ್ತಾರೆ. Machinery ಉಪಯೋಗಿಸುವಂತಿಲ್ಲ, ಅದು ಮೂರು ಮೀಟರ್ ಆಳಕ್ಕೆ ಹೋಗುವಂತಿಲ್ಲ. ಅದು ಹೋದರೆ ಕಷ್ಟವಾಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಜಯಚಂದ್ರ ರವರೆ, ನಾವು ಬಹಳ ತಾಳ್ಮೆಯಿಂದ ಕೇಳುತ್ತಿದ್ದೇವೆ. ಇದೊಂದು ಕೋರ್ಟ್ ಇದ್ದಂತೆ, ತಾವು ನ್ಯಾಯಾಧೀಶರು. ಒಂದು dispute ಅನ್ನು ಅವರು ರೈಸ್ ಮಾಡಿದ್ದಾರೆ. Issues frame ಮಾಡಿದ್ದೀರಿ. Each issue should be answered by the minister. ಈ issue ಗೆ ಇದು reply, ಈ issueಗೆ ಇದು reply ಎಂದು ತಾವು defend ಮಾಡುತ್ತಿದ್ದೀರಿ. ತಾವು ಎಲ್ಲವನ್ನೂ ಬಿಡಿ. Supreme Court

cannot give executive orders. Either Magistrate Court or Munsiff Court or Supreme Court, policy matters ಮೇಲೆ constitutional frame workನಲ್ಲಿ ಇಲ್ಲದಿದ್ದರೆ they can struck down. They cannot give executive orders. ಮಾಡುತ್ತಿದ್ದರೆ ನಾವು question ಮಾಡಬೇಕಾಗುತ್ತದೆ. No court has the competence. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ತಾವು ಕುಳಿತುಕೊಳ್ಳಿ ಜಯಚಂದ್ರರವರೆ, according to your own admission, you have done well. ನೀವು ಅಧಿಕಾರಕ್ಕೆ ಬಂದ ಮೇಲೆ ಮೊದಲು ಇದ್ದ ರೆವಿನ್ಯೂಗಿಂತಲೂ ಜಾಸ್ತಿ ಮಾಡಿದ್ದೀರಿ. ಅಂದರೆ ಅದರ ಅರ್ಥ ಏನು? ಮೊದಲು ಸೋರಿಕೆಯಾಗುತ್ತಿತ್ತು. ನೀವು ಬಂದ ಮೇಲೆ ಸೋರಿಕೆಯನ್ನು ತಡೆಗಟ್ಟಲು ಸ್ವಲ್ಪ ಪ್ರಯತ್ನ ಮಾಡಿದ್ದೀರಿ, ಅದು ಜಾಸ್ತಿ ಆಯಿತು ಎಂದು. ಒಟ್ಟಾರೆ ಸತ್ಯ ಏನು? ಸೋರಿಕೆ ಆಗುತ್ತಿದ್ದುದು ನಿಜ ಎನ್ನುವುದು establish ಆಯಿತು. ಅವರು ಹೇಳುವುದು, ನಮ್ಮ ಮನಸ್ಸಿಗಲ್ಲ ನೀವು ಮಾಡಿರುವ ಪ್ರಯತ್ನ ಸಾಲದು. ಇನ್ನೂ ಸೋರಿಕೆಯಾಗುತ್ತಲೇ ಇದೆ. ಅದನ್ನು ನಿಲ್ಲಿಸಬೇಕು. ನೀವೇನು ಸ್ವಲ್ಪ ಜಾಸ್ತಿ ಮಾಡಿದ್ದೀರಿ, ಅದು ಸಾಕಾಗುತ್ತಿಲ್ಲ. ಇನ್ನೂ ಕೂಡಾ ಆಗುತ್ತಿದೆ. ನೀವೇ ಏನು ಹೇಳುತ್ತೀರಿ, ಎಸ್.ಆರ್ ರೇಟ್ 20% ಜಾಸ್ತಿ ಎಂದು ಅಂದರೆ admittedly shortage ಇದೆ ಎಂದು. Figures ನಲ್ಲಿ ನೀವೇನು ಹೇಳುತ್ತೀರಿ? 8.5 ದಶಲಕ್ಷ ಟನ್ ನಾವು ಉತ್ಪಾದನೆ ಮಾಡುತ್ತಿದ್ದೇವೆ, ನಮ್ಮ ಬೇಡಿಕೆ ಇರುವುದು 23 ದಶಲಕ್ಷ ಟನ್. ಅದನ್ನೇ ಎಲ್ಲಾ ಸದಸ್ಯರು ಹೇಳಿದ್ದು, ಇದರಲ್ಲಿ ಪಕ್ಷ-ಪಂಗಡ ಏನೂ ಇರುವುದಿಲ್ಲ. ನಮ್ಮಲ್ಲಿ demand ಜಾಸ್ತಿ ಇದೆ, ಹೊರಗೆ ಬರುತ್ತಿರುವುದು ಕಡಿಮೆ ಇದೆ. ಇದನ್ನೇ ನಾವು scarcity ಎಂದು ಹೇಳುವುದು. ಇದು genuine scarcity ನಾ, artificial scarcity ನಾ? ಎಲ್ಲ ಸದಸ್ಯರ complaint ಏನೆಂದರೆ, ಇದು artificial scarcity. ನಮ್ಮ lack of inertia energy, ಕಡಿಮೆಯಾಗಿರುವುದರಿಂದ, ಬಂದೋಬಸ್ತ್ ಕಡಿಮೆಯಾಗಿರುವುದರಿಂದ vigilance ಕಡಿಮೆಯಾಗಿರುವುದರಿಂದ ಕಳ್ಳತನ ಆಗುತ್ತಿದೆ, ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ನೀವು Ministry of Environment and Forest ರವರು

ಹೇಳಿದಂತೆ guidelines ಮಾಡುವುದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ನಮ್ಮ specific query ಏನೆಂದರೆ ನಿಮಗೆ ಏನು guidelines ಬಂತು, ಅದರ ಪ್ರಕಾರ guidelines frame ಮಾಡಿದ್ದೀರಾ? Rules issue ಮಾಡಿದ್ದೀರಾ? ಎಲ್ಲಾ ಜಿಲ್ಲೆಯೊಳಗೆ ನೀವು sand area ವನ್ನು mark ಮಾಡಿದ್ದೀರಾ? Leases ಕೊಟ್ಟಿದ್ದೀರಾ? Production ಎಷ್ಟು ಬರುತ್ತಿದೆ? ಏಕೆ ಕೊಟ್ಟಿಲ್ಲ, ಏಕೆ production ಆಗುತ್ತಿಲ್ಲ? ಎಷ್ಟು production ಆಗುತ್ತಿದೆ, ಎಷ್ಟು ಹೋಗುತ್ತಿದೆ? ಅದರ ಮೇಲೆ ನಿಮ್ಮ ನಿಯಂತ್ರಣ ಇದೆಯೇ? ಇಲ್ಲ. So, ಕಳ್ಳತನ ಆಗುತ್ತಿದೆ ಎಂದರೆ, smuggling ಎಂದರೆ it is a criminal offence ಸರ್ಕಾರ alert ಆಗಬೇಕು. ಇದೇನು complaint ಅಲ್ಲ. ನೋಡಿ, ನೀವೇ ಕೊಡುವ figures ಪ್ರಕಾರ ನಿಮ್ಮ admission ಪ್ರಕಾರ there is lacuna. ಅದರಿಂದ we should overcome. You have done well. Initially, ನೀವು ಬಂದ ತಕ್ಷಣ ಜಾಸ್ತಿಯಾಗಿದೆ. ಅದನ್ನು ಇನ್ನಷ್ಟು ಜಾಸ್ತಿ ಮಾಡಬೇಕು. ಇಲ್ಲದೇ ಹೋದರೆ, ಕಳ್ಳತನವನ್ನು ಕಡಿಮೆ ಮಾಡಿದ್ದೇವೆಂದರೆ, ನಿಮಗೇನೂ ಕ್ರೆಡಿಟ್ ಬರುವುದಿಲ್ಲ. Usually, ಇಲ್ಲಿ ಒಂದು ಸಾರಿ ರೈತರ ಮೇಲೆ ಗಲಾಟೆಯಾದಾಗ, series of Golibars ಆದವು. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದರು, ಒಬ್ಬ ಅಧಿಕಾರಿ ಗುಂಡೂರಾವ್ ಅವರಿಗೆ ಒಂದು ನೋಟ್ ಕೊಟ್ಟರು, ಗುಂಡೂರಾವ್ ಅವರು ಹೇಳಿದರು, ಕೊಯಮತ್ತೂರಿನಲ್ಲಿ AIADMK ಸರ್ಕಾರವಿದ್ದಾಗ MGR Chief Minister ಆಗಿದ್ದಾಗ 19 ಜನ ಸತ್ತು ಹೋದರು. ಮತ್ತೆ ಚುನಾವಣೆಯಾದಾಗ MGR ಅದ್ಭುತವಾದ ಮೆಜಾರಿಟಿಯಲ್ಲಿ ಗೆದ್ದರು ಎಂದರು can that be the logic? That should never be the logic. ಅಧಿಕಾರಿಗಳು ಇರುವುದೇ ಈ ಅಂಕಿಅಂಶಗಳನ್ನು ಕೊಡುವುದಕ್ಕೆ ನಾವು ಅದನ್ನು ಬದಿಗಿಟ್ಟುಕೊಳ್ಳಬೇಕು, you can quote that. As Government, you have done better. you can quote that. As Government, you have done better. You deserve our compliments. But, that is not enough. ನಿಮ್ಮದೇ admission ಪ್ರಕಾರ ಸೋರಿಕೆಯಾಗುತ್ತಿತ್ತು. ಈಗ ಆದಾಯ ಹೆಚ್ಚು ಆಗಿದೆ, ಹೆಚ್ಚಾಗಿರುವುದು

satisfy ಮಾಡುವುದಕ್ಕಾಗಿದೆಯೇ ಹೊರತು ನಿಜವಾಗಲೂ ಆಗಿಲ್ಲ, ಇನ್ನೂ ಆಗಬೇಕು. So, please give your reply, ಎಲ್ಲಾ ಜಿಲ್ಲೆಗಳಲ್ಲಿ ಏನು arrangement ಮಾಡಿದ್ದೀರಿ, ಎಷ್ಟು productionಗೆ ವ್ಯವಸ್ಥೆ ಮಾಡಿದ್ದೀರಿ, ಎಷ್ಟು ದಿವಸಗಳಲ್ಲಿ ಈ shortage ಅನ್ನು overcome ಮಾಡುತ್ತೀರಿ? ಆಮೇಲೆ ನೀವು ಜನರಲ್ಕೈಸ್ ಮಾಡಿ. ಚಿಕ್ಕನಾಯಕನ ಹಳ್ಳಿಯಲ್ಲಿ ಚೆಕ್ ಪೋಸ್ಟ್ ಅನ್ನು ಉದ್ಘಾಟನೆ ಮಾಡುವುದಕ್ಕೆ ಹೋಗಿದ್ದೆ ಎಂದರೆ, ನಾನು ಈ ತರಹದ ಉದ್ಘಾಟನೆಯನ್ನು ಎಲ್ಲೂ ಕೇಳೇ ಇಲ್ಲ, ಚೆಕ್ ಪೋಸ್ಟ್ ಉದ್ಘಾಟನೆಗೆ Cabinet Minister ಹೋಗುತ್ತಾರಾ?

ಶ್ರೀ ಟಿ.ಬಿ. ಜಯಚಂದ್ರ: ನನಗೂ ಅರ್ಥವಾಗುತ್ತದೆ ಬಿಡಿ.

ಅಧ್ಯಕ್ಷರು: ಅದರ ಜೊತೆಗೆ ಐನೂರು ಚಿಲ್ಲರೆ ಬ್ಲಾಕ್‌ಗಳನ್ನು ಮಾಡಬೇಕೆಂದಿತ್ತು, ಆದರೆ ನೀವು ಇನ್ನೂರು ಚಿಲ್ಲರೆ ಬ್ಲಾಕ್‌ಗಳನ್ನೇನೋ ಮಾಡಿದ್ದೀರಿ, ಪೂರ್ತಿ ಮಾಡಿ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಆಗಲೇ ಹೇಳಿದೆ, ಆಂಧ್ರ ಪ್ರದೇಶದ್ದು ಅಲ್ಲಿ ಪಾಲಿಸಿ ಏನು ಮಾಡಿದ್ದಾರೆ, ಇವತ್ತು ಅಲ್ಲಿ royalty ₹ 4,000 crores ಬರುತ್ತಿದೆ, ಒಂದು ವರ್ಷಕ್ಕೆ ನಿರೀಕ್ಷೆ ಮಾಡುತ್ತಿದ್ದಾರೆ. ನಾನು ಆಗಲೇ ರೆಫರ್ ಮಾಡಿದೆ ಇಲ್ಲಿ ಇಲ್ಲಿಯವರೆಗೆ 500 ಕೋಟಿ ರೂ. ಆಗಿರುವುದು, 15 ಕೋಟಿ ಫೈನ್ ಇಲ್ಲಿಯವರೆಗೆ ಬಂದದ್ದು 501 ಕೋಟಿ.

ಅಧ್ಯಕ್ಷರು: ಹೋದ ಸಾರಿ 24 ಏನೋ ಆಗಿದೆ.

ಶ್ರೀ ಜಗದೀಶ ಶೆಟ್ಟರ್: ಈ 6–7 ವರ್ಷದ್ದೆಲ್ಲಾ ಕೂಡಿ ಇಲ್ಲಿಯವರೆಗೆ 500 ಕೋಟಿ ಬಂದಿದೆ. ಇಲ್ಲೇ ಹಿಂದೂ ದಿನಪತ್ರಿಕೆಯಲ್ಲಿ ಬಂದಿದೆ.

"Andhra Pradesh's new model for sale of sand for construction is expected to fetch over ₹ 4,000 crore this year according to the economic advisor to the State Government, Kutumbarao.

This could be one amongst the new revenue sources besides sale of Red Sander logs in the international market which would fetch another ₹ 2,000 crore per annum. Given the financial situation or in the budget.

The Andhra Pradesh Mineral Development Corporation has submitted a detailed report to the Government. As per the report, the current consumption of sand in the State is pegged at 375 lakh tonnes per annum. The consumtion is likely to go up multiple times with a massive projects such as construction of capital city, smart cities and Polavaram project etc. However, the sand mining potential from river beds and over 100 reservoirs in the State would surpass the requirement.

Taking the environmental concerns into account in certain sensitive regions, the State Government has proposed to set up ten sand manufacturing units with subsidy backup by 2017. These units will have a potential to produce 125 lakh tonnes of sand per annum according to the report".

ನೀವೇನು ಹೇಳಿದರಲ್ಲಾ, ಅವರ expectation ₹ 4,000 crores. ನಾವು ಇಲ್ಲಿಯವರೆಗೆ ಮಾಡಿದ್ದು 501 ಕೋಟಿ, ಅದಕ್ಕೆ ಇದು ಎಲ್ಲಿ ಹೋಗುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ನನ್ನ ಪ್ರಕಾರ ಇದು artificial scarcity.

ಶ್ರೀ ಟಿ.ಬಿ. ಜಯಚಂದ್ರ: ನಮ್ಮ ಚೆಲುವರಾಯಸ್ವಾಮಿಯವರು, ನಮಗೆ ಮರಳು ಸಿಗುವಂತೆ ಮಾಡಿ ಏನಾದರು ಮಾಡಿಕೊಳ್ಳಿ ಎಂದು ಒಂದು ಮಾತನ್ನು ಹೇಳಿದರು. ನಾವೇನಾದರು at the cost of environment ಇದೆಲ್ಲವನ್ನೂ ಬದಿಗಿಟ್ಟು ಬಿಟ್ಟರೆ, ಯಾವ ಹಾಹಾಕಾರನೂ ಇರುವುದಿಲ್ಲ,

ನಿಂತು ಹೋಗಿಬಿಡುತ್ತದೆ. ನಾವು ಸರ್ಕಾರವಾದ ಮೇಲೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಹೋದ ಮೇಲೆ ಕೊರತೆ ಇದೆ ಎಂದು ಗೊತ್ತಾಗಿರುವುದು. M-sand ಎನ್ನುವುದಕ್ಕೆ ನಾವು 54ಕ್ಕೆ license ಕೊಟ್ಟಿದ್ದೇವೆ, ಆಂಧ್ರ ಪ್ರದೇಶದಲ್ಲಿ 10ಕ್ಕೆ ಕೊಟ್ಟಿದ್ದರೆ ನಾವು 54ಕ್ಕೆ ಕೊಟ್ಟಿದ್ದೇವೆ. ನಾವು ಆಂಧ್ರ ಗಡಿ ಭಾಗದಲ್ಲಿರುವುದರಿಂದ ಅಲ್ಲಿ ಏನು ನಡೆಯುತ್ತಿದೆ ಎನ್ನುವುದು ನಮಗೂ ಗೊತ್ತಾಗುತ್ತಿದೆ. ಇವತ್ತು developmental works ವಿಚಾರ. ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಒಂದು ತೀರ್ಮಾನವನ್ನು ಕೊಡುತ್ತಾರೆ, "Bombay-Delhi corridor is stopped because of sand" ಎಂದು Attorney General ಹೇಳಿದಾಗ, ಅಲ್ಲಿ ಏನು ಹೇಳುತ್ತಾರೆಂದರೆ, "At the cost of environment anything may stop". Environmentಗೆ ತೊಂದರೆಯಾಗಬಾರದೆಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಈ ರೀತಿ ಇರಬೇಕಾದಾಗ ಇಡೀ ದೇಶದಲ್ಲೇ ತೊಂದರೆಯಾಗಿರುವುದು. ನಾನು ಮಾನ್ಯ ಎಲ್ಲಾ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಳ್ಳುತ್ತೇನೆ. ಸರ್ಕಾರ ಯಾವುದೇ ರೀತಿಯಲ್ಲಾದರೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡುವ ಕೆಲಸವನ್ನು ಮಾಡುತ್ತದೆ. ಈಗಾಗಲೇ men and material shortage ಇದೆ. ಅದೂ ಕೂಡ ಜಾಸ್ತಿಯಾಗುವ ಕೆಲಸ ಮಾಡಿ, fresh ಆಗಿ control ಮಾಡುವುದು, rules regulate ಮಾಡುವುದು, ಎಲ್ಲಾ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ, ಇವತ್ತು ವಿಶ್ವಾಸ ಇಡಬಹುದು. ತೊಂದರೆಯಾಗಿಲ್ಲವೆಂದಲ್ಲ, development hamper ಆಗಿದೆ ಎನ್ನುವ ಮಾತನ್ನು ನಾನೂ ಒಪ್ಪುತ್ತಿದ್ದೇನೆ, ಇವತ್ತು ಅನುಭವದಲ್ಲಿ ನೋಡುತ್ತಿದ್ದೇವೆ. ಹಾಗಾಗಿ ಇವತ್ತು ಸರ್ಕಾರದ್ದು ಈ ರೀತಿಯಾದಾಗ ಖಾಸಗಿಯವರಿಗೆ ಕೊಡುವುದಕ್ಕೆ ಇನ್ನೂ ತೊಂದರೆಯಾಗುತ್ತಿದೆ. ಇವತ್ತು ಪ್ರತಿ ವರ್ಷವೂ ಕೂಡ demand increase ಆಗುತ್ತಿದೆ. ಅಷ್ಟಕ್ಕೇ supply ಕೊಡುವುದಕ್ಕೆ ಯಾವುದೇ ರೀತಿಯಲ್ಲೂ ಪರ್ಯಾಯ ಇಲ್ಲ, ಸದ್ಯಕ್ಕೆ M-sand ಒಂದೇ ಇರುವುದು. It is totally proved ಅದನ್ನು ಹೆಚ್ಚು ಮಾಡಿ ಈ ಸಮಸ್ಯೆಯನ್ನು ನೀಗಿಸುವುದಕ್ಕೆಲ್ಲಾ ಪ್ರಯತ್ನವನ್ನೂ ಕೂಡ ಮಾಡುತ್ತೇವೆ. ಮತ್ತೆ ನಾವು ಈಗ

ಗುರುತಿಸಿರುವ ತಾಲ್ಲೂಕುಗಳಲ್ಲಿ, ಏನು ಗುರುತಿಸಿದ್ದೇವೆ? ಈಗಾಗಲೇ work ಶುರು ಮಾಡಿರುವುದು one third ಅಷ್ಟೇ. ಇನ್ನು environment clearance ಅನ್ನು ಇನ್ನು ಒಂದು ತಿಂಗಳಲ್ಲಿ ಮಾಡಬೇಕೆಂದು ನಾವು ಈಗಾಗಲೇ ಸೂಚನೆಯನ್ನೂ ಕೂಡ ಕೊಟ್ಟು, environment clearance ಮಾಡಿಸತಕ್ಕಂತ ಎಲ್ಲಾ ಪ್ರಯತ್ನವನ್ನೂ ಕೂಡ ಮಾಡುತ್ತಿದ್ದೇವೆ. ಆದಷ್ಟು ಬೇಗ ಅದಕ್ಕೆ ಪರಿಹಾರ ಕಾಣುವಂಥ ಎಲ್ಲಾ ಪ್ರಯತ್ನವನ್ನೂ ಕೂಡ ಮಾಡುತ್ತೇವೆ. ನಮಗೆ ತೊಂದರೆಯಾಗಿರುವುದೇನೆಂದರೆ, ಮೊದಲು ಅರ್ಧ, ಒಂದು ಎಕರೆಯಲ್ಲಿದ್ದರೂ ಕೂಡ ಮರಳನ್ನು ತೆಗೆದುಬಿಡಬಹುದಾಗಿತ್ತು, ಆವಾಗ ಇರಲಿಲ್ಲ. ಈಗ ಐದು ಎಕರೆ ಆಯಿತೆಂದರೆ, ನಾವ್ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಐದು ಎಕರೆ ಆಯಿತೆಂದರೆ ನೀವು ಟೆಂಡರ್ ಮಾಡಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಏನಾದರೂ violation ಆಯಿತೆಂದರೆ, ಲೋಕಾಯುಕ್ತದವರು ಬಂದು ಕೇಸ್ ಹಾಕುತ್ತಾರೆ. Lokayukta is also equally monitoring. ಈಗ ನೀವೊಂದು FIR ಬಗ್ಗೆ ಹೇಳಿದಿರಿ, ಅದನ್ನು ನಾನು ನೋಡಿದೆ, ಅಲ್ಲಿ ಲೋಪವಾಗಿರುವುದು, ತಹಸೀಲ್ದಾರದ್ದು ಇರಬೇಕು, ಇಲ್ಲ sub-inspector ಇರಬೇಕು. ಇಡೀ ಜಿಲ್ಲೆಯವರನ್ನು ಏಕೆ ಹಾಕಿದರೆಂದರೆ, entire District Sand Monitoring Committee ಎಂದೇನಿದೆ ಆ committee ಯ ಎಲ್ಲರ ಮೇಲೂ ಕೇಸ್ ಹಾಕಿದ್ದಾರೆ.

ಅಧ್ಯಕ್ಷರು: FIR ಹಾಕುವುದು Cr.P C. ಅಡಿಯಲ್ಲಿ ತಾನೇ?

ಶ್ರೀ ಟಿ.ಬಿ. ಜಯಚಂದ್ರ: ಹೌದು Cr.P.C. ಅಡಿಯಲ್ಲಿಯೇ ನಮ್ಮ ರೂಲ್ಸ್ ನಲ್ಲಿ ಏನಾಗಿದೆ ಎಂದರೆ, ನಾವು ಮರಳಿಗೆ ಒಂದು ಜಿಲ್ಲಾ ಸಮಿತಿ ಮಾಡುವಾಗ ಯಾರ್ಯಾರು ಎಂದು ವಿವರಿಸಿದ್ದಾರೆ, ಎಲ್ಲರನ್ನೂ ಸೇರಿಸಿ FIR ಮಾಡಿ ಕೇಸ್ ಹಾಕಿದ್ದಾರೆ.

ಅಧ್ಯಕ್ಷರು: Cr.P.C. ಯಲ್ಲಿ FIR ಹಾಕುವಾಗ prima facie case ಇರಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಹೌದು, ಎಲ್ಲಾದರೂ ಒಂದು ಕಡೆ ಅಕ್ರಮವಾಗಿ ಮರಳು ಸಾಗಾಣಿಕೆಯಾಗುತ್ತಿದೆ ಎಂದರೆ, ತಹಶೀಲ್ದಾರ್ responsible ಆಗುತ್ತಾನೆ, ಇಲ್ಲ Sub-Inspector ಆಗುತ್ತಾನೆ, ಇಲ್ಲ Revenue Inspector ಆಗುತ್ತಾನೆ, ಒಬ್ಬ supervisory staff ಮೇಲೆ ಎಲ್ಲಾ ಕೇಸ್ ಹಾಕಿಬಿಟ್ಟರೆ, We have taken it up with the Lokayukta also. They have also recommended. ಈ ರೀತಿಯ amendments ನಿಮ್ಮಲ್ಲಿ ಆಗಬೇಕಾಗುತ್ತದೆ, ಈ ರೀತಿಯಾಗಿ mis-interpretation ಆಗುತ್ತದೆ ಎಂದೂ ಕೂಡ ಹೇಳಿದ್ದಾರೆ. ಅದೆಲ್ಲದಕ್ಕೂ ಕೂಡ ಕಾನೂನಿನಲ್ಲಿ ಕ್ರಮ ಅಥವಾ ಪರ್ಯಾಯವಾಗಿರುವ ಮರಳನ್ನು ಕೊಡುವುದು ಇದೆಲ್ಲದಕ್ಕೂ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ, ನಮ್ಮ ಮೇಲೆ ವಿಶ್ವಾಸವಿಡಿ, ಈ ಸಮಸ್ಯೆಯನ್ನು ನೀವು ನಾವು ಸೇರಿ ಪರಿಹಾರ ಮಾಡೋಣ.

ಶ್ರೀ ಸಿ.ಟಿ. ರವಿ: ಬೆಳಗಾಂನಲ್ಲಿ ಬೇಲಿಕೇರಿ ತರಹ ಇಲ್ಲಿ theft ಆಗಿದೆ ಎಂದು ನಾನು specific ಆಗಿ ಹೇಳಿದೆ. ಜಿಲ್ಲಾಧಿಕಾರಿಗಳು 2014ರ ಫೆಬ್ರವರಿ ತಿಂಗಳಿನಲ್ಲಿ ಆಕ್ಷನ್ ತೆಗೆದುಕೊಳ್ಳಬೇಕೆಂದು PWD ಪ್ರಧಾನ ಕಾರ್ಯದರ್ಶಿಯವರಿಗೆ ವರದಿ ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, specific ಆಗಿ ಏನೇ ಇದ್ದರೂ ಕೊಡಲಿ, ವರದಿ ಕೊಟ್ಟಿದ್ದಾರೆಂದು ಹೇಳಿದ್ದಾರೆ, ಅದರ ಮೇಲೆ ಖಂಡಿತಾ ಕ್ರಮ ತೆಗೆದುಕೊಳ್ಳುತ್ತೇವೆ, ಈಗ ಮಾನ್ಯ ಸದಸ್ಯರುಗಳು, ಎಲ್ಲೆಲ್ಲಿ ಅಧಿಕಾರಿಗಳಿಂದ ವೈಫಲ್ಯವಾಗಿದೆ ಎಂದು ಅನೇಕ ನಿದರ್ಶನಗಳನ್ನು ಕೊಟ್ಟಿದ್ದಾರೆ. ಅದೆಲ್ಲದರ ಮೇಲೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾತು ಮಾತಿಗೆ ಕಾನೂನು ಮಂತ್ರಿಗಳು ಲೋಕಾಯುಕ್ತ, ಲೋಕಾಯುಕ್ತವೆಂದು ಹೇಳುತಿದ್ದಾರೆ, ಏನು ಅದು ಲೋಕಾಯುಕ್ತ, ಏನು ಮಾಡುತ್ತಿದೆ? We want to know. ನಮಗೆ ಗೊತ್ತಿರುವ ಪ್ರಕಾರ ತಾವೇ ಹೇಳಿದಂತೆ, Cr.P.C, IPC ಪ್ರಕಾರ ಯಾವುದೇ

offence ಗಳಾದರೆ, ಅದನ್ನು register ಮಾಡುವುದಕ್ಕೆ, enquiry ಮಾಡುವುದಕ್ಕೆ, charge sheet ಮಾಡುವುದಕ್ಕೆ ಅಥವಾ 'B' report ಕೊಡುವುದಕ್ಕೆ, 'C' report ಕೊಡುವುದಕ್ಕೆ, ಅಧಿಕಾರವಿರುವುದು ಪೋಲಿಸ್ ಅಧಿಕಾರಿಗಳಿಗೆ ಮಾತ್ರ. ಅದಕ್ಕೆ ನಾವು ಇಡೀ ರಾಜ್ಯವನ್ನು ವಿಂಗಡಣೆ ಮಾಡಿದ್ದೇವೆ, Station House ಎಂದು ಮಾಡಿದ್ದೇವೆ, Police Station ಮಾಡಿದ್ದೇವೆ, Police Stationಗೆ jurisdiction ಕೊಟ್ಟಿದ್ದೇವೆ. Do we have two parallel agencies in Karnataka, one Police and the other Lokayuktha? If Lokayukta is doing it, can they do it? What is that they are troubling? Please tell us. we want to know.

ಶ್ರೀ ಟಿ.ಬಿ. ಜಯಚಂದ್ರ: ಒಂದು FIR ಇಡೀ district ನವರು ಎಲ್ಲರನ್ನೂ ಸೇರಿಸಿ ಹಾಕಿದ್ದಾರೆ ಎನ್ನುವುದಕ್ಕೆ ನಾನು ಉತ್ತರ ಕೊಟ್ಟೆ. ಲೋಕಾಯುಕ್ತದವರು ಕೂಡ ಪ್ರತಿ ಜಿಲ್ಲೆಗೆ ಬಂದು close ಆಗಿ monitor ಮಾಡುತ್ತಿದ್ದಾರೆ. ಆ ಕಾರಣಕ್ಕೋಸ್ಕರ ಅಧಿಕಾರಿಗಳು ಕೂಡ spare ಆಗಿದ್ದಾರೆ. ಲೋಕಾಯುಕ್ತ ಕೋರ್ಟ್‌ದಲ್ಲಿ ಕೇಸ್ ಹಾಕಿ ಬಹಳಷ್ಟು ಜನರಿಗೆ ಅರೆಸ್ಟ್ ಮಾಡಿರುವಂತಹ ಪ್ರಕರಣಗಳು ಇವೆ.

ಅಧ್ಯಕ್ಷರು: ಅದು ಬೇರೆ ಮಾತು ನೀವು ಹಾಗೆ defend ಮಾಡಿಕೊಳ್ಳಬೇಡಿ. Particular case ನಲ್ಲಿ CRPF ಪ್ರಕಾರ ಒಂದು FIR ಹಾಕಬೇಕಾದರೆ primafacie there should be a case. Primafacie ಯಾರ್ಯಾರ ಮೇಲೆ ಕೇಸ್ ಇದೆ FIR ಹಾಕಬೇಕಾದರೆ, is it a joke?

ಶ್ರೀ ಟಿ.ಬಿ. ಜಯಚಂದ್ರ: ಕಾರಣರಾಗುತ್ತಾರೆ.

ಅಧ್ಯಕ್ಷರು: ಕಾರಣ ಬೇರೆ.

ಶ್ರೀ ಟಿ.ಬಿ. ಜಯಚಂದ್ರ: ಆ context ನಲ್ಲಿ ಹಾಕಿರತಕ್ಕಂಥದ್ದು ಅದು. ಇದರ ಬಗ್ಗೆ ಕೂಡ ನಾವು ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು: ನೀವು ಲಾಯರ್ ಆಗಿ ಹೀಗೆ ಹೇಳಿದರೆ ನಾನೇನು ಮಾಡುವುದು? FIR ಹಾಕಿ investigation ನಲ್ಲಿ ಯಾರ್ಯಾರು responsible ಅವರನ್ನೆಲ್ಲಾ implicate ಮಾಡಿ. FIR ಆಗುವ stage ನಲ್ಲಿ ಎಲ್ಲರ ಜೊತೆಗೆ ಕಡೆಗೆ ನಿಮ್ಮನ್ನೂ ತೆಗೆದುಕೊಂಡು ಹೋಗಿ ಹಾಕಿ, ಹಾಗೆ ಮಾಡಬಾರದು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅದಕ್ಕೋಸ್ಕರವಾಗಿ ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ತರುತ್ತಿದ್ದೇವೆ. ನಮ್ಮ sand encourage ಮಾಡುವುದಕ್ಕೋಸ್ಕರ ನಿಯಮಗಳನ್ನು ಸಡಿಲಿಸಿ ಹೆಚ್ಚು ಹೆಚ್ಚು ಲೈಸನ್ಸ್ ಕೊಡತಕ್ಕಂತಹ ಕೆಲಸ ಮಾಡಿದ್ದೇವೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಬೆಳಗಾಂ ಬಗ್ಗೆ ಅವರು ಏನೂ ಹೇಳಲಿಲ್ಲ.

ಅಧ್ಯಕ್ಷರು: ಮಾನ್ಯ ಮಹದೇವಪ್ಪನವರೇ ನಿಮ್ಮ ಪ್ರಧಾನ ಕಾರ್ಯದರ್ಶಿಗಳು ಮಹಾನ್ ನಾಯಕರು.

ಡಾ|| ಹೆಚ್.ಸಿ. ಮಹದೇವಪ್ಪ: Immediately I will take action against people who have involved.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಸುಮ್ಮನೆ ಹೆಳುತ್ತಿದ್ದಾರೆ. ಏನೂ ಮಾಡಿಲ್ಲ.

ಅಧ್ಯಕ್ಷರು: ಮಾಡುತ್ತಾರೆ. ಇವತ್ತು ಹೇಳುತ್ತಿದ್ದಾರೆ, ಮಾಡುತ್ತಾರೆ. ಮಾಡದೇ ಇದ್ದರೆ ನನಗೆ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವರು solve ಮಾಡುವುದಕ್ಕೆ ತಯಾರಿಲ್ಲ. ಮೂರು ತಿಂಗಳು ಬಿಟ್ಟರೆ ಇದೇ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಮಹದೇವಪ್ಪನವರೇ,

(ಗೊಂದಲ)

ಅಧ್ಯಕ್ಷರು: ಇವತ್ತೇ ತೆಗೆದುಕೊಳ್ಳಿ. ಫೈಲ್ ತರಿಸಿ.

ಶ್ರೀ ಜಗದೀಶ್ ಶೆಟ್ಟರ್: ಇವರು ಏನೂ ಮಾಡುವುದಿಲ್ಲ. ಇವರು sand lobby ಗೆ ಒಳಗಾಗಿದ್ದರೆ. ಇಡೀ ರಾಜ್ಯದಲ್ಲಿ ಎಲ್ಲಾ ಅಧಿಕಾರಿಗಳು ಇದನ್ನೇ ಮಾಡುತ್ತಿದ್ದಾರೆ. ಇವರಿಗೆ ಯಾವುದೇ ರೂಲ್ಸ್ ಇಲ್ಲ. ಸರ್ಕಾರದ ಉತ್ತರಕ್ಕೆ ವಿರೋಧ ವ್ಯಕ್ತಪಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ BJP ಶಾಸಕಾಂಗ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಮಹದೇವಪ್ಪನವರೇ ನನಗೆ ನಾಳೆ ರಿಸಲ್ಟ್ ಬೇಕು.

ಡಾ|| ಹೆಚ್.ಸಿ. ಮಹದೇವಪ್ಪ: KCSR ಪ್ರಕಾರ charges frame ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಡಾ|| ಹೆಚ್.ಸಿ. ಮಹದೇವಪ್ಪ: ಇವರ ಕಾಲದಲ್ಲಿ ಒಂದು ನೀತಿ ಇಲ್ಲ, ನಿಯಮ ಇಲ್ಲ. ಏನು ಮಾಡಬೇಕೆಂದು ಆಲೋಚನೆ ಮಾಡಲಿಲ್ಲ. ನಾವು ಬಂದ ಮೇಲೆ 3 ದಶಲಕ್ಷ ಮೆ.ಟನ್. Sand ಮತ್ತು ಮುಂದಿನ ಆರು ತಿಂಗಳಲ್ಲಿ ಇನ್ನು 3–4 ದಶ ಲಕ್ಷ ಟನ್ ಮಾಡಿದ್ದೇವೆ. ಅದಕ್ಕೆ ಪರ್ಯಾಯವಾಗಿ ನದಿ ಪಾತ್ರಗಳು ಹಾಳಾಗುತ್ತಿವೆ. ತಮಿಳುನಾಡು ಮತ್ತು ಆಂಧ್ರಕ್ಕೂ ವ್ಯತ್ಯಾಸ ಇದೆ. ನಮ್ಮ ನದಿಗಳ ಆಳ ಉದ್ದಗಲಕ್ಕೂ ವ್ಯತ್ಯಾಸವಿಲ್ಲವೆ? ಅಧ್ಯಕ್ಷರೆ, ಇಷ್ಟಿಷ್ಟು ಅಗಲ ನದಿಗಳನ್ನು ಇಟ್ಟುಕೊಂಡು ಎಲ್ಲ ಬಗೆದರೆ ಕೆಳಗಡೆ ಅಂತರ್ಜಲ ಬತ್ತಿ ಹೋಗುತ್ತದೆ. Environment ಹಾಳಾಗುತ್ತಿದೆ, ಯಥೇಚ್ಛವಾಗಿ ಬಿಟ್ಟರು. ಮಾನ್ಯ ಕುಮಾರಸ್ವಾಮಿಯವರು ಮಾತನಾಡುವಾಗ ಕೆಲವು

ಸಲಹೆಗಳನ್ನು ಕೊಟ್ಟಿದ್ದಾರೆ, ಕಾನೂನು ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ಬದ್ಧತೆಯಿಂದ ಕೆಲಸ ಮಾಡುತ್ತಿದೆ. ಕಟ್ಟುನಿಟ್ಟಾಗಿ ಎಷ್ಟೆಷ್ಟು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. ಇಷ್ಟೊಂದು ಹೇಳಿದರೂ 23 ದಶಲಕ್ಷ ಮೆ.ಟನ್ ಮರಳು ಬೇಕಾಗಿತ್ತು. ಯಾವ ಕಾಲದಲ್ಲಿಯೂ ಅವರು ಅಷ್ಟು supply ಮಾಡಿಲ್ಲ. ಅವರು ಎಂಟು ದಶಲಕ್ಷ ಟನ್ ಬಿಟ್ಟು ಹೆಚ್ಚಿಗೆ ಮಾಡಲಿಲ್ಲ. ವ್ಯಾಪಕವಾಗಿ ಬಿಟ್ಟರು ಒಣಗಿಕೊಂಡು ಬಂದಿತು, ಕಾನೂನು ಇಲ್ಲ legal action ಇಲ್ಲ. ಹಾಗಂತ ಹೇಳಿ ಅವರನ್ನು ದೂರ ಮಾಡಿ ನಾವು ಸುಮ್ಮನಿರುವುದಿಲ್ಲ. ನಮ್ಮ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಮರಳು ಗಣಿಗಾರಿಕೆ ಮಾನವ ಅಭಿವೃದ್ಧಿಗೆ ಎಷ್ಟು ಬೇಕು ಅಷ್ಟು ಮಾಡಿ ಅದಕ್ಕೆ ಪರ್ಯಾಯವಾಗಿ ಏನು ಮಾಡಬೇಕು ನಮ್ಮ ನದಿ ಪಾತ್ರಗಳನ್ನು ರಕ್ಷಣೆ ಮಾಡಬೇಕು, ಅಂತರ್ಜಲವನ್ನು ರಕ್ಷಣೆ ಮಾಡಬೇಕು environment ರಕ್ಷಣೆ ಮಾಡಬೇಕು. ಈಗಾಗಲೇ ನಾವು ಸುಮಾರು 6 ರಿಂದ 7 million ದಶಲಕ್ಷ ಟನ್ artificial sand ಅನ್ನು ತಯಾರು ಮಾಡುತ್ತಿದ್ದೇವೆ. ಅದು ಈ ಮರಳಿಗಿಂತ ಶಕ್ತಿಯುತವಾಗಿದೆ ಎಂದು ವರದಿ ಕೊಟ್ಟಿದ್ದಾರೆ. ಅದನ್ನೆಲ್ಲಾ ಮಾಡುತ್ತೇವೆ. ಇನ್ನೂ ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಸುಧಾರಣೆ ಮಾಡಿ ಸರ್ಕಾರದ ಕಾರ್ಯಕ್ರಮಗಳು ಬಡವರ ಕಟ್ಟಡಗಳಿಗೆ ಬೇಕಾದಂತಹ ಏನು ಮರಳು ಸಾಗಣೆ ಮಾಡಬೇಕು ಅವನ್ನೆಲ್ಲಾ ಕೂತು Government with all seriousness and with commitment we will attend to all those things.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆಯೇ ಮಾತನಾಡಬೇಕಾದರೆ ಹೇಳಿದೆ. ನಮಗೆ ಎಷ್ಟು ಮರಳಿನ ಅವಶ್ಯಕತೆ ಇದೆ ಎನ್ನುವುದಕ್ಕೆ ನಮ್ಮ ರಾಜ್ಯದಲ್ಲಿ ಎಷ್ಟು ಸಿಮೆಂಟ್ ಸೇಲ್ ಆಗುತ್ತಿದೆ, ಸಿಮೆಂಟ್ ಎಷ್ಟು ಉಪಯೋಗ ಮಾಡುತ್ತಿದ್ದೇವೆ ಅದನ್ನು ನೀವು ಲೆಕ್ಕ ತೆಗೆದುಕೊಳ್ಳಿ ನಮಗೆ ಎಷ್ಟು ಮರಳು ಬೇಕೆಂದು ಗೊತ್ತಾಗುತ್ತದೆ. ಅದರ ಜೊತೆಗೆ ನೀವು ದಂಡ ವಿಧಿಸಿ ಹೆಚ್ಚಿಗೆ ದುಡ್ಡು ಪಡೆದಿರುವುದು ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಅದು ಅಷ್ಟಕ್ಕೇ ನಾವು ತೃಪ್ತಿಪಟ್ಟುಕೊಳ್ಳುವುದಕ್ಕಾಗುವುದಿಲ್ಲ. ನಾನು ಬೆಳಿಗ್ಗೆ ಹೇಳಿದೆ ನಮಗೆ ಬೇಡಿಕೆ ಇರುವುದು 23.5 ಲಕ್ಷ ದಶಲಕ್ಷ ಟನ್.

ಸರ್ಕಾರದಿಂದ official ಆಗಿ ಹೋಗುತ್ತಿರುವ ಮರಳು 8.5 ಲಕ್ಷ ದಶಲಕ್ಷ ಟನ್. ಆದರೆ ಈ ಗ್ಯಾಪ್ ಇದೆಯಲ್ಲ ಆ ಗ್ಯಾಪ್ ಯಾವ ತರಹ ಫಿಲ್ ಅಪ್ ಆಗುತ್ತಿದೆ ಎಂದು ನಾವು ಇಲ್ಲಿ ಯೋಚನೆ ಮಾಡಬೇಕು. ಅಲ್ಲಿಯೇ ಅಕ್ರಮವಾಗಿ ಹೋಗುತ್ತಿರುವುದು. ಸಾಯಂಕಾಲ ಆರು ಗಂಟೆಯಿಂದ ಮರಳು ಮೈನಿಂಗ್ ಮಾಡುವ ಹಾಗಿಲ್ಲ. ಆದರೆ ಸಾಯಂಕಾಲ ಆರು ಗಂಟೆಯಿಂದ ನಡೆಯುವುದೇ ಜಾಸ್ತಿ. ನೀವು ಮೈನಿಂಗ್ ಮೆಷಿನರಿ ಉಪಯೋಗ ಮಾಡುವ ಹಾಗಿಲ್ಲವೆಂದು ಹೇಳಿದಿರಿ, ಇಲ್ಲಿ ನೋಡಿ ಮೊನ್ನೆ ಮಳವಳ್ಳಿಯಲ್ಲಿ JCB ಉಪಯೋಗಿಸುವಾಗ ಒಬ್ಬ ಸತ್ತು ಹೋಗಿದ್ದಾನೆ. ಅದು ಮರ್ಡರ್ ಆಗಿದೆ ಎಂದು ಪತ್ರಿಕೆಯಲ್ಲಿ ಬರೆದುಕೊಂಡಿದ್ದಾರೆ. ಅನುಮಾನ ಇದೆ ಎಂದು ಹೇಳಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು, ಕೆಲವು ವಿಷಯದಲ್ಲಿ CBIಗೆ ಕೊಡಿ ಎಂದು ಹೇಳಿದೆ. ಮಾನ್ಯ ರಮೇಶ್ ಕುಮಾರ್‌ರವರು ಒಂದು ಸದನ ಸಮಿತಿ ಮಾಡಿದರೆ ಅದರಿಂದ ಉತ್ತಮವಾದ ವರದಿ ಕೊಡಬಹುದು ಎಂದು ಹೇಳಿದರು. ನೀವು ಸದನ ಸಮಿತಿ ಬಗ್ಗೆ ಹೇಳಿಲಿಲ್ಲ. ಇದಕ್ಕೆ ಸದನ ಸಮಿತಿ ಆಗಲೇ ಬೇಕಾಗಿದೆ. ಸದನ ಸಮಿತಿಯಿಂದ ಇವತ್ತು ಇರತಕ್ಕಂತಹ ಕೆಲವು ಸಮಸ್ಯೆಗಳಿಗೂ ಪರಿಹಾರ ತರುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಕೇರಳ ಬಾರ್ಡರ್ ಇರಬಹುದು, ಬೇರೆ ಬೇರೆ ಚೆಕ್‌ಪೋಸ್ಟ್‌ಗಳಲ್ಲಿ ಹೋಗಿರುವ ಕೆಲವು ಸತ್ಯಾಂಶ ಏನಿದೆ, ಹೊರಗೆ ಬರಲೇ ಬೇಕಾಗುತ್ತದೆ. ಏಕೆಂದರೆ ನಮ್ಮ ಬಾರ್ಡರ್‌ನಲ್ಲಿ ನಮ್ಮ ಚೆಕ್‌ಪೋಸ್ಟ್‌ನಲ್ಲಿ ವೆಹಿಕಲ್ ನಂಬರ್ ಇಲ್ಲ, ಎಂಟ್ರಿ ಇಲ್ಲ. ಮರಳು ಅಲ್ಲಿಗೆ ತೆಗೆದುಕೊಂಡು ಹೋಗಿ ಅವರು ಕೇರಳದಲ್ಲಿ ಟ್ಯಾಕ್ಸ್ ಕಟ್ಟುತ್ತಾರೆ. ಅಲ್ಲಿಯ ಚೆಕ್‌ಪೋಸ್ಟ್‌ನಲ್ಲಿ ಇಲ್ಲಿಂದ ಹೋಗಿರತಕ್ಕಂತಹ ನಮ್ಮ ವೆಹಿಕಲ್‌ಗಳ ನಂಬರ್‌ಗಳಿವೆ. ಇದೆಲ್ಲಾ ತನಿಖೆ ಆಗದೇ ಇದ್ದರೆ, ನಾವು ಚರ್ಚೆ ಮಾಡಿದ್ದು ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ನೀವು ಸದನ ಸಮಿತಿ ರಚನೆ ಮಾಡಲೇಬೇಕಾಗುತ್ತದೆ. ದಯವಿಟ್ಟು ಸರ್ಕಾರ ಈ ವಿಷಯದಲ್ಲಿ ಲಘುವಾಗಿ ತೆಗೆದುಕೊಳ್ಳುವುದು ಬೇಡ. ಸದನ ಸಮಿತಿ ಘೋಷಣೆ ಮಾಡಬೇಕು. ಅದಕ್ಕೆ ಪರಿಹಾರ ಕೊಡುವುದಕ್ಕೂ ಅವಕಾಶಗಳಿವೆ. ಈ ವಿಷಯದಲ್ಲಿ ಸದನ ಸಮಿತಿ

ಆಗಲೇಬೇಕೆಂಬುದು ನಮ್ಮ ಪಕ್ಷದ ಅಭಿಪ್ರಾಯ. ಹಿರಿಯ ಸದಸ್ಯರು ಮಾನ್ಯ ರಮೇಶ್ ಕುಮಾರ್‌ರವರೂ ಸಲಹೆ ಕೊಟ್ಟಿದ್ದಾರೆ. ಸರ್ಕಾರ ಅದನ್ನು ಘೋಷಣೆ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಸದನ ಸಮಿತಿ ಮಾಡಿ, ಸದನ ಸಮಿತಿ ಕೊಡತಕ್ಕಂತಹ ಸಲಹೆ ಏನೆಂದರೆ, ಎಲ್ಲಿಯವರೆಗೆ ನಾವು capacityಯನ್ನು increase ಮಾಡುವುದಿಲ್ಲವೋ ಅಲ್ಲಿಯವರೆಗೆ ಏನೂ ಪ್ರಯೋಜನವಾಗುವುದಿಲ್ಲ. ಇದು ನಮಗೆಲ್ಲರಿಗೂ ಗೊತ್ತಿರತಕ್ಕಂಥದ್ದು. ಒಂದು ಕಮಿಟಿಯನ್ನು ಕೂಡ ಮಾಡಿದ್ದೇವೆ. Manufacture sand ಗಾಗಿ ಒಂದು Experts Committee ಕೂಡ ಮಾಡಿದ್ದೇವೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ವಿಚಾರ ಪ್ರಸ್ತಾಪವಾಗಿದೆ, ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವರು ಏನು ಮಾತನಾಡಿದ್ದಾರೋ ಆ ವಿಚಾರಕ್ಕೆ ನಾನು ಸ್ಪಷ್ಟೀಕರಣ ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನೀವು ಏನೇ ಕಮಿಟಿ ಮಾಡಿ, ನಾನು ಸುದೀರ್ಘವಾಗಿ ಚರ್ಚೆ ಮಾಡಲಿಲ್ಲ. ನಾನು documents ಕೊಟ್ಟಿದ್ದೇನೆ. ಮಾನ್ಯ ಕಾನೂನು ಸಚಿವರೆ, ಕೇರಳಕ್ಕೆ ಯಾವ ರೀತಿ ಮರಳು ಹೋಗುತ್ತಿದೆ ಎಂದು ನಾನು document ಸಮೇತ ಕೊಟ್ಟಿದ್ದೇನೆ. ಇದರಲ್ಲಿ ನೀವು ಯಾವುದೇ ಕಾರಣಕ್ಕೂ ತೇಲಿಸಿ ಉತ್ತರ ಕೊಡತಕ್ಕಂಥದ್ದು ನಮಗೆ ಒಪ್ಪಿಗೆ ಇಲ್ಲ. ಸದನ ಸಮಿತಿ ರಚನೆಯಾಗಬೇಕು. ಸದನ ಸಮಿತಿ ಬೇಡವೆಂದರೆ CBI ಗೆ ಕೊಡುತ್ತೀರಾ ಕೊಟ್ಟುಬಿಡಿ. ನಿರಂತರವಾಗಿ ಮರಳು ಹೋಗಿದೆ.

ಶ್ರೀ ಟಿ.ಬಿ. ಜಯಚಂದ್ರ: ನಿರ್ದಿಷ್ಟವಾಗಿ ಅದರ ಮೇಲೆ ಕೇಸ್ ಹಾಕೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿಯವರೆಗೆ ಆಗಿರುವುದರ ಬಗ್ಗೆ ಏನು ಮಾಡಿದಿರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಇನ್ನು ಬೇರೆ ಬೇರೆ ಚೆಕ್‌ಪೋಸ್ಟ್‌ಗಳಲ್ಲಿ ಆಗಿರುವುದು ಆಚೆ ಬರಲಿ. ದಯಮಾಡಿ ಸದನ ಸಮಿತಿ ಮಾಡಿ. ಸದನ ಸಮಿತಿ ಮಾಡುವುದಕ್ಕೆ ನಿಮಗೇನು ತೊಂದರೆ?

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಅಧಿಕೃತವಾಗಿ ಟೆಂಡರ್ ಮಾಡಿರುವುದನ್ನು ನಾನು ದಾಖಲೆ ಸಮೇತ ನಿರೂಪಣೆ ಮಾಡುವುದಕ್ಕೆ ತಯಾರಿದ್ದೇನೆ. ಅವತ್ತು ಆಗಿರತಕ್ಕಂತಹ ಅವ್ಯಾಹತವಾದ ಟೆಂಡರ್ ಮಳವಳ್ಳಿಯಲ್ಲಿ 21 ಪಂಚಾಯತಿಗಳಲ್ಲಿ ಒಂದು ಮುನಿಸಿಪಾಲಿಟಿಯಲ್ಲಿ 2004ರಿಂದ 2008ರವರೆಗೆ ಅಕ್ರಮವಾಗಿ ಮರಳು ಸಾಗಣೆ ನಡೆದಿತ್ತು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ದಾಖಲಾತಿ ಸಮೇತ ನಾನು ಸದನಕ್ಕೆ ಕೊಡಲು ತಯಾರಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಹಳೆಯದನ್ನು ಸೇರಿಸಿದಂತೆ ಎಲ್ಲವನ್ನೂ ಸದನ ಸಮಿತಿ enquiry ಮಾಡಲು order ಮಾಡೋಣ ಅಧ್ಯಕ್ಷರೆ,

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ಇವರು ವಾಸ್ತವಾಂಶವನ್ನು ಒಳಗೊಂಡ ಚಿತ್ರವನ್ನು ತೆಗೆದುಕೊಳ್ಳಲಿ ಅದನ್ನು ಬಿಟ್ಟು pick and chose ತೆಗೆದುಕೊಂಡು ಮಾತನಾಡುವುದು ಸರಿಯಲ್ಲ. Pick and chose ಆಧಾರದ ಮೇಲೆ ಮಾತನಾಡುವುದನ್ನು ಯಾವುದೇ ಕಾರಣಕ್ಕೂ ಪರಿಗಣಿಸಬಾರದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಡೀ ರಾಜ್ಯದಲ್ಲಿರತಕ್ಕಂತ ಎಲ್ಲಾ ಮರಳು ಗಣಿಗಾರಿಕೆ ಬಗ್ಗೆ ಸದನ ಸಮಿತಿ ಮಾಡಬೇಕು.

ಅಧ್ಯಕ್ಷರು: ಕಾನೂನು ಸಚಿವರೆ, ಇದಕ್ಕೆ ಏನು ಹೇಳುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ನಿರ್ದಿಷ್ಟವಾಗಿ ಹೇಳಿರತಕ್ಕಂಥದ್ದು ಮತ್ತು ಎಲ್ಲೆಲ್ಲಿ ಏನೇನು ತೊಂದರೆಯಾಗಿದೆಯೆಂದು

ಹೇಳಿದ್ದಾರೆ ಅವೆಲ್ಲದರ ಬಗ್ಗೆ ಕೂಡ enquiry ಮಾಡುತ್ತೇವೆ, case ಹಾಕುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿಯವರೆವಿಗೂ ಅದು ಸಾಧ್ಯವಾಗಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮರಳನ್ನು ತೆಗೆಯುವಂಥದ್ದು it is cognizable offense. IPC ಯಲ್ಲಿ ಹಾಕುತ್ತಾರೆ. Lokayuktha ಕೂಡ Prevention of Corruption Act ನಲ್ಲಿ ಈಗಾಗಲೇ ಅಧಿಕಾರಗಳ ಮೇಲೆ ನಿಗಾ ಇಟ್ಟು ಪರಿಶೋಧನೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಅದೆಲ್ಲಾ ಬೇಡಾರಿ. ಸದನ ಸಮಿತಿ ರಚನೆ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದೆ. ಯಾವುದೇ ರೀತಿಯಲ್ಲಿಯೂ House Committee ಬೇಡ ಅಧ್ಯಕ್ಷರೆ.

ಅಧ್ಯಕ್ಷರು: O.K. ಈಗ ಚರ್ಚೆ ಮುಗಿದಿದೆ. ಸುರೇಶಗೌಡರೆ, ತಾವು ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಸದನ ಸಮಿತಿ ರಚನೆಗೆ ಸಂಬಂಧಪಟ್ಟಂತೆ ಸರ್ಕಾರ ಉತ್ತರವನ್ನು ಕೊಡಲೇಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಜಿಲ್ಲಾಧಿಕಾರಿಗಳ recommendation ಮೇಲೆ 1 to 4 KCSR Rules ಪ್ರಕಾರ ನಾವು charges frame ಮಾಡಿದ್ದೇವೆ. KCSR Rules

ಪ್ರಕಾರ departmental enquiry process ಮಾಡಿ ಅವರಿಗೆ notice issue ಮಾಡಿ enquiry ಯನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್.ಡಿ.ಕುಮಾರಸ್ವಾಮಿ ಹೊರತುಪಡಿಸಿ ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ಮಾಡಿದರು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಮನವಿ ಮಾಡುತ್ತೇವೆ. ಮರಳುಗಾರಿಕೆಗೆ ಸಂಬಂಧಪಟ್ಟಂತೆ ಅಂತಿಮವಾಗಿ ತೀರ್ಮಾನವಾಗಬೇಕಾದರೆ ಸದನ ಸಮಿತಿ ಆಗಲೇಬೇಕಾಗುತ್ತದೆ. ಮಾನ್ಯ ಸದಸ್ಯರುಗಳೆ, ಮರಳು ದಂಧೆ ನಡೆದಿರುವ ಬಗ್ಗೆ ಇರುವ ಎಲ್ಲ ಫೋಟೋಗಳನ್ನು ಹಿಡಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಸುರೇಶ್‌ಗೌಡರೇ ಅದೇನೋ ಪ್ರಸ್ತಾಪ ಮಾಡಬೇಕು ಎಂದಿರಲ್ಲ. ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಈಗ ಸರ್ಕಾರ ಇದಕ್ಕೆ ಪಾಲುದಾರರಾಗಿಲ್ಲವೆಂದ ಮೇಲೆ ಸದನ ಸಮಿತಿ ರಚನೆ ಮಾಡುವುದಕ್ಕೆ ಏಕೆ ಭಯ ಬೀಳುತ್ತಾರೆ? ನಿಮ್ಮಲ್ಲಿ ಏನೂ ತಪ್ಪಿಲ್ಲದಿದ್ದರೆ ಸದನ ಸಮಿತಿ ಮಾಡುವುದಕ್ಕೆ ಏಕೆ ಭಯ? ನೀವು ನಿಜಕ್ಕೂ ಪ್ರಾಮಾಣಿಕವಾಗಿ ಕೆಲಸವನ್ನು ನಿರ್ವಹಿಸಿದ್ದರೆ ಸದನ ಸಮಿತಿ ಮಾಡುವುದಕ್ಕೆ ಸರ್ಕಾರಕ್ಕೆ ಆಗಿರುವ ತೊಂದರೆಯಾದರೂ ಏನು ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು: ಸುರೇಶ್‌ಗೌಡರೇ ಹೇಳ್ರಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಸದಸ್ಯರುಗಳೇ, ಎಲ್ಲರೂ slogan ಕೂಗಿ.

ಅಧ್ಯಕ್ಷರು: ಕುಮಾರಸ್ವಾಮಿಯವರೆ, ನನಗೆ ಇವತ್ತಿನ ದಿವಸ ಹೆಚ್ಚು ಕಡಿಮೆ ಪೂರೈಸಿದರೆ ಇನ್ನು ಎರಡೇ ದಿವಸ ಉಳಿದಿದೆ. ನಿಮಗೂ ಕೂಡ ಗೊತ್ತಿದೆ. ಇನ್ನು ಎರಡೇ ದಿವಸ ಇರುವುದು. ಇನ್ನೂ ಅನೇಕ ಪ್ರಮುಖವಾದ ವಿಷಯಗಳಿವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದು ಪ್ರಮುಖವಾದ ವಿಷಯವೇ ಆಗಿದೆ. ಇದು ಮರಳಿನ ವಿಷಯ. ಪ್ರಮುಖವಾದಂತಹ ವಿಷಯ. ಕಳೆದ ಆರೇಳು ವರ್ಷಗಳಿಂದ ಮರಳಿನ ವಿಷಯದಲ್ಲಿ ನಡೆದಿರತಕ್ಕಂಥ ನಡೆಯುತ್ತಿರತಕ್ಕಂಥ ಅಕ್ರಮಗಳು ಹೊರಗೆ ಬರಬೇಕಾದರೆ ಸದನ ಸಮಿತಿ ರಚನೆಯಾಗಲೆಬೇಕಾಗುತ್ತದೆ. ಅಕ್ರಮ ಮರಳುಗಾರಿಕೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಹೊಸ ಸರ್ಕಾರ ಬಂದಮೇಲೂ ಕೂಡ ಕಳೆದ ಒಂದು ವರ್ಷದಿಂದ ನಾವು ನೋಡುತ್ತಿದ್ದೇವೆ.

ಅಧ್ಯಕ್ಷರು: ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತೇನೆ. ಈ ಮಧ್ಯೆ ಮಾನ್ಯ ಮಂತ್ರಿಗಳನ್ನು ಮತ್ತು ತಮ್ಮನ್ನು ಕರೆದು ಈ ಬಗ್ಗೆ ಮಾತನಾಡುತ್ತೇನೆ.

(ಸದನವು ಸಂಜೆ 5 ಗಂಟೆ 55 ನಿಮಿಷಕ್ಕೆ ಹತ್ತು ನಿಮಿಷಗಳ ಕಾಲ ಮುಂದೂಡಲಾಯಿತು)

(ಸದನವು ಸಾಯಂಕಾಲ 6 ಗಂಟೆ 57 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪೀಠವನ್ನಲಂಕರಿಸಿದ್ದರು)

(ಹಂತದಲ್ಲಿ ಜೆಡಿ(ಎಸ್) ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು: ದಯವಿಟ್ಟು ತಮ್ಮ ಸೀಟ್‌ಗೆ ಹೋಗ್ರಿ. ಈಗ ಅವರು ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈಗ ನಡೆದ ಮಾತುಕತೆ ಪ್ರಕಾರ ಅವರು announce ಮಾಡಲಿ. ಎಲ್ಲರೂ ಕೂಡಿ ಮಾತುಕತೆ ಮಾಡಿ ಇದಕ್ಕೊಂದು ಪರಿಹಾರ ಹೇಳಿಬಿಡಿ.

ಅಧ್ಯಕ್ಷರು: ಇದಕ್ಕೆ ಏನೋ ಒಂದು settle ಆಗಿದೆ. ಈಗ ಆ ಬಗ್ಗೆ ಮಾನ್ಯ ಕಾನೂನು ಸಚಿವರು ಬಂದು ಹೇಳುತ್ತಾರೆ. ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್: ಈಗ ನಡೆದ ಮಾತುಕತೆಯ ಪ್ರಕಾರ ಅದು ಏನು ಎಂಬುದನ್ನು ಅವರು announce ಮಾಡಿದರೆ ಒಳ್ಳೆಯದು. ಮಾನ್ಯ ಜಯಚಂದ್ರರವರು ಇನ್ನೂ ಬರಲಿಲ್ಲ.

ಅಧ್ಯಕ್ಷರು: ಜಯಚಂದ್ರರವರು ಬಂದರು.

ಶ್ರೀ ಜಗದೀಶ್ ಶೆಟ್ಟರ್: ನಾವು ಇದರ ಸಲುವಾಗಿ ಸಭಾತ್ಯಾಗ ಮಾಡಿದ್ದೆವು. ತಾವು ನಮ್ಮನ್ನು ಕರೆದು ಮಾತುಕತೆ ಮಾಡಿದಿರಿ. ಸರಕಾರ ಇದಕ್ಕೆ ಏನಾದರೂ ದಾರಿ ಹುಡುಕಿ ಖಾಯಂ ಆದಂಥ ಪರಿಹಾರ ಹುಡುಕಬೇಕಾಗಿದೆ. ಇದು ತಾತ್ಕಾಲಿಕ ಅಲ್ಲ, ಇದಕ್ಕೆ ಖಾಯಂ ಆದಂಥ ಪರಿಹಾರ ಹುಡುಕಬೇಕು, ಇದಕ್ಕೆ ಒಂದು ಅಧ್ಯಯನ ಆಗಬೇಕು. ಆ ದೃಷ್ಟಿಯಿಂದ ಸರ್ಕಾರ ತಕ್ಷಣ ಇದರ ಬಗ್ಗೆ ಹೇಳಿಕೆ ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಇದರ ಬಗ್ಗೆ ಪ್ರತಿ ಸಲ ಚರ್ಚೆ ಮಾಡುತ್ತೇವೆ. ಇದಕ್ಕೊಂದು ಸಮಿತಿ ಮಾಡಿ ಖಾಯಂ ಆದಂಥ ಪರಿಹಾರ ಹುಡುಕುವಂಥದ್ದು ಆಗಬೇಕು. ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಒಂದು ಸಮಿತಿ ಮಾಡಿ ಇದಕ್ಕೆ ಖಾಯಂ ಆದಂಥ ಪರಿಹಾರ ಹುಡುಕುವಂಥದ್ದು ಆಗಬೇಕು. ಸರಕಾರ ಇದರ ಬಗ್ಗೆ ನಿರ್ಧಾರ ಕೈಗೊಳ್ಳಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ಈಗ ತಮ್ಮ ನಿರ್ಧಾರ.

ಅಧ್ಯಕ್ಷರು: ಆಯಿತು ಬಿಡಿ. ಈಗ ಅವರು ಹೇಳುತ್ತಾರೆ. ಜಯಚಂದ್ರರವರೇ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ಅಧ್ಯಯನ ಮಾಡಿಕೊಂಡು ಇದಕ್ಕೆ ಒಂದು ಖಾಯಂ ಆದಂಥ ಪರಿಹಾರ ಹುಡುಕಬೇಕು. ಅವರು ಹೇಳಲಿ.

ಶ್ರೀ ಹೆಚ್.ಡಿ. ರೇವಣ್ಣ: ನಮ್ಮದು ಗಮನ ಸೆಳೆಯುವ ಸೂಚನೆ ಇದೆ, ದಯಮಾಡಿ ಅವಕಾಶ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮರಳಿನ ಬಗ್ಗೆ ವ್ಯಾಪಕವಾಗಿ ಅತ್ಯಂತ ಗಂಭೀರವಾಗಿ ಚರ್ಚೆಯಾಗಿ ಒಂದು ಶಾಶ್ವತವಾದ ಪರಿಹಾರ ಕಂಡು ಹಿಡಿಯಬೇಕು. ಇದರಲ್ಲಿರತಕ್ಕಂಥ ಕಾನೂನಾತ್ಮಕವಾಗಿ ಮತ್ತು ಆಡಳಿತಾತ್ಮಕವಾಗಿರತಕ್ಕಂಥ ತೊಂದರೆಗಳೇನು, ಅದನ್ನು ಯಾವ ರೀತಿಯಾಗಿ ಸರಿಪಡಿಸಲಿಕ್ಕೆ ಸಾಧ್ಯ ಎನ್ನತಕ್ಕಂಥ ಹಿನ್ನಲೆಯಲ್ಲಿ ಮತ್ತು ನೆರೆ ರಾಜ್ಯಗಳಲ್ಲಿರತಕ್ಕಂಥ ಕಾನೂನುಗಳು ಮತ್ತು ನಮ್ಮಲ್ಲಿರತಕ್ಕಂಥ ಕಾನೂನುಗಳಲ್ಲಿನ ವ್ಯತ್ಯಾಸ ಯಾವ ರೀತಿಯಾಗಿ ಸರಿಪಡಿಸಬಹುದು ಎನ್ನುವುದರ ಬಗ್ಗೆ ಮತ್ತು ಅದನ್ನು ಹೇಗೆ ಜನ ಸಾಮಾನ್ಯರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ಮರಳು ಲಭ್ಯವಾಗಬೇಕು. ಹಾಗೆಯೇ ಫಿಲ್ಟರ್ ಮರಳು ಎನ್ನತಕ್ಕಂಥ ದಂಧೆ ಶಾಶ್ವತವಾಗಿ ನಿಲ್ಲಬೇಕು. ಏಕೆಂದರೆ, ಫಿಲ್ಟರ್ ಮರಳಿನಿಂದ ಕಟ್ಟಡಗಳು ಸುಮಾರು 25 ವರ್ಷಗಳ ನಂತರ ಹಾಳಾಗಿ ಹೋಗುತ್ತವೆ. ಜನರಿಗೆ ಫಿಲ್ಟರ್ ಮರಳು ಮತ್ತು ಸಾಮಾನ್ಯ ಮರಳಿನ ಬಗ್ಗೆ ಗೊತ್ತಾಗುವುದಿಲ್ಲ. ಅದೂ ಸಹ ಮರಳು ಎಂದು ಫಿಲ್ಟರ್ ಮರಳನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಪರಿಸರಕ್ಕೆ ಹಾನಿ ಆಗುತ್ತಿದೆ. ನಾವು ಹಿಂದೆ ಕ್ರಷರ್ಸ್ ಮತ್ತು ಮರಳಿನ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಒಂದು affidavit ಅನ್ನು file ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಸೂಕ್ತವಾಗುವಂತಹ ಸಲಹೆ ಮಾಡುವುದಕ್ಕೋಸ್ಕರ ಒಂದು study team

ಮಾಡಿ ಸರ್ಕಾರಕ್ಕೆ ಸಲಹೆ ಮಾಡುವ ಸಲುವಾಗಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು study team ಅನ್ನು ಮಾಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಇದಕ್ಕೆ ಆದಷ್ಟು ಬೇಗ ಒಂದು terms conditions ಮಾಡಲಾಗುತ್ತದೆ, ಮತ್ತೆ ಅದಕ್ಕೆ ಯಾರನ್ನು ನೇಮಕ ಮಾಡಬೇಕೆಂಬ ತೀರ್ಮಾನವನ್ನು ತಮ್ಮ ವಿವೇಚನೆಗೆ ಬಿಡುತ್ತೇವೆ. Terms of reference ಹೇಗಿರಬೇಕೆಂಬುದನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು: Ok. ದಯವಿಟ್ಟು ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಾಹರಗಳು ಹಾಗೂ ಪಶುಸಂಗೋಪನೆ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ಬಾರ್ಡರ್‌ನಲ್ಲಿ ಆಗಿರತಕ್ಕಂಥ ವಿಚಾರಗಳ ಬಗ್ಗೆ COD enquiry ಮಾಡುವುದಕ್ಕೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಅದರ ಬಗ್ಗೆ ಕೂಡ ತನಿಖೆ ಮಾಡುತ್ತೇವೆ.

ಅಧ್ಯಕ್ಷರು: ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ.

(ಈ ಹಂತದಲ್ಲಿ ಜೆ.ಡಿ.ಎಸ್. ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ಮರಳಿದರು)

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ: ಮಾನ್ಯ ಸಚಿವರೇ, ಟ್ರಾಕ್ಟರ್‌ನಲ್ಲಿ ತೆಗೆದುಕೊಂಡು ಹೋಗುವವರಿಗೆ ಅನುಮತಿ ಕೊಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಾಹರಗಳು ಹಾಗೂ ಪಶುಸಂಗೋಪನೆ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಿದ್ದಾರೆ. ಕೆಲವೇ ದಿವಸಗಳಲ್ಲಿ ಎಲ್ಲಾ ಜಿಲ್ಲಾಡಳಿತದ ಡೆಪ್ಯುಟಿ ಕಮಿಷನರ್ ಮತ್ತು ಎಸ್.ಪಿ. ಗಳನ್ನು ಕರೆದು ಲೋಕಲ್‌ನಲ್ಲಿ ದೇವಸ್ಥಾನಗಳಿಗೆ ಮತ್ತು ಸ್ವಂತ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ತೊಂದರೆ ಆಗದ ರೀತಿಯಲ್ಲಿ ಮತ್ತು ಯಾವುದೇ

ರೀತಿಯ ಕಿರುಕುಳ ಆಗದ ರೀತಿಯಲ್ಲಿ ನಿರ್ವಹಿಸಬೇಕೆಂಬ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಸಚಿವರೇ, ಸರ್ಕಾರಿ ಕೆಲಸಗಳಿಗೆ ಯಾವುದೇ ರೀತಿಯ ತೊಂದರೆ ಆಗಬಾರದು.

ಶ್ರೀ ಟಿ.ಬಿ. ಜಯಚಂದ್ರ: ಸರ್ಕಾರದ ಕಟ್ಟಡಗಳಿಗೆ ಸರ್ಕಾರಿ ರೂಲ್ಸ್‌ನಲ್ಲಿಯೇ ಅವಕಾಶ ಇದೆ ಮತ್ತೆ ನೇರವಾಗಿ ಅದನ್ನು reserve ಮಾಡುವುದಕ್ಕೆ ಇವತ್ತೀನ ರೂಲ್ಸ್‌ನಲ್ಲಿಯೂ ಸಹ ಅವಕಾಶ ಇದೆ. ನಿಮಗೆ ಯಾವುದಾದರೂ ಕಟ್ಟಡ ಬೇಕೆಂದಾಗ ನಾವು ಇಂಥಹ ಕಡೆ ಮರಳು ತೆಗೆಯುತ್ತೇವೆಂದು ಹೇಳಿದಾಗ ನೇರವಾಗಿ ಅನುಮತಿ ಕೊಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರ್‌ರವರಿಗೆ ಕೊಟ್ಟಿದ್ದೇವೆ. ಅದನ್ನು ಉಪಯೋಗಿಸಿಕೊಳ್ಳಬೇಕಷ್ಟೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸ್ಟೋನ್ ಕ್ರಷರ್ ಸಹ ಇದರಲ್ಲಿ ಸೇರಿಸಿದರೆ ಒಳ್ಳೆಯದು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು study team ಮಾಡತಕ್ಕಂಥದು not only for sand or crushers, for entire minor minerals.

ಅಧ್ಯಕ್ಷರು: ಆಯಿತು. ಈಗ ಮುಂದಿನ ವಿಷಯ ತೆಗೆದುಕೊಳ್ಳುತ್ತೇನೆ. ಮಾನ್ಯ ಸುರೇಶ್ ಗೌಡರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ದೇವಸ್ಥಾನ ವಿಷಯದ ಬಗ್ಗೆ ಗಮನ ಸೆಳೆಯುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ರೇವಣ್ಣರವರೇ, please ಈಗ ಆಗುವುದಿಲ್ಲ. ಬೇರೆ ರೂಪದಲ್ಲಿ ಅದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಹೇಳಿದ್ದಾರೆ. ಆದ್ದರಿಂದ, ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ನೀವು ನನಗೆ ಆ ರೀತಿಯಾಗಿ dictate ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ರೇವಣ್ಣರವರೇ, don't misuse. ಇದು ಆಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: No, ಆಗುವುದಿಲ್ಲ. ಮಾನ್ಯ ಸುರೇಶ್ ಗೌಡರೆ, ತಾವು ಮಾತನಾಡಿ.

4) ವಿಷಯ : ತುಮಕೂರು ಮಹಾನಗರ ಪಾಲಿಕೆಯ ತುಮಕೂರು ತಾಲ್ಲೂಕಿನ ಬೆಳ್ಳಾವಿ ಹೋಬಳಿಯ ಅಜ್ಜಗೊಂಡಹಳ್ಳಿ ಗ್ರಾಮದ ಸರ್ವೆ ನಂಬರ್ 56/2,57,59,60,63/1 ಜಮೀನುಗಳಲ್ಲಿ ಕಾನೂನು ಮತ್ತು ನಿಯಮಾವಳಿ ಉಲ್ಲಂಘಿಸಿ ಕಸ ಸಂಗ್ರಹಣೆ ಮಾಡಲು ಪ್ರಾರಂಭಿಸಿರುವ ಬಗ್ಗೆ.

****

ಶ್ರೀ ಬಿ. ಸುರೇಶ್‌ಗೌಡ (ತುಮಕೂರು ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರಕ್ಕೆ ಸೇರಿದ ಜಾಗದಲ್ಲಿ ತುಮಕೂರು ಮಹಾನಗರ ಪಾಲಿಕೆಯವರು ಕಾನೂನು ಬಾಹಿರವಾಗಿ ಕಸವನ್ನು ವಿಲೇವಾರಿ ಮಾಡುತ್ತಿರುವ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. 6 ತಿಂಗಳ ಹಿಂದೆ ಜಿಲ್ಲಾ ಸಚಿವರಾಗಿರುವಂತಹ ಮಾನ್ಯ ಜಯಚಂದ್ರರವರು ಮತ್ತು ನಗರಾಭಿವೃದ್ಧಿ ಸಚಿವರಾಗಿರುವಂಥ ಮಾನ್ಯ ವಿನಯಕುಮಾರ್ ಸೊರಕಿಯವರು ಮತ್ತು ನಾವು ಹಾಗೂ ಪಕ್ಕದ ಕ್ಷೇತ್ರದವರಾಗಿರುವ ಮಾನ್ಯ ಸುಧಾಕರಲಾಲ್‌ರವರು ಹಾಗೂ ಮಾನ್ಯ ರಫೀಕ್ ಅಹಮದ್‌ರವರು ಮತ್ತು ಕೆಪಿಸಿಸಿ ಅಧ್ಯಕ್ಷರಾದ ಡಾ॥ ಪರಮೇಶ್ವರ್‌ರವರೆಲ್ಲರೂ ಸೇರಿ 6 ತಿಂಗಳ ಹಿಂದೆ